ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 26 ಬುಧವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 218 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಅಯೋಧ್ಯೆ ರಾಮಮಂದಿರ ನಿರ್ಮಾಣ ಪೂರ್ಣ

ರಾಮ–ಸೀತೆ ವಿವಾಹ ಪರ್ವದಂದೇ ದೇಗುಲದ ಶಿಖರದ ಮೇಲೆ ಧ್ವಜಾರೋಹಣ ನೆರವೇರಿಸಿದ ಪ್ರಧಾನಿ ನರೇಂದ್ರ ಮೋದಿ




ಅಯೋಧ್ಯೆ: ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಪ್ರಧಾನಮಂತ್ರಿ ನರೇಂದ್ರ ಮೋದಿಯವರು ದೇಗುಲದ ಶಿಖರದ ಮೇಲೆ 10 ಅಡಿ ಎತ್ತರದ ಭಗವಾಧ್ವಜವನ್ನು ಹಾರಿಸಿದ್ದಾರೆ.

ಧ್ವಜಾರೋಹಣ ಸಮಯದಲ್ಲಿ ಪ್ರಧಾನಿ ಮೋದಿ ಅವರಿಗೆ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್, ಉತ್ತರ ಪ್ರದೇಶ ರಾಜ್ಯಪಾಲೆ ಆನಂದಿಬೆನ್ ಪಟೇಲ್ ಮತ್ತು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಸಾಥ್ ನೀಡಿದ್ದಾರೆ.


ಹಿಂದೂ ಸಂಪ್ರದಾಯದಲ್ಲಿ ಶುಭವೆಂದು ಪರಿಗಣಿಸಲಾದ 'ಅಭಿಜಿತ್ ಮುಹೂರ್ತ'ದ ಸಮಯದಲ್ಲಿ ಧ್ವಜಾರೋಹಣ ನೆರವೇರಿಸಲಾಗಿದೆ. ಈ ದಿನ ಮಾರ್ಗಶಿರ ಶುಕ್ಲ ಪಂಚಮಿ ತಿಥಿಯಾಗಿದ್ದು, ಇದೇ ದಿನ ಶ್ರೀರಾಮ ಮತ್ತು ಸೀತೆಯರ ವಿವಾಹವಾಗಿತ್ತು.

ಅಯೋಧ್ಯೆಯಲ್ಲಿ 48 ಗಂಟೆಗಳ ಕಾಲ ಅಖಂಡ ತಪಸು ಕೈಗೊಂಡ ಸಿಖ್ ಗುರು ತೇಗಬಹದ್ದೂರರ ಬಲಿದಾನ ದಿನವೂ ಇವತ್ತೇ ಬಂದಿದೆ. ಹಾಗಾಗಿ ಇದೇ ದಿನ ಈ ಮಂಗಳ ಕಾರ್ಯವನ್ನು ಹಮ್ಮಿಕೊಳ್ಳಲಾಗಿದೆ ಎಂದು ಪಿಎಂಒ ತಿಳಿಸಿದೆ. ಇನ್ನು ಶಿಖರದ ಮೇಲೆ ಸ್ಥಾಪಿಸಲಾದ 42 ಅಡಿ ಎತ್ತರದ ಧ್ವಜಸ್ತಂಭವನ್ನು 360 ಡಿಗ್ರಿ ತಿರುಗುವಂತೆ ವಿನ್ಯಾಸಗೊಳಿಸಲಾಗಿದೆ. ಧ್ವಜವು ಕೇಸರಿ ಬಣ್ಣ ಹಾಗೂ ತ್ರಿಕೋನಾಕೃತಿಯಲ್ಲಿದೆ. 10 ಅಡಿ ಎತ್ತರ ಮತ್ತು 20 ಅಡಿ ಉದ್ದವಿದೆ. ಇದರ ಮೇಲೆ ಸೂರ್ಯ, 'ಓಂ' ಹಾಗೂ ಕೋವಿದಾರ ಮರವನ್ನು ಚಿತ್ರಿಸಲಾಗಿದೆ. ಸೂರ್ಯನ ಚಿತ್ರ ರಾಮನ ವಂಶವಾದ ಸೂರ್ಯವಂಶವನ್ನು ಸೂಚಿಸುತ್ತದೆ. 'ಓಂ' ಶುಭಸೂಚಕವಾಗಿದ್ದು,

■ 6ನೇ ಪುಟಕ್ಕೆ



ಇದು ಕೇವಲ ಧ್ವಜವಲ್ಲ, ಭಾರತೀಯ ನಾಗರಿಕತೆಯ ಪುನರ್ ಜಾಗೃತಿಯ ಧ್ವಜ; ಶತಮಾನಗಳಷ್ಟು ಹಳೆಯ ಗಾಯ ಈಗ ಮಾಯುತ್ತಿದೆ: ಪ್ರಧಾನಿ ಮೋದಿ



ನವದೆಹಲಿ: ಇದು ಕೇವಲ ಧ್ವಜವಲ್ಲ ಭಾರತೀಯ ನಾಗರಿಕತೆಯ ಪುನರ್ ಜಾಗೃತಿಯ ಧ್ವಜ, ಶತಮಾನಗಳಷ್ಟು ಹಳೆಯ ಗಾಯಗಳು ಈಗ ವಾಸಿಯಾಗುತ್ತಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಮಂಗಳವಾರ ಹೇಳಿದ್ದಾರೆ.

ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಇದರ ಬೆನ್ನಲ್ಲೇ ದೇಗುಲದ ಶಿಖರದ ಮೇಲೆ 10 ಅಡಿ ಎತ್ತರದ ಭಗವಾಧ್ವಜವನ್ನು ಹಾರಿಸಿ ಮಾತನಾಡಿದ ಅವರು, ಶತಮಾನಗಳಷ್ಟು ಹಳೆಯದಾದ ಗಾಯಗಳು ವಾಸಿಯಾಗುತ್ತಿದ್ದಂತೆ ಪ್ರತಿಯೊಬ್ಬ ರಾಮ ಭಕ್ತನ ಹೃದಯವು ಆಳವಾದ ತೃಪ್ತಿ, ಅಪಾರ ಕೃತಜ್ಞತೆ ಮತ್ತು ದೈವಿಕ ಸಂತೋಷದಿಂದ ತುಂಬಿರುತ್ತದೆ ಎಂದು ಹೇಳಿದರು.

ಈ ಧರ್ಮ ಧ್ವಜವು ಕೇವಲ ಧ್ವಜವಲ್ಲ. ಇದು ಭಾರತೀಯ ನಾಗರಿಕತೆಯ ಪುನರ್ ಜಾಗೃತಿಯ ಧ್ವಜವಾಗಿದೆ. 500 ವರ್ಷಗಳ ಹಳೆಯ ಸಂಕಲ್ಪದ ನೆರವೇರಿದ್ದು, ಧ್ವಜವು ಭಗವಾನ್ ಶ್ರೀ ರಾಮನ ಆದರ್ಶಗಳನ್ನು ಸಾಕಾರಗೊಳಿಸಿತು.

■ 6ನೇ ಪುಟಕ್ಕೆ

ಅಧಿಕಾರ ಹಸ್ತಾಂತರ ವಿಚಾರ; ನ. 28ಕ್ಕೆ ವಿದೇಶದಿಂದ ಸೋನಿಯಾ ವಾಪಸ್

ಸಂಸತ್ ಅಧಿವೇಶನಕ್ಕೆ ಮುನ್ನ ರಾಜ್ಯದ ಬಿಕ್ಕಟ್ಟು ಪರಿಹಾರ


● ನ. 28ರ ನಂತರ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್‌ಗೆ ದೆಹಲಿಗೆ ಬುಲಾವ್ ಸಾಧ್ಯತೆ ● ರಾಜ್ಯ ನಾಯಕರ ಅಭಿಪ್ರಾಯ ಪಡೆಯುತ್ತಿರುವ ರಾಹುಲ್ ಗಾಂಧಿ


ಸೋನಿಯಾಗಾಂಧಿ


ರಾಹುಲ್‌ಗಾಂಧಿ


ಮಲ್ಲಿಕಾರ್ಜುನ ಖರ್ಗೆ


ಸಿದ್ದರಾಮಯ್ಯ


ಡಿ.ಕೆ. ಶಿವಕುಮಾರ್

ಬೆಂಗಳೂರು, ನ. 25(ಕೆಎಂಶಿ)– ಸಂಸತ್ ಅಧಿವೇಶನಕ್ಕೆ ಮುನ್ನ ಅಧಿಕಾರ ಹಸ್ತಾಂತರ ಗೊಂದಲ ನಿವಾರಣೆಗೆ ಕಾಂಗ್ರೆಸ್ ವರಿಷ್ಠರು ಮುಂದಾಗುವ ಸಾಧ್ಯತೆ ಇದೆ. ವಿದೇಶದಲ್ಲಿರುವ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಗಾಂಧಿ ನ. 28ಕ್ಕೆ ದೇಶಕ್ಕೆ ಮರಳಲಿದ್ದು, ಅಲ್ಲಿವರೆಗೆ ಯಾವುದೇ ನಿರ್ಧಾರಗಳಾಗುವುದು ಕಷ್ಟಸಾಧ್ಯವಿದೆ.

ಸೋನಿಯಾ ಗಾಂಧಿ ಅವರು ದೇಶಕ್ಕೆ ವಾಪಸ್ಸಾದ ಬಳಿಕವೇ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರುಗಳಿಗೆ ದೆಹಲಿಗೆ ಬರುವಂತೆ ಸಂದೇಶ ರವಾನಿಸಲಿದ್ದಾರೆ.

ಅಧಿಕಾರ ಹಸ್ತಾಂತರ ಗೊಂದಲಗಳಿಗೆ ಮುಕ್ತಾಯ ಹಾಡಲು ಪಕ್ಷದ ವರಿಷ್ಠರು ಮಧ್ಯಪ್ರವೇಶ ಮಾಡಬೇಕೆಂದು ಸಿದ್ದರಾಮಯ್ಯ ಇಂದು ಮನವಿ ಮಾಡಿದ್ದರು.

ಡಿಸೆಂಬರ್ 1ರಿಂದ ಸಂಸತ್ ಅಧಿವೇಶನ ಆರಂಭಗೊಳ್ಳಲಿದ್ದು, ಅದಕ್ಕೂ ಮುನ್ನವೇ ಕರ್ನಾಟಕ ಕಾಂಗ್ರೆಸ್‌ನಲ್ಲಿನ ಗೊಂದಲ ನಿವಾರಿಸಲು ಈಗ ವರಿಷ್ಠರು ತೀರ್ಮಾನಿಸಿದ್ದಾರೆ. ರಾಜ್ಯ ಪ್ರವಾಸದಿಂದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ದೆಹಲಿಗೆ ಹಿಂತಿರುಗುತ್ತಿದ್ದಂತೆ ರಾಹುಲ್ ಗಾಂಧಿ, ಪಕ್ಷದ ರಾಜಕೀಯ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಹಾಗೂ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರನ್ನು ಸಂಪರ್ಕಿಸಿ, ಚರ್ಚಿಸಿದ್ದಾರೆ.

■ 6ನೇ ಪುಟಕ್ಕೆ

ಪಕ್ಷ ಅಧಿಕಾರಕ್ಕೆ ಬಂದಾಗ ನೀವು ನುಡಿದಂತೆ ನಡೆದು ನನಗೆ ಸಿಎಂ ಸ್ಥಾನ ಕೊಡಿ

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮನವಿ

ಬೆಂಗಳೂರು, ನ. 25(ಕೆಎಂಶಿ)– ಪಕ್ಷ ಅಧಿಕಾರಕ್ಕೆ ಬರುವ ಸಂದರ್ಭದಲ್ಲಿ ನೀವು ನುಡಿದಂತೆ ನನಗೆ ಮುಖ್ಯಮಂತ್ರಿ ಸ್ಥಾನ ಕೊಡಿಸಿ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಮತ್ತೊಮ್ಮೆ ಮನವಿ ಮಾಡಿದ್ದಾರೆ.

ರಾಜ್ಯ ಪ್ರವಾಸ ಮುಗಿಸಿ ಖರ್ಗೆ ದೆಹಲಿಗೆ ತೆರಳುವ ಸಂದರ್ಭದಲ್ಲಿ ಶಿವಕುಮಾರ್ ಸಹ ಅವರ ಜೊತೆಯಲ್ಲೇ ಕಾರಿನಲ್ಲಿ ವಿಮಾನ ನಿಲ್ದಾಣದವರೆಗೂ ತೆರಳಿ ಅಧಿಕಾರ ಹಸ್ತಾಂತರ ಕುರಿತಂತೆ ಚರ್ಚಿಸಿದರು. ಪಕ್ಷಕ್ಕಾಗಿ ದುಡಿದ ನಿಷ್ಠಾವಂತರನ್ನು ವರಿಷ್ಠರು ಮಾನ್ಯ ಮಾಡದಿದ್ದರೆ, ನನ್ನನ್ನೂ ಸೇರಿದಂತೆ ಕಾರ್ಯಕರ್ತರಲ್ಲಿ ತಪ್ಪು ಭಾವನೆ ಮೂಡುತ್ತದೆ. ಅಧಿಕಾರಕ್ಕಾಗಿ ನಾನೇನು ಶಕ್ತಿ ಪ್ರದರ್ಶನ ಮಾಡುತ್ತಿಲ್ಲ, **ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ನನಗೆ ಶಾಸಕರ ಬೆಂಬಲ ಇಲ್ಲ ಎಂದಿದ್ದರು.**

ಆದರೆ, ಇಂದು ಸ್ವಯಂಪ್ರೇರಿತರಾಗಿ ಶಾಸಕರು ನಿಮ್ಮ ಮನವೊಲಿಸಿ, ನನಗೆ ಅಧಿಕಾರ ಕೊಡಿಸಲು ಸಭೆಗಳನ್ನು ನಡೆಸುವುದರ ಜೊತೆಗೆ ದೆಹಲಿ ಯಾತ್ರೆ ಕೈಗೊಂಡಿದ್ದಾರೆ.

ಅವರ್‍ಯಾರೂ ಬಹಿರಂಗ ಹೇಳಿಕೆ ನೀಡುತ್ತಿಲ್ಲ, ನಿಮ್ಮಲ್ಲಿ ಮನವಿ ಮಾಡಲು ಬರುತ್ತಿದ್ದಾರೆ. ಅವರನ್ನು ತಡೆಯುವ ಶಕ್ತಿ ನನಗಾಗಲೀ, ಮುಖ್ಯಮಂತ್ರಿ ಅವರಿಗಾಗಲೀ ಇಲ್ಲ.

■ 6ನೇ ಪುಟಕ್ಕೆ

ಸರಗೂರು ಅಂಚೆ ಕಚೇರಿಯಲ್ಲಿ ಕೋಟ್ಯಾಂತರ ರೂ. ಜನರ ಹಣ ಗುಳುಂ ಪ್ರಕರಣ: ಸಿಬಿಐ ತನಿಖೆ

ಪ್ರತಿಭಟನಾ ಸ್ಥಳಕ್ಕೆ ಅಂಚೆ ಇಲಾಖೆಯ ಎಎಸ್‌ಪಿ, ಎಎಸ್‌ಪಿಆರ್ ಭೇಟಿ; ಅಧಿಕೃತ ಘೋಷಣೆ


ಅಂಚೆ ಇಲಾಖೆ ಅಧಿಕಾರಿಗಳು ಖಾತೆದಾರರೊಂದಿಗೆ ಮಾತನಾಡುತ್ತಿರುವುದು.

ಸರಗೂರು, ನ.25– ಸರಗೂರು ತಾಲೂಕಿನ ಅಂಚೆ ಕಚೇರಿಯಲ್ಲಿ ಖಾತೆದಾರರ ಕೋಟ್ಯಾಂತರ ರೂ. ಗುಳುಂ ಆಗಿರುವ ಪ್ರಕರಣದ ತನಿಖೆಯನ್ನು ಸಿಬಿಐ ತನಿಖೆಗೆ ಒಪ್ಪಿಸಲಾಗಿದೆ ಎಂದು ಮೈಸೂರು ಜಿಲ್ಲಾ ಅಸಿಸ್ಟೆಂಟ್ ಸೂಪರಿಟೆಂಡೆಂಟ್ ಆಫ್ ಪೋಸ್ಟ್ ಆಫೀಸರ್(ಎಎಸ್‌ಪಿ) ಮತ್ತು ಎಎಸ್‌ಪಿಆರ್(ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಆಫ್ ಪೋಸ್ಟ್ ರೆಸಿಡೆನ್ಶಿಯಲ್) ಚೇತನ್ ತಿಳಿಸಿದ್ದಾರೆ.

ನಕಲಿ ಸಹಿ ಮಾಡಿ, ಅಂಚೆ ಖಾತೆದಾರರ ಕೋಟ್ಯಾಂತರ ರೂ. ಲಪಟಾಯಿಸಿರುವ ಸರಗೂರು ಅಂಚೆ ಕಚೇರಿಯ ಸಿಬ್ಬಂದಿ ಮತ್ತು ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವುದರೊಂದಿಗೆ ಖಾತೆದಾರರಿಗೆ ಹಣ ಹಿಂತಿರುಗಿಸುವಂತೆ ಆಗ್ರಹಿಸಿ ಎರಡು ದಿನಗಳಿಂದ

■ 6ನೇ ಪುಟಕ್ಕೆ

ನಿವೃತ್ತ ಪೋಸ್ಟ್‌ಮ್ಯಾನ್ ಪತ್ನಿ ಖಾತೆಗೂ ಕನ್ನ

ಸರಗೂರು ಅಂಚೆ ಕಚೇರಿಯಲ್ಲಿ ಖಾತೆದಾರರ ಖಾತೆಗೆ ಕನ್ನ ಹಾಕಿ ಕೋಟ್ಯಾಂತರ ರೂ. ಗುಳುಂ ಮಾಡಿರುವ ಸರಗೂರು ಅಂಚೆ ಸಿಬ್ಬಂದಿ ಮತ್ತು ಅಧಿಕಾರಿಗಳು ನಿವೃತ್ತ ಪೋಸ್ಟ್ ಮ್ಯಾನ್ ಪತ್ನಿ ಖಾತೆಗೂ ಕನ್ನ ಹಾಕಿದ್ದಾರೆ.

ಅಂಚೆ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದ ದಾಸೇಗೌಡರು ತಮ್ಮ ಪತ್ನಿ ಹೆಸರಿನಲ್ಲಿ ಸರಗೂರು ಅಂಚೆ ಕಚೇರಿಯಲ್ಲಿ 2 ಲಕ್ಷ ರೂ.ಗಳನ್ನು ಠೇವಣಿ ಇಟ್ಟಿದ್ದರು. ಬಹಳಷ್ಟು ಖಾತೆದಾರರ ಹಣ ಲಪಟಾಯಿಸಿರುವ ಖದೀಮರು ನಿವೃತ್ತ ಪೋಸ್ಟ್ ಮ್ಯಾನ್ ಅವರ ಪತ್ನಿಯ ಖಾತೆಯಲ್ಲಿದ್ದ 2 ಲಕ್ಷ ರೂ.ಗಳನ್ನು ನಕಲಿ ಸಹಿ ಮಾಡಿ ದೋಚಿರುವುದು ಬೆಳಕಿಗೆ ಬಂದಿದೆ.

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸೈಬರ್ ಲ್ಯಾಬ್

ಮೈಸೂರಿನಲ್ಲಿ ಗೃಹ ಸಚಿವ ಡಾ.ಜಿ. ಪರಮೇಶ್ವರ್ ಮಾಹಿತಿ

■ ವಿದ್ಯಾವಂತರು, ನಿವೃತ್ತರೇ ಟಾರ್ಗೆಟ್ ಆಗಿದ್ದಾರೆ ■ ಸೈಬರ್ ಅಪರಾಧ ನಿಯಂತ್ರಣದ ಬಗ್ಗೆ ಪ್ರತಿ ಪೊಲೀಸ್ ಪೇದೆಗೆ ತರಬೇತಿ ■ ಶೀಘ್ರವೇ 900 ಪಿಎಸ್‌ಐಗಳು ಕರ್ತವ್ಯಕ್ಕೆ ಹಾಜರು ■ ಪೊಲೀಸರ ವರ್ಗಾವಣೆಯಲ್ಲಿ ಸಾಕಷ್ಟು ಸುಧಾರಣೆಯಾಗಿದೆ

ಮೈಸೂರು, ನ.25(ಜಿಎಲ್‌ಯು)– ರಾಜಧಾನಿ ಬೆಂಗಳೂರಿನಂತೆ ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲೂ ಸೈಬರ್ ಲ್ಯಾಬ್ ಸ್ಥಾಪಿಸಲಾಗುವುದು ಎಂದು ಗೃಹಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದರು.

ಮೈಸೂರಿನ ನಜರ್‌ಬಾದ್ ಪೊಲೀಸ್ ಠಾಣೆಗೆ ಇಂದು ದಿಢೀರ್ ಭೇಟಿ ನೀಡಿ ಅಲ್ಲಿನ ಕಾರ್ಯ ಚಟುವಟಿಕೆ ಪರಿಶೀಲನೆ ನಡೆಸಿದ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಸೈಬರ್ ಅಪರಾಧ ಪ್ರಕರಣ ತಡೆಗಟ್ಟುವ ನಿಟ್ಟಿನಲ್ಲಿ ಪ್ರತಿಯೊಬ್ಬ ಪೊಲೀಸ್ ಪೇದೆಗೂ ಸೈಬರ್ ಅಪರಾಧ ನಿಯಂತ್ರಣದ ಬಗ್ಗೆ ತರಬೇತಿ ನೀಡಲಾಗುವುದು. ಈ ಮೂಲಕ ಸೈಬರ್ ಅಪರಾಧ ತಡೆಗಟ್ಟಲು ಪರಿಣಾಮಕಾರಿ ಯೋಜನೆ ರೂಪಿಸಲಾಗಿದೆ ಎಂದು ಹೇಳಿದರು.


ಮೈಸೂರಿನ ಲಲಿತಮಹಲ್ ರಸ್ತೆಯ ಅಶ್ವಾರೋಹಿ ದಳ ಕಚೇರಿಗೆ ಗೃಹ ಸಚಿವ ಡಾ.ಪರಮೇಶ್ವರ್ ಅವರು ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಇತ್ತೀಚಿಗೆ ಸೈಬರ್ ಅಪರಾಧಗಳ ಸಂಖ್ಯೆ ಹೆಚ್ಚಾಗುತ್ತಿದೆ. ಬಹಳಷ್ಟು ಜನರು ಹಣ ಕಳೆದುಕೊಳ್ಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಹಣ ಕಳೆದುಕೊಂಡವರು ದೂರು ಕೊಟ್ಟ ಕೂಡಲೇ ಪ್ರಕರಣ ದಾಖಲಿಸಿ ಹಣ ವಾಪಸ್ಸು ಕೊಡಿಸುವ ಕುರಿತಂತೆ ಕಾರ್ಯಮಗ್ನರಾಗುವಂತೆ ಪೊಲೀಸರಿಗೆ ಸೂಚನೆ ನೀಡಿದ್ದೇನೆ ಎಂದು ಡಾ.ಪರಮೇಶ್ವರ್ ಮಾಹಿತಿ ನೀಡಿದರು.

ವಿದ್ಯಾವಂತರು ಹಾಗೂ ನಿವೃತ್ತಿದಾರರನ್ನು ಟಾರ್ಗೆಟ್ ಮಾಡಿದ್ದಾರೆ. ಬೆಂಗಳೂರಿನ ಪ್ರತಿಷ್ಠಿತ ಐಟಿ ಕಂಪನಿಯ ಹಿರಿಯ ಅಧಿಕಾರಿಯೊಬ್ಬರು ಒಂದು ವರ್ಷದ ಅವಧಿಯಲ್ಲಿ 35 ಕೋಟಿ ರೂಪಾಯಿ ಕಳೆದುಕೊಂಡಿದ್ದಾರೆ. ಇದರಿಂದ ಜನರು ಪಾಠ ಕಲಿತು, ಮೋಸ ಹೋಗದಂತೆ ಜಾಗ್ರತೆ ವಹಿಸಬೇಕು ಎಂದು ಸಲಹೆ ನೀಡಿದರು. ಆನ್‌ಲೈನ್ ವಂಚನೆಗೊಳಗಾದ ಕೂಡಲೇ ದೂರು ನೀಡಬೇಕು.

■ 6ನೇ ಪುಟಕ್ಕೆ

ನೋ ಕಾಮೆಂಟ್ಸ್

"ರಾಜ್ಯ ರಾಜಕೀಯ ಬೆಳವಣಿಗೆ ಬಗ್ಗೆ ನಾನು ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ, ನೋ ಕಾಮೆಂಟ್ಸ್ ಎಂದು ಗೃಹಸಚಿವ ಡಾ.ಪರಮೇಶ್ವರ್ ಸ್ಪಷ್ಟಪಡಿಸಿದರು. ಪ್ರಸಕ್ತ ರಾಜಕೀಯ ಬೆಳವಣಿಗೆ ಬಗ್ಗೆ ಬಹಳಷ್ಟು ಜನರು ಮಾತನಾಡಿದ್ದಾರೆ. ಆದ್ದರಿಂದ ನಾನು ಮಾತನಾಡುವುದು ಏನಿದೆ ಹೇಳಿ? ಎಂದು ಪ್ರಶ್ನಿಸಿದ ಡಾ.ಪರಮೇಶ್ವರ್, ಸದ್ಯಕ್ಕೆ ನಾನು ರಾಹುಲ್ ಗಾಂಧಿ ಭೇಟಿ ಮಾಡುವುದಿಲ್ಲ ಎಂದು ತಿಳಿಸಿದರು.

ಮೈಸೂರಲ್ಲಿ ಪೊಲೀಸ್ ಮ್ಯೂಸಿಯಂ

"ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ ನಡೆದು ಬಂದ ಹಾದಿಯನ್ನು ಸ್ಮರಿಸಿಕೊಳ್ಳುವುದರ ಜೊತೆಗೆ ಇಲಾಖೆಗೆ ಸಂಬಂಧಿಸಿದ ಅಪರೂಪದ ವಸ್ತುಗಳನ್ನು ಸಂರಕ್ಷಿಸಿಕೊಳ್ಳಬೇಕಿದೆ. ಈ ನಿಟ್ಟಿನಲ್ಲಿ ಮೈಸೂರಿನಲ್ಲಿ ಕರ್ನಾಟಕ ಪೊಲೀಸ್ ವಸ್ತು ಸಂಗ್ರಹಾಲಯ (ಮ್ಯೂಸಿಯಂ) ಸ್ಥಾಪಿಸಲಾಗುವುದು.

–ಡಾ.ಜಿ.ಪರಮೇಶ್ವರ್, *ಗೃಹ ಸಚಿವ*

ಮೈಸೂರಿನಲ್ಲಿ 5 ಕೋಟಿ ವಸೂಲಿ ಮಾಡಲಾಗಿದೆ

ಮೈಸೂರಿನಲ್ಲಿ ಸೈಬರ್ ಅಪರಾಧಗಳ ಸಂಖ್ಯೆ ಕಡಿಮೆಯಾಗಿದೆ ಎಂದು ಗೃಹಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದರು. ಮೈಸೂರಿನ ಜನರು ಸೈಬರ್ ಅಪರಾಧದಿಂದ ಕಳೆದ ವರ್ಷ 40 ಕೋಟಿ ರೂಪಾಯಿ ಕಳೆದುಕೊಂಡಿದ್ದರು. ಈ ಬಾರಿ 30 ಕೋಟಿ ಕಳೆದುಕೊಂಡಿದ್ದಾರೆ. ಈ ಮೂಲಕ ಹತ್ತು ಕೋಟಿ ರೂ. ವಂಚನೆ ಪ್ರಮಾಣ ಕಡಿಮೆಯಾಗಿದೆ. ಈ ಪ್ರಮಾಣ ಮತ್ತಷ್ಟು ಕಡಿಮೆಯಾಗಬೇಕಿದೆ ಎಂದರು.

ಮೈಸೂರಿನಲ್ಲಿ ಈಗ ಕಳೆದುಕೊಂಡಿರುವ 30 ಕೋಟಿಯಲ್ಲಿ ಸುಮಾರು 5 ಕೋಟಿ ರೂ.ಗಳನ್ನು ವಸೂಲಿ ಮಾಡಲಾಗಿದೆ. ಆದರೆ ಈ ಪ್ರಮಾಣ ಮತ್ತಷ್ಟು ಹೆಚ್ಚಾಗಬೇಕು ಎಂದು ಪೊಲೀಸರಿಗೆ ತಾಕೀತು ಮಾಡಿದ್ದೇನೆ ಎಂದು ಡಾ.ಪರಮೇಶ್ವರ್ ಹೇಳಿದರು.

ಮೈಸೂರಿನ ನಜರ್‌ಬಾದ್ ಪೊಲೀಸ್ ಠಾಣೆಗೆ ಬಹಳಷ್ಟು ದಿನಗಳಿಂದ ಭೇಟಿ ನೀಡಬೇಕು ಅಂದುಕೊಂಡಿದ್ದೆ. ಇದು ಮೈಸೂರಿನ ಹಳೆಯ ಪೊಲೀಸ್ ಠಾಣೆಗಳಲ್ಲಿ ಇದೂ ಒಂದಾಗಿದ್ದು, ಇಲ್ಲಿನ ಕಾರ್ಯವೈಖರಿ ಪರಿಶೀಲನೆ ನಡೆಸಿದ್ದೇನೆ ಎಂದರು. ದೂರುದಾರರ ಸಮಸ್ಯೆ ಆಲಿಸಿದ್ದೇನೆ. ಇಲ್ಲಿ ಕೆಲವು ನ್ಯೂನತೆಗಳಿದ್ದು, ಅದನ್ನು ಸರಿಪಡಿಸಿಕೊಳ್ಳುವಂತೆ ಸೂಚನೆ ನೀಡಿದ್ದೇನೆ ಎಂದು ಡಾ.ಪರಮೇಶ್ವರ್ ತಿಳಿಸಿದರು.

ಮೈಸೂರು ಮಿತ್ರ

ಎಫ್‌ಎಸ್‌ಎಸ್‌ಐ ಆದೇಶ ಹಿನ್ನೆಲೆ

ಒಆರ್‌ಎಸ್ ಮಾದರಿ ಸಂಗ್ರಹಿಸಿ ಪ್ರಯೋಗಾಲಯಕ್ಕೆ ರವಾನೆ



ಮೈಸೂರು, ನ.25(ಬಿಎಲ್‌ಯು)– ಒಆರ್‌ಎಸ್ ಹೆಸ್ರಿನ ಜ್ಯೂಸ್ ಹಾಗೂ ಎಲೆಕ್ಟ್ರೋಲೈಟ್‌ಗಳನ್ನು ಹಿಂಪಡೆಯಬೇಕು ಎಂದು ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ ರಾಜ್ಯ ಸರ್ಕಾರದ ಆಹಾರ ಆಯುಕ್ತರಿಗೆ ಆದೇಶ ನೀಡಿದೆ. ಒಆರ್‌ಎಸ್ ಹೆಸ್ರಿನ ಜ್ಯೂಸ್ ಹಾಗೂ ಎಲೆಕ್ಟ್ರೋಲೈಟ್ ಹಿಂಪಡೆಯುವ ಮೊದಲು ಮೈಸೂರಿನಲ್ಲಿ ಅದರ ಮಾದರಿಯನ್ನು ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಲಾಗುತ್ತಿದೆ.

ಮೈಸೂರು ಮಾತ್ರವಲ್ಲದೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಒಆರ್‌ಎಸ್ ಮಾದರಿಯನ್ನು ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಲಾಗುತ್ತಿದೆ. ಗ್ರಾಹಕರ ಸುರಕ್ಷತೆ ದೃಷ್ಟಿಯಿಂದ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ಮಹತ್ವದ ತೀರ್ಮಾನ ಕೈಗೊಂಡಿದೆ. ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯು ಹೆಚ್‌ಒ) ಸೂತ್ರೀಕರಣ ಮಾನದಂಡವನ್ನು ಕಟ್ಟುನಿಟ್ಟಾಗಿ ಪಾಲಿಸದ ಹಿನ್ನೆಲೆ ಪ್ರಾಧಿಕಾರ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ. ಈ ಸಂಬಂಧ ಅ.14ರಂದೇ ಒಆರ್‌ಎಸ್ (ಓರಲ್ ರೀಹೈಡ್ರೇಷನ್ ಸಾಲ್ಟ್) ಎಂಬ ಪದವನ್ನು ಆಹಾರ ಬ್ರಾಂಡ್‌ಗಳಲ್ಲಿ ಬಳಸುವುದನ್ನು ಪ್ರಾಧಿಕಾರ ನಿಷೇಧಿಸಿದೆ.

ವರದಿ ನಂತರ ಕ್ರಮ

“ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ಆದೇಶದ ಮೇರೆಗೆ ಮೈಸೂರಿನ ಒಆರ್‌ಎಸ್ ವಿತರಕಾ ಕೇಂದ್ರಗಳಿಗೆ ಭೇಟಿ ನೀಡಿ ಒಆರ್‌ಎಸ್ ಮಾದರಿಗಳನ್ನು ಸಂಗ್ರಹಿಸಲಾಗಿದೆ. ಇಂತಹ ಮಾದರಿಯನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿದ್ದು, ವರದಿ ಬಂದ ನಂತರ ಸಂಬಂಧಿಸಿದವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಸಾಮಾನ್ಯವಾಗಿ ಭೇದಿ ಆದ ಸಂದರ್ಭದಲ್ಲಿ ಒಆರ್‌ಎಸ್ ಜ್ಯೂಸ್ ನೀಡಲಾಗುತ್ತದೆ. ಒಆರ್‌ಎಸ್ ನಲ್ಲಿ ಲವಣಾಂಶದ ಜೊತೆಗೆ ಸಕ್ಕರೆಯ ಅಂಶಗಳಿರುತ್ತವೆ. ಆದರೆ ಒಆರ್‌ಎಸ್‌ನಲ್ಲಿ ಸಕ್ಕರೆಯ ಅಂಶ ಹೆಚ್ಚಾಗಿರುವ ಹಿನ್ನೆಲೆ ಭೇದಿ ನಿಲ್ಲುವುದಿಲ್ಲ. ಈ ಕಾರಣದಿಂದ ಪ್ರಾಧಿಕಾರ ಈ ಕ್ರಮ ಕೈಗೊಂಡಿದೆ.

ಒಆರ್‌ಎಸ್ ಮಾದರಿಯನ್ನು ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸುವಂತೆ ಎಫ್‌ಎಸ್‌ಎಸ್‌ಐ ಸೂಚನೆ ನೀಡಿತ್ತು. ಮೈಸೂರಿನ ಒಆರ್‌ಎಸ್ ಡಿಸ್ಟ್ರಿಬ್ಯೂಟರ್ ಕೇಂದ್ರಗಳಿಗೆ ಭೇಟಿ ನೀಡಿ, ಅಲ್ಲಿ ಒಆರ್‌ಎಸ್ ಮಾದರಿ ಸಂಗ್ರಹಿಸಿ, ಈಗಾಗಲೇ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಅಲ್ಲದೆ ಮತ್ತಷ್ಟು ಒಆರ್‌ಎಸ್ ಮಾದರಿಯನ್ನು ಸಂಗ್ರಹ ಮಾಡುತ್ತಿದ್ದೇವೆ. ಪ್ರಯೋಗಾಲಯದ ವರದಿ ಬಂದ ನಂತರ, ಮೇಲಾಧಿಕಾರಿಗಳ ಆದೇಶದ ಮೇಲೆ ಸಂಬಂಧಿಸಿದವರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ.

–ಡಾ.ಎಸ್.ಎನ್.ರವೀಂದ್ರ,
ಅಂಕಿತ ಅಧಿಕಾರಿ, ಆರೋಗ್ಯ
ಸುರಕ್ಷತೆ ಮತ್ತು ಔಷಧಿ ಆಡಳಿತ

ಮೈಸೂರಲ್ಲಿ ಹೈ ಲೈಫ್ ಆಭರಣ, ಫ್ಯಾಷನ್ ಉಡುಪುಗಳ ಪ್ರದರ್ಶನ, ಮಾರಾಟಕ್ಕೆ ಚಾಲನೆ

ಮೊದಲ ದಿನವೇ ಉತ್ತಮ ಪ್ರತಿಕ್ರಿಯೆ; ಭರ್ಜರಿ ವ್ಯಾಪಾರ

ಮೈಸೂರು,ನ.25(ಜಿಎ)–ಮೈಸೂರಿನ ರ‍್ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಹೈ ಲೈಫ್ ವತಿಯಿಂದ ಆಯೋಜಿಸಿರುವ ಆಭರಣ ಮತ್ತು ಫ್ಯಾಷನ್ ಉಡುಪುಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಮೈಸೂರಿನ ವಿವಿಧ ಕ್ಷೇತ್ರದ ಸಾಧಕಿಯರು ಚಾಲನೆ ನೀಡಿದರು.

ಪ್ರದರ್ಶನದಲ್ಲಿ ಡಿಸೈನರ್ ಲೆಹೆಂಗಾ, ಸೀರೆಗಳು, ಮದುವೆ ಉಡುಪುಗಳು, ಗೌನ್‌ಗಳು ಮತ್ತು ಪಾರಂಪರಿಕ ಶೈಲಿಯ ಆಭರಣ ಸೇರಿದಂತೆ ಭಾರತದ ಪ್ರಮುಖ ಡಿಸೈನರ್‌ಗಳ ಅದ್ಭುತ ಸಂಗ್ರಹವನ್ನು ಒಂದೇ ವೇದಿಕೆಯಲ್ಲಿ ಪ್ರದರ್ಶಿಸಲಾಗಿದ್ದು, ಮೊದಲ ದಿನವೇ ನವೀನ ಫ್ಯಾಷನ್ ಟ್ರೆಂಡ್‌ಗಳು, ಸುಸ್ಥಿರ ಫ್ಯಾಷನ್ ಆಯ್ಕೆಗಳು ಮತ್ತು ಹಬ್ಬ, ಮದುವೆ ವಿಶೇಷ ಸಂಗ್ರಹಗಳನ್ನು ನೋಡಿ ಖರೀದಿಸಿ ಸಂತಸ ವ್ಯಕ್ತಪಡಿಸಿದರು.

ಈ ವೇಳೆ ಆಯೋಜಕಿ ಶೋಮಿಕಾ ಎಸ್.ರಾವ್ ಮಾತನಾಡಿ, ಕಳೆದ ಹಲವಾರು ವರ್ಷಗಳಿಂದ ಮೈಸೂರಿನಲ್ಲಿ ಹೈ ಲೈಫ್ ವತಿಯಿಂದ ಪ್ರದರ್ಶನ ಮತ್ತು ಮಾರಾಟವನ್ನು ಮಾಡುತ್ತಿದ್ದು, ಪ್ರತಿ ಬಾರಿಯೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಮೈಸೂರಿನ ಸಾಂಸ್ಕೃತಿಕ ಸೊಗಡು ಮತ್ತು ಶೈಲಿಗೆ ತಕ್ಕಂತೆ ಈ ಬಾರಿ ಪ್ರದರ್ಶನವನ್ನು ಸಂಪ್ರದಾಯ ಮತ್ತು ಆಧುನಿಕತೆಯ ಸೊಬಗು ಮಿಶ್ರಿತವಾಗುವಂತೆ ವಿಶೇಷವಾಗಿ ಆಯೋಜಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಹೈ ಲೈಫ್ ಎಕ್ಸಿಬಿಷನ್ಸ್‌ನ ರೀಜನಲ್ ಮ್ಯಾನೇಜರ್ ರಿಯಾ, ಮೈಸೂರು ಮಹಾನಗರ ಪಾಲಿಕೆಯ ವಲಯ6ರ ಸಹಾಯಕ ಆಯುಕ್ತೆ ಎಂ.ಎಸ್.ಪ್ರತಿಭಾ, ಆಕಾಶವಾಣಿ ಮತ್ತು ದೂರದರ್ಶನದ ಎ–ಗ್ರೇಡ್ ವಾದಕಿ ಹಾಗೂ ಐಸಿಸಿಆರ್ ಕಲಾವಿದೆ ಸ್ಮಿತಾ ಶ್ರೀಕಿರಣ, ಮೈಸೂರು ಸಪ್ಪರ್ ಕ್ಲಬ್‌ನ ಸಹ–ಸ್ಥಾಪಕಿ ಮತ್ತು ಗ್ರೇಜಿಂಗ್ ಬೋರ್ಡ್ ಕ್ಯುರೇಟರ್ ಅಂಕಿತಾ ರಾಮಿತ್ ಮಣಂಬೇತ್, ಮಹಿಳಾ ಉದ್ಯಮಿ ರಚನಾ ಗಡ್ಡಿಪಾಟಿ, ಮೈಸೂರು ಸಪ್ಪರ್ ಕ್ಲಬ್‌ನ ಸಹ ಸ್ಥಾಪಕಿ ಪ್ರತಿಮಾ ಜಗನ್ನಾಥ್‌ರಾವ್, ಮಹಿಳಾ ಉದ್ಯಮಿ ಡಾ.ಶ್ವೇತಾ ಪ್ರೀತಂ, ಗ್ಲೋರಿಯಸ್ ಗುಡೀಸ್‌ನ ಆರ್ಟಿಸನ್ ಬೇಕರ್ ಗ್ರೀಷ್ಮ ಅಯ್ಯಣ್ಣ ಮತ್ತಿತರರು ಪಾಲ್ಗೊಂಡಿದ್ದರು.



ಮೈಸೂರಿನ ರ‍್ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಹೈ ಲೈಫ್ ವತಿಯಿಂದ ಆಯೋಜಿಸಿರುವ ಆಭರಣ ಮತ್ತು ಫ್ಯಾಷನ್ ಉಡುಪುಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಮೈಸೂರಿನ ವಿವಿಧ ಕ್ಷೇತ್ರದ ಮಹಿಳಾ ಸಾಧಕಿಯರು ಚಾಲನೆ ನೀಡಿದರು.

ನ.28ಕ್ಕೆ ರಾಜ್ಯಾದ್ಯಂತ ‘ಫ್ಲರ್ಟ್’ ಬಿಡುಗಡೆ

ಮೈಸೂರು, ನ.25(ಜಿಎ)– ಎವರೆಸ್ಟ್ ಪಿಕ್ಚರ್ ಬ್ಯಾನರ್ ಅಡಿ ನಿರ್ಮಾಣಗೊಂಡಿರುವ ‘ಫ್ಲರ್ಟ್’ ಚಲನಚಿತ್ರ ನ.28ರಂದು ರಾಜ್ಯಾದ್ಯಂತ ಬಿಡುಗಡೆಯಾಗಲಿದೆ ಎಂದು ಚಿತ್ರದ ನಟ, ನಿರ್ದೇಶಕರೂ ಆದ ಚಂದನ್ ಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಂದಿನ ಯುವ ಸಮೂಹದಲ್ಲಿ ನಡೆಯುತ್ತಿರುವ ವಿಷಯಗಳನ್ನು ಇಟ್ಟುಕೊಂಡು ಚಿತ್ರ ಮಾಡಲಾಗಿದೆ. ಚಿತ್ರ ಟ್ರೈಲರ್ ಈಗಾಗಲೇ ಬಿಡುಗಡೆಗೊಂಡಿದೆ. ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಚಿತ್ರದಲ್ಲಿ ನಿಮಿಕಾ ರತ್ನಾಕರ್, ಅಕ್ಷತಾ ಬೋಪಯ್ಯ ನಾಯಕಿಯರಾಗಿ ನಟಿಸಿದ್ದಾರೆ ಹಿರಿಯ ನಟ ಅವಿನಾಶ್, ಶ್ರುತಿ, ಸಾಧುಕೋಕಿಲ, ಗಿರೀಶ್ ಶಿವಣ್ಣ, ರಂಗಾಯಣ ರಘು, ಅಶೋಕ್ ಹೆಗ್ಡೆ, ಅರವಿಂದ್ ರಾವ್, ಮೂಗು ಸುರೇಶ್, ದೊಡ್ಡ ತಾರಾ ಬಳಗ ಎಲ್ಲರನ್ನು ರಂಜಿಸಲಿದೆ ಎಂದು ಹೇಳಿದರು.

ಚಿತ್ರದ ‘ನೀ ನನ್ನ ಜೀವ’ ಗೀತೆಯನ್ನು ಕಿಚ್ಚ ಸುದೀಪ್ ಹಾಡಿ ಚಿತ್ರ ತಂಡ ದೊಡ್ಡ ಶಕ್ತಿಯಾಗಿದ್ದಾರೆ. ಫ್ಲರ್ಟ್ ಎಂದರೆ ಚುಡಾಯಿಸುವುದು ಎಂದರ್ಥವಲ್ಲ. ಗಾಢವಾದ ಪ್ರೀತಿಯನ್ನು ಫ್ಲರ್ಟ್ ಎಂದು ಹೇಳಲಾಗಿದೆ ಎಂದು ವಿವರಿಸಿ, ಚಿತ್ರ ಮಂದಿರದಲ್ಲಿ ಚಿತ್ರ ವೀಕ್ಷಿಸಿ ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಅಕ್ಷತಾ ಬೋಪಯ್ಯ, ಗಿರೀಶ್ ಶಿವಣ್ಣ ಉಪಸ್ಥಿತರಿದ್ದರು.

ಅಭಿನಂದನೆ...



ಚಾಮರಾಜನಗರ ಜಿಲ್ಲಾ ವಕೀಲರ ಸಂಘದ ನೂತನ ಅಧ್ಯಕ್ಷ ಪುಟ್ಟಸ್ವಾಮಿ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. ಈ ವೇಳೆ ವಕೀಲರ ಸಂಘದ ಕಾರ್ಯದರ್ಶಿ ಎಂ.ಶಿವರಾಮ್, ಜಂಟಿ ಕಾರ್ಯದರ್ಶಿ ಸಿ.ಸಿ.ರಮೇಶ್, ಎಡಿಜಿಪಿ ತಿಮ್ಮಯ್ಯ, ರಾಜ್ಯ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್, ಮೈಸೂರು ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಹೆಡತಲೆ ಮಂಜುನಾಥ್, ವಕೀಲರಾದ ಶಿವಮೂರ್ತಿ, ಗಂಗಾಧರ್, ಪುಟ್ಟಸ್ವಾಮಿ ಇನ್ನಿತರರು ಉಪಸ್ಥಿತರಿದ್ದರು.

ರಾಷ್ಟ್ರೋತ್ಥಾನ ಶಾಲೆಯಲ್ಲಿ ದೀಪೋತ್ಸವ



ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ಕಾರ್ತಿಕ ದೀಪೋತ್ಸವ ಆಚರಿಸಲಾಯಿತು.

ಮೈಸೂರು, ನ. 25– ಮೈಸೂರಿನ ಶ್ರೀನಗರದ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರ ಶಾಲೆಯಲ್ಲಿ ಕಾರ್ತಿಕ ದೀಪೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ವಿದ್ವಾನ್ ಆದರ್ಶ ಮತ್ತು ಅವರ ಸಹ ಕುಟುಂಬ, ಪೋಷಕರು, ಶಿಕ್ಷಕರು ಗೋಮಾತೆಗೆ ಪೂಜೆ ಸಲ್ಲಿಸಿ ಬಾಳೆಹಣ್ಣು, ಕೊಬ್ಬರಿ, ಬೆಲ್ಲ, ತಿನ್ನಿಸಿದರು. ನಂತರ ತುಳಸಿ, ಗೋಪಾಲ ಕೃಷ್ಣ, ವಿದ್ಯಾ ಭಾರತಿ ಮತ್ತು ಭಾರತ ಮಾತೆಗೆ ಪೂಜೆ ಸಲ್ಲಿಸಿ ಕೃತಾರ್ಥರಾದರು. ಭಕ್ತಿ ಭಾವದ ಸುಮಧುರ ಗೀತೆಗಳು ತಬಲದ ತರಂಗದೊಂದಿಗೆ ಮೂಡಿ ಬರುತಿತ್ತು. ಮುಖ್ಯ ಅತಿಥಿಗಳು ಕಾರ್ತಿಕ ಮಾಸದ ದೀಪ ಲಕ್ಷ್ಮಿ ಪೂಜೆ, ಸನಾತನ ಸಂಪ್ರದಾಯ ಮತ್ತು ಸಂಸ್ಕೃತಿ ಕುರಿತು ಮಾತನಾಡಿದರು.

ಕಾರ್ಯಕ್ರಮದ ಹೃದಯ ಭಾಗವಾದ ದೀಪದಿಂದ ದೀಪ ಹೊತ್ತಿಸಿ ಭಕ್ತಿಪೂರಕವಾಗಿ ನಮಸ್ಕರಿಸಿ, ಅದ್ಭುತವಾಗಿ ಚಿತ್ರಣಗೊಂಡಿದ್ದ ಬಣ್ಣಗಳ ರಂಗೋಲಿಯ ಮೇಲೆ ಇರಿಸುವುದು, ಸಂಘ ಶತಾಬ್ದಿ ರಂಗೋಲಿಯ ಮೇಲೆ 100 ದೀಪಗಳು, ರಾಷ್ಟ್ರೋತ್ಥಾನ ಪರಿಷತ್@60 ರಂಗೋಲಿಯ ಮೇಲೆ 60 ದೀಪಗಳು, ವಂದೇ ಮಾತರಂ @150 ರಂಗೋಲಿಯ ಮೇಲೆ 150 ದೀಪಗಳು, ಇನ್ನಿತರ ರಂಗೋಲಿ ಮೇಲೆ ನೂರಾರು ದೀಪಗಳನ್ನು ಇರಿಸಿ ಅತಿಥಿಗಳು, ಪೋಷಕರು, ಮಕ್ಕಳು ಮತ್ತು ಶಿಕ್ಷಕರು ಸಂಭ್ರಮಿಸಿದರು.

ರಾಜ್ಯಮಟ್ಟಕ್ಕೆ ಆಯ್ಕೆ



ಮೈಸೂರಿನ ರಾಮಕೃಷ್ಣನಗರದ ವಿಶ್ವಮಾನವ ವಿದ್ಯಾನಿಕೇತನದ ಪ್ರೌಢಶಾಲಾ ವಿಭಾಗದ ಅಭಿಷೇಕ್‌ಗೌಡ ಎಸ್. ಎತ್ತರ ಜಿಗಿತ ಸ್ಪರ್ಧೆಯಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾನೆ. ಪ್ರೇರಣ ವೈ.ಬಿ. ಮತ್ತು ಗಜೇಂದ್ರ ಸಿರ್ವಿ ಬಾಲ್ ಬ್ಯಾಡ್ಮಿಂಟನ್ ಸ್ಪರ್ಧೆಯಲ್ಲಿ ವಿಭಾಗೀಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಈ ವಿದ್ಯಾರ್ಥಿಗಳನ್ನು ಶಾಲಾ ಆಡಳಿತ ಮಂಡಳಿ ಹಾಗೂ ಶಿಕ್ಷಕರು ಅಭಿನಂದಿಸಿದ್ದಾರೆ.

ವ್ಯಕ್ತಿ ನಾಪತ್ತೆ



ಮೈಸೂರು,ನ.25–ಕಳೆದ ಅ.28ರಂದು ಮನೆಯಿಂದ ಹೊರ ಹೋದ ತಮ್ಮ ಪತಿ ಸೋಮಶೇಖರ್ ವಾಪಸ್ಸಾಗಿಲ್ಲ ಎಂದು ಉದಯಗಿರಿ ಪೊಲೀಸ್ ಠಾಣೆಗೆ ಪತ್ನಿ ದೂರು ನೀಡಿದ್ದಾರೆ. ಸುಮಾರು 50 ವರ್ಷದ, 5.2 ಅಡಿ ಎತ್ತರ, ಕೋಲು ಮುಖ, ಸಾಧಾರಣ ಮೈಕಟ್ಟು, ಎಣ್ಣೆಗೆಂಪು ಮೈಬಣ್ಣದ ಇವರ ಬಗ್ಗೆ ಸುಳಿವು ಸಿಕ್ಕಲ್ಲಿ ಉದಯಗಿರಿ ಠಾಣೆ, ದೂ. 0821–2418309, 2418339, 91083365800 ಮಾಹಿತಿ ನೀಡುವಂತೆ ಕೋರಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

26.11.2025 ಬುಧವಾರ, ಮಳೆ ನಕ್ಷತ್ರ: ಅನೂರಾಧ, 20.11.2025 ರಿಂದ 02.12.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಶ್ರವಣ, ರಾಹುಕಾಲ: ಮಧ್ಯಾಹ್ನ 12 ರಿಂದ 1.30 ರವರೆಗೆ

■ **ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿ ಸಂಘ :** ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರ ಶತೋತ್ತರ ದಶಮಾನೋತ್ಸವ (110ನೇ ಜಯಂತಿ) ಹಾಗೂ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವಿದ್ಯಾರ್ಥಿ ನಿಲಯದ ವಿಸ್ತೃತ ಕಟ್ಟಡದ ಭೂಮಿಪೂಜೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಶಾಸಕ ಕೆ. ಷಡಕ್ಷರಿ, ಅಧ್ಯಕ್ಷತೆ : ನಿವೃತ್ತ ಪೊಲೀಸ್ ಮಹಾನಿರ್ದೇಶಕ ಎಲ್. ರೇವಣ್ಣಸಿದ್ದಯ್ಯ, ಮುಖ್ಯ ಅತಿಥಿಗಳು: ಸಾಹಿತಿ ಪ್ರೊ.ಕೆ.ಸಿ.ಶಿವಪ್ಪ, ಡಾ.ಎಂ.ಎನ್.ನಂದೀಶ್ ಹಂಚೆ, ಸ್ಥಳ: ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವಿದ್ಯಾರ್ಥಿನಿಲಯದ ಆವರಣ, ಬೆಳಗ್ಗೆ 9ಕ್ಕೆ.

■ **ವಿದ್ಯಾವರ್ಧಕ ಕಾನೂನು ಕಾಲೇಜು:** ಸಂವಿಧಾನ ದಿನಾಚರಣೆ, ಮುಖ್ಯ ಅತಿಥಿಗಳು: ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಗುರುರಾಜ್ ಸೋಮಕ್ಕಳವರ್, ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು: ಕಾರ್ಯದರ್ಶಿ ಪಿ.ವಿಶ್ವನಾಥ್, ಅಧ್ಯಕ್ಷ ಶಿವಲಿಂಗಯ್ಯ, ಡಾ.ಕೆ.ಎಲ್. ಚಂದ್ರಶೇಖರ, ಪ್ರಿನ್ಸಿಪಾಲ್ ಡಾ.ಪಿ.ದೀಪು, ಸ್ಥಳ: ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣ, ಬೆಳಗ್ಗೆ 9.30ಕ್ಕೆ.

■ **ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್:** ಬ್ರೈಡಲ್ ಜುವೆಲರಿ ಶೋ. ಸ್ಥಳ: ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್, ಬಿ.ಎನ್.ರಸ್ತೆ. ಬೆಳಗ್ಗೆ 10 ರಿಂದ.

■ **ಹೈ ಲೈಫ್ ಸಂಸ್ಥೆ :** ಹೈ ಲೈಫ್ ವಸ್ತುಪ್ರದರ್ಶನ, ಸ್ಥಳ: ರ‍್ಯಾಡಿಸನ್ ಬ್ಲೂ ಹೋಟೆಲ್, ಬೆಳಗ್ಗೆ 10 ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10 ರಿಂದ.

■ **ಸಿಎಸ್‌ಐಆರ್–ಸಿಎಫ್‌ಟಿಆರ್‌ಐ ಎಸ್‌ಸಿ, ಎಸ್‌ಟಿ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್** : ಸಂವಿಧಾನ ದಿನಾಚರಣೆ, ಮುಖ್ಯ ಅತಿಥಿಗಳು : ಮೇಜರ್ ಜನರಲ್ ಎಸ್.ಜಿ. ಒಂಬತ್ಕೆರೆ, ಅಧ್ಯಕ್ಷತೆ : ಸಿಎಸ್‌ಐಆರ್–ಸಿಎಫ್‌ಟಿಆರ್‌ಐ ನಿರ್ದೇಶಕ ಡಾ. ಗಿರಿಧರ್ ಪಾರ್ವತಮ್, ಉಪಸ್ಥಿತರು : ಎಸ್‌ಸಿ/ಎಸ್‌ಟಿ ಅಸೋಸಿಯೇಷನ್ ಅಧ್ಯಕ್ಷ ಶಿವಸ್ವಾಮಿ, ಕಂಟ್ರೋಲರ್ ಆಫ್ ಅಡ್ಮಿನಿಸ್ಟ್ರೇಷನ್ ಕೆ. ರವಿಕುಮಾರ್, ಸ್ಥಳ: ಚೆಲುವಾಂಬ ಹಾಲ್, ಸಿಎಫ್‌ಟಿಆರ್‌ಐ, ಬೆಳಗ್ಗೆ 10ಕ್ಕೆ.

■ **ಶ್ರೀ ಅಮೃತೇಶ್ವರಸ್ವಾಮಿ ದೇವಸ್ಥಾನ:** ಶ್ರೀ ಸುಬ್ರಹ್ಮಣ್ಯಸ್ವಾಮಿ ಸನ್ನಿಧಿಯಲ್ಲಿ ಷಷ್ಠಿ ಪ್ರಯುಕ್ತ ವಿಶೇಷ ಪೂಜೆ, ಶ್ರೀ ಸುಬ್ರಹ್ಮಣ್ಯಹೋಮ, ಕುಜದೋಷ, ನಾಗದೋಷ ನಿವಾರಣಾ ಹೋಮ, ಕಾಲಸರ್ಪ ಶಾಂತಿ ಹೋಮ ಹಾಗೂ ಸಂಜೆ ದೀಪಾರಾಧನೆ, ಸ್ಥಳ: ಶ್ರೀ ಅಮೃತೇಶ್ವರಸ್ವಾಮಿ ದೇವಸ್ಥಾನ, ದಿವಾನ್ಸ್ ರಸ್ತೆ, ಬೆಳಗ್ಗೆ 10 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಬಂಗು ಕುರಿತು ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.

■ **ದಾರಿ ಫೌಂಡೇಷನ್, ಸಮಾನ ಅವಕಾಶಗಳ ಘಟಕ :** ಸಂವಿಧಾನ ದಿನಾಚರಣೆ ಅಂಗವಾಗಿ ಭವಿಷ್ಯದಲ್ಲಿ ಪ್ರಜಾಪ್ರಭುತ್ವದ ರಕ್ಷಣೆ ಜವಾಬ್ದಾರಿ ಯುವ ಶಕ್ತಿಯ ಕೈಯಲ್ಲಿ ಮುಕ್ತ–ಸಂವಾದ, ಉದ್ಘಾಟನೆ: ಹಿರಿಯ ಕಲಾವಿದ ಡಾ. ಮುಖ್ಯಮಂತ್ರಿ ಚಂದ್ರು, ಮುಖ್ಯ ಅತಿಥಿಗಳು : ಮಾಜಿ ಉಪ ಕುಲಪತಿ ಡಾ. ನಾಗೇಂದ್ರ ಪರಾಶರ್, ಅಧ್ಯಕ್ಷತೆ : ರೆ. ಡಾ. ಲೂರ್ದು ಪ್ರಸಾದ್ ಜೋಸೆಫ್, ಅತಿಥಿಗಳು : ದಾರಿ ಫೌಂಡೇಷನ್ ಅಧ್ಯಕ್ಷ ಎಲ್. ರಂಗಯ್ಯ, ತಗಡೂರು ವೀರೇಶ್‌ಕುಮಾರ್ ಮಹಾಮನೆ, ವಿಶ್ವನಾಥ್ ಕುಲಕರ್ಣಿ, ಪ್ರಭಾಕರ್, ಡಾ. ರವಿ. ಜೆ.ಡಿ. ಸಾಲ್ದಾನ, ಎ. ಥಾಮಸ್ ಗುಣಶೀಲನ್, ಡಾ. ಹೆಚ್.ಕೆ. ನಂದೀಶ, ಸ್ಥಳ: ಒಳಾಂಗಣ ಕ್ರೀಡಾಂಗಣ, ಸಂತ ಫಿಲೋಮಿನಾ ಕಾಲೇಜು, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಮೈಸೂರು ವಿವಿ ಕಾನೂನು ಶಾಲೆ:** 76ನೇ ವರ್ಷದ ಸಂವಿಧಾನ ದಿನಾಚರಣೆ ಅಂಗವಾಗಿ ಭಾರತದ ಸಂವಿಧಾನ ಮತ್ತು ಸಮಕಾಲೀನ ಸಮಾಜ ಕುರಿತು ವಿಶೇಷ ಉಪನ್ಯಾಸ, ಉದ್ಘಾಟನೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ನಿವೃತ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಅವರಿಂದ ಉಪನ್ಯಾಸ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಮೈಸೂರು ವಿವಿ ಕುಲಸಚಿವರಾದ ಎಂ.ಕೆ.ಸವಿತಾ, ಅಧ್ಯಕ್ಷತೆ: ಮೈಸೂರು ವಿವಿ ಕಾನೂನು ಶಾಲೆ ನಿರ್ದೇಶಕರಾದ ಪ್ರೊ.ಟಿ.ಆರ್.ಮಾರುತಿ, ಪ್ರೊ.ಎಸ್. ನರೇಂದ್ರಕುಮಾರ್, ಸ್ಥಳ: ಡಾ. ಬಿ.ಆರ್.ಅಂಬೇಡ್ಕರ್ ಸಭಾಂಗಣ, ಮೈಸೂರು ವಿವಿ ಕಾನೂನು ಶಾಲೆ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾನಿಲಯ, ಮಹಾಬೆಳಕು:** ಸಂವಿಧಾನ ಸಮರ್ಪಣಾ ದಿನಾಚರಣೆ, ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆ, ಉದ್ಘಾಟನೆ: ಸಂಗೀತ ವಿವಿ ಕುಲಪತಿ ಪ್ರೊ.ನಾಗೇಶ್ ಬೆಟ್ಟಕೋಟೆ, ಮುಖ್ಯ ಅತಿಥಿಗಳು : ಸಂಗೀತ ವಿವಿ ಕುಲಸಚಿವ ಪ್ರೊ.ಎಂ.ಜಿ.ಮಂಜುನಾಥ್, ಹಣಕಾಸು ಅಧಿಕಾರಿ ಸೌಮ್ಯಶ್ರೀ, ಜಿಲ್ಲಾ ಸರ್ಕಾರಿ ವಕೀಲ ಎಂ. ಮಹಾದೇವ ಸ್ವಾಮಿ, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್. ಲೋಕೇಶ್, ವಕೀಲ ಎಸ್. ಉಮೇಶ್, ಮಹಾಬೆಳಕು ಅಧ್ಯಕ್ಷೆ ಕಾತ್ಯಾಯಿನಿ ಯಶೋಮಿತ್ರ, ಸ್ಥಳ: ಸಂಗೀತ ವಿವಿ ಆವರಣ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಡಾ.ಅಂಬೇಡ್ಕರ್ ತರಬೇತಿ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ :** ಸಂವಿಧಾನ ದಿನಾಚರಣೆ ಅಂಗವಾಗಿ ವಿಚಾರ ಸಂಕಿರಣ, ಉದ್ಘಾಟನೆ: ಉರಿಲಿಂಗಿ ಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ, ಮುಖ್ಯ ಅತಿಥಿಗಳು : ಶಾಸಕ ಪಿ.ಎಂ. ನರೇಂದ್ರಸ್ವಾಮಿ, ಅಧ್ಯಕ್ಷತೆ: ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಸ್ಥಳ: ಕಾವೇರಿ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ :** ಭಾರತ ಸಂವಿಧಾನ ಬಚಾವೋ ದಿವಸ್ ಆಚರಣೆ, ಮುಖ್ಯ ಅತಿಥಿಗಳು : ಶಾಸಕ ತನ್ವೀರ್ ಸೇಠ್, ಸಾಹಿತಿ ಪ್ರೊ. ಜಯಪ್ರಕಾಶ್‌ಗೌಡ, ವಿಶ್ವಮೈತ್ರಿ ಬುದ್ಧವಿಹಾರ ಕಲ್ಯಾಣಶ್ರೀ ಬಂತೇಜಿ, ಅಧ್ಯಕ್ಷತೆ : ಮೈಸೂರು ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್, ನಗರಾಧ್ಯಕ್ಷ ಆರ್. ಮೂರ್ತಿ, ಸ್ಥಳ: ನಗರ ಕಾಂಗ್ರೆಸ್ ಭವನ, ಬೆಳಗ್ಗೆ 11.30ಕ್ಕೆ.

■ **ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಅರಿವು ಸಂಶೋಧನಾ ವಿದ್ಯಾರ್ಥಿಗಳ ವೇದಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಸಂವಿಧಾನ ದಿನ, ಕನ್ನಡ ರಾಜ್ಯೋತ್ಸವ, ಗೀತಗಾಯನ ಕಾರ್ಯಕ್ರಮ, ಅಧ್ಯಕ್ಷತೆ : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕರಾದ ಪ್ರೊ. ಎನ್.ಕೆ.ಲೋಲಾಕ್ಷಿ, ಉದ್ಘಾಟನೆ : ಸಂಸ್ಕೃತಿ ಚಿಂತಕ ಶಂಕರ ದೇವನೂರು, ಮುಖ್ಯ ಅತಿಥಿಗಳು : ಪ್ರಾಧ್ಯಾಪಕ ಪ್ರೊ. ತಮಿಳ್ ಸೆಲ್ವಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಡಾ. ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ. ಸುದರ್ಶನ್, ಸ್ಥಳ: ಬಿ.ಎಂ.ಶ್ರೀ ಸಭಾಂಗಣ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಬೆಳಗ್ಗೆ 11.30ಕ್ಕೆ

■ **ಶ್ರೀ ವಿಘ್ನೇಶ್ವರ, ಸುಬ್ರಹ್ಮಣ್ಯೇಶ್ವರ ಸ್ವಾಮಿ ದೇವಸ್ಥಾನ :** ಷಷ್ಠಿ ಅಂಗವಾಗಿ ವಿಶೇಷ ಪೂಜಾ ಕಾರ್ಯಕ್ರಮ, ಬೆಳಗ್ಗೆಯಿಂದ ಮಹಾಗಣಪತಿ ಪೂಜೆ, ಪುಣ್ಯಾಹ, ನವಗ್ರಹ ಪೂಜೆ, ಅಷ್ಟದಿಕ್ಪಾಲಕ, ಕರ್ಮ ಸಾದ್ಗುಣ್ಯ ದೇವತೆಗಳ ಪೂಜೆ, ಶ್ರೀ ಸುಬ್ರಹ್ಮಣ್ಯ ಸ್ವಾಮಿಗೆ ಅಭಿಷೇಕ, ಹೋಮ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳು, ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ, ಸ್ಥಳ: ಶ್ರೀ ವಿಘ್ನೇಶ್ವರ, ಸುಬ್ರಹ್ಮಣ್ಯೇಶ್ವರ ಸ್ವಾಮಿ ದೇವಸ್ಥಾನ, ದೇವಯ್ಯನಹುಂಡಿ.

■ **ಮೈಸೂರು ರಾಯಲ್ ಸೊಸೈಟಿ :** ವಾರ್ಷಿಕೋತ್ಸವ ಮತ್ತು ಸಂವಿಧಾನ ದಿನಾಚರಣೆ ಪ್ರಯುಕ್ತ ಅಭಿನಂದನಾ ಕಾರ್ಯಕ್ರಮ, ಸ್ವಾಗತ: ಮೈಸೂರು ರಾಯಲ್ ಸೊಸೈಟಿ ಕಾರ್ಯದರ್ಶಿ ಪುನೀತ್ ಎಸ್.ಪಾಳೇಕರ್, ಪ್ರಾಸ್ತಾವಿಕ ನುಡಿ: ಸೊಸೈಟಿ ಉಪಾಧ್ಯಕ್ಷ ಎಸ್.ಪಿ.ಲಿಂಗರಾಜು, ಅಕ್ಕ ಐಎಎಸ್ ಅಕಾಡೆಮಿಯ ಡಾ. ಶಿವಕುಮಾರ್ ಅವರಿಂದ ಉಪನ್ಯಾಸ, ಅಧ್ಯಕ್ಷತೆ: ಮೈಸೂರು ರಾಯಲ್ ಸೊಸೈಟಿ ಅಧ್ಯಕ್ಷ ಎಸ್. ವೀರಭದ್ರಯ್ಯ, ಸನ್ಮಾನಿತರು: ಶೀಲಾ, ಜಿ. ನಾರಾಯಣಸ್ವಾಮಿ, ಹನೂರು ಚನ್ನಪ್ಪ, ಡಾ.ದೊಡ್ಡಯ್ಯ, ಆನಂದ್, ಸ್ಥಳ: ಸಂಜೀವಯ್ಯ ಮೆಮೋರಿಯಲ್ ಎಜುಕೇಷನ್ ಸೊಸೈಟಿ, ವಿಜಯನಗರ 1ನೇ ಹಂತ, ಮಧ್ಯಾಹ್ನ 2ಕ್ಕೆ

■ **ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘ:** ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಎಲ್. ರೇವಣ್ಣಸಿದ್ದಯ್ಯ, ಸ್ಥಳ: ಸಂಘದ ವಿದ್ಯಾರ್ಥಿ ನಿಲಯ, ನಂ. 12/1, ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವಿದ್ಯಾರ್ಥಿ ನಿಲಯ, ಮಾರುತಿ ಟೆಂಪಲ್ ರಸ್ತೆ, ಗಂಗೋತ್ರಿ ಬಡಾವಣೆ, ಮಧ್ಯಾಹ್ನ 3ಕ್ಕೆ.

■ **ವಸುಂಧರ ಪ್ರದರ್ಶಕ ಕಲೆಗಳ ಕೇಂದ್ರ, ಮೈಸೂರು:** ವಸುಂಧರೋತ್ಸವ–2025. 41ನೇ ರಾಷ್ಟ್ರೀಯ ಮಟ್ಟದ ಶಾಸ್ತ್ರೀಯ ನೃತ್ಯ ಮತ್ತು ಸಂಗೀತ ಹಬ್ಬ–2025. ಸಂಜೆ 5.30ರಿಂದ ಡಾ.ವಸುಂಧರ ದೊರೆಸ್ವಾಮಿಯವರ ಶಿಷ್ಯ ನುಯೆನ್ ಮೈನ್ ತುಂಗ್ ಅವರಿಂದ ರಂಗ ಪ್ರವೇಶ, ಗೌರವ ಸಮರ್ಪಣೆ: ನೂಪುರ ಟ್ರಸ್ಟ್ ನಿರ್ದೇಶಕ ಪ್ರೊ.ರಾಮಮೂರ್ತಿರಾವ್, ಸ್ಥಳ: ವಸುಂಧರ ಭವನ, ಕಾಮಾಕ್ಷಿ ಆಸ್ಪತ್ರೆ ರಸ್ತೆ, ಸರಸ್ವತಿಪುರಂ.

■ **ಪರಂಪರೆ:** ಸಂವಿಧಾನ ದಿನಾಚರಣೆ ಅಂಗವಾಗಿ ಸಂವಿಧಾನ ಕುರಿತು ವಿಶೇಷ ಉಪನ್ಯಾಸ. ವಿದುಷಿ ಶುಭ ರಾಘವೇಂದ್ರ ತಂಡದವರಿಂದ ದೇಶಭಕ್ತಿ ಗೀತೆಗಳ ಗಾಯನ, ಕಾದಂಬರಿಕಾರ ಮತ್ತು ಹಿರಿಯ ಸಂಶೋಧಕ ಡಾ. ಜಿ.ಬಿ. ಹರೀಶ ಅವರಿಂದ ಭಾರತದ ರಾಷ್ಟ್ರಗೀತೆಗಳು ಕುರಿತು ಉಪನ್ಯಾಸ, ಸ್ಥಳ: ಕೆ.ವಾಸುದೇವಾ ಚಾರ್ಯ ಭವನ (ನಾದಬ್ರಹ್ಮ). ಸಂಜೆ 6 ರಿಂದ.

■ **ಸಂವಹನ ಪ್ರಕಾಶಕರು, ಮೈಸೂರು ಜಿಲ್ಲಾ ಹಾಗೂ ತಾಲೂಕು ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ವೇದಿಕೆ :** ರಾಜೇಂದ್ರ ಶಿಶುರವರ (ಎಂ.ಎ. ನೀಲಾಂಬಿಕಾ) ವಚನ ಕಥನ ಕೃತಿ ಲೋಕಾರ್ಪಣೆ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕೃತಿ ಲೋಕಾರ್ಪಣೆ : ಶ್ರೀ ಕುಂದೂರು ಮಠದ ಅಧ್ಯಕ್ಷ ಡಾ. ಶ್ರೀ ಶರತ್‌ಚಂದ್ರ ಸ್ವಾಮೀಜಿ, ಕೃತಿ ಕುರಿತು : ಪ್ರೊ. ಮೊರಬದ ಮಲ್ಲಿಕಾರ್ಜುನ, ಮುಖ್ಯ ಅತಿಥಿಗಳು : ನಗರ ಕೇಂದ್ರ ಗ್ರಂಥಾಲಯ ಉಪನಿರ್ದೇಶಕ ಬಿ. ಮಂಜುನಾಥ್, ರಾಜೇಂದ್ರ ಶಿಶು, ಡಾ. ಹೆಳವರಹುಂಡಿ ಸಿದ್ದಪ್ಪ, ಶ್ರೀಮತಿ ಎಂ.ಎಸ್. ಶೋಭಾರಾಣಿ ಜೈಪ್ರಕಾಶ್, ಸ್ಥಳ: ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಭವನ, ಜೆಎಸ್‌ಎಸ್ ಆಸ್ಪತ್ರೆ ಆವರಣ, ಸಂಜೆ 5ಕ್ಕೆ.

■ **ಪದ್ಮಪಾಣಿ ಲಲಿತಕಲಾ ಅಕಾಡೆಮಿ, ಏಕತಾರಿ ಸಾಂಸ್ಕೃತಿಕ ಸಂಘಟನೆ :** ಸಂವಿಧಾನ ಪೀಠಿಕೆ ಶತಕಂಠ ಗಾಯನ ಕಾರ್ಯಕ್ರಮ, ಉದ್ಘಾಟನೆ : ಶಾಸಕ ಜಿ.ಟಿ. ದೇವೇಗೌಡ, ಅಧ್ಯಕ್ಷತೆ : ಜಿಪಂ ನಿವೃತ್ತ ಉಪಕಾರ್ಯದರ್ಶಿ ಡಾ. ಪ್ರೇಮ್‌ಕುಮಾರ್, ಉಪಸ್ಥಿತರು : ಶಾಸಕ ಟಿ.ಎಸ್. ಶ್ರೀವತ್ಸ ಶ್ರೀಮತಿ ಡಾ. ಪುಷ್ಪಾ ಅಮರ್‌ನಾಥ್, ಸಂಸ್ಕೃತಿ ಚಿಂತಕ ಬಸವರಾಜು ದೇವನೂರ, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರ, ಸಂಜೆ 5ಕ್ಕೆ.

■ **ಚಂಪಕ ಅಕಾಡೆಮಿ, ವಸುಂಧರ ಪ್ರದರ್ಶನ ಕಲಾ ಕೇಂದ್ರ :** ನೃತ್ಯಗಾರ್ತಿ ಡಾ.ನಾಗಲಕ್ಷ್ಮಿ ನಾಗರಾಜನ್ ಅವರ "ಭಾರತೀಯ ನೃತ್ಯ ಜ್ಞಾನಂ (ಪಲ್ಲವ ಆವೃತ್ತಿ) – ಭರತನಾಟ್ಯದ ಭಾರತೀಯ ಶಾಸ್ತ್ರೀಯ ನೃತ್ಯದ ಉಪಕ್ರಮ" ಪುಸ್ತಕ ಬಿಡುಗಡೆ ಸಮಾರಂಭ, ಪುಸ್ತಕ ಬಿಡುಗಡೆ : ಡಾ.ವಸುಂಧರ ದೊರಸ್ವಾಮಿ, ಉಪಸ್ಥಿತರು : ಸಿ.ಜಿ.ನರಸಿಂಹನ್ (ಹಿರಿಯ ಶಸ್ತ್ರಚಿಕಿತ್ಸಕ), ಶ್ರೀಮತಿ ಸವಿತಾ ರಮೇಶ್ (ಅಧ್ಯಕ್ಷೆ, ವಿಪಿಎಸಿ ಮತ್ತು ಸಿ ಟ್ರಸ್ಟ್), ಪ್ರೊ.ಡಾ.ಕೆ.ಕುಮಾರ್ (ಸ್ಥಾಪಕ ಕಾರ್ಯದರ್ಶಿ, ಕುಮಾರ್ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್) ಮತ್ತು ಪ್ರೊ.ಕೆ.ರಾಮಮೂರ್ತಿ ರಾವ್ (ನಿರ್ದೇಶಕರು, ನೂಪುರ ಟ್ರಸ್ಟ್), ಸ್ಥಳ: ವಸುಂಧರ ಭವನ, ಕಾಮಾಕ್ಷಿ ಆಸ್ಪತ್ರೆ ರಸ್ತೆ, ಸರಸ್ವತಿಪುರಂ, ಸಂಜೆ 5.30ಕ್ಕೆ

■ **ಕಲಾಸಪ್ತಮಿ :** ಕರ್ನಾಟಿಕ್ ಇನ್‌ಸ್ಟ್ರುಮೆಂಟಲ್ ಮ್ಯೂಸಿಕ್, ಸಾಯಿ ಶಿವ–ಮೃದಂಗ, ಶಮಿತ್ ಎಸ್. ಗೌಡ–ಘಟಂ, ರಕ್ಷಿತಾ ರಮೇಶ್–ವೀಣಾ, ಕೇಶವ್ ಮೋಹನ್ ಕುಮಾರ್–ವಯೋಲಿನ್, ಸ್ಥಳ: ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್, ವಿಜಯನಗರ 1ನೇ ಹಂತ, ಸಂಜೆ 6 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಭಾವ ಸೇತು ಭಾಷೆ ಬದಲಾದರು ಭಾವ ಬದಲಾಗದಿರಲಿ ಬಾನುಲಿ ಸರಣಿ, ಪ್ರಸ್ತುತಿ–ಸಿ. ಎಸ್. ಪೂರ್ಣಿಮಾ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಬಿ. ಪುರುಷೋತ್ತಂ ಹಾಗೂ ಅಮೃತಾ ನಿತಿನ್ ಶಾಸ್ತ್ರೀ, ವ್ಯಾಖ್ಯಾನ–ಡಾ. ಹೆಚ್.ಎಂ. ಕಲಾಶ್ರೀ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಚಿತ್ರಗೀತೆಗಳು, 9.00 ವೃತ್ತಿ ಮಾರ್ಗದರ್ಶನ–ಪ್ರಾಯೋಜಿತ ನೇರ ಫೋನ್–ಇನ್ ಕಾರ್ಯಕ್ರಮ, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಪಂಡಿತ್ ಡಿ.ಕೆ. ದಾತಾರ್–ವೈಯೋಲಿನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪತ್ರೋತ್ತರ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಎ. ಅನಂತ ಪದ್ಮನಾಭನ್–ವೀಣಾವಾದನ, 4.00 ಮಹಿಳಾರಂಗ, ಸಾಧನ ಶಿಖರ–ಕ್ರೋಷಾ ಕಲೆಯಲ್ಲಿ 6 ಗಿನ್ನೀಸ್ ವಿಶ್ವ ದಾಖಲೆಯನ್ನು ಹೊಂದಿರುವ ಕರ್ನಾಟಕ ತಂಡದ ಮುಖ್ಯಸ್ಥರಾದ ಶಾರದಾ ಸಿ. ಅರಸ್ ಅವರೊಂದಿಗೆ ಮಾತುಕತೆ. ಪ್ರಸ್ತುತಿ–ದಿಗ್ವಿಜಯ್ ಬಿ., 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ–ಎಸ್.ಎನ್.ಭಟ್ ಸೈಪಂಗಲ್ಲು, 5.00 ಕಟ್ಟೋಣ ಬನ್ನಿ ನಿರ್ಮಾಣ ತಾಂತ್ರಿಕತೆಗಳನ್ನ ಕುರಿತ ಪ್ರಾಯೋಜಿತ ಬಾನುಲಿ ಸರಣಿ, ಪ್ರಾಯೋಜಕರು– ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ ಇಂಡಿಯಾ, ಮೈಸೂರು ಛಾಪ್ಟರ್, ವಿಷಯ–ನಿರ್ಮಾಣಕ್ಕಾಗಿ ಸೂಕ್ತ ಇಂಜಿನಿಯರ್‌ಗಳು ಹಾಗೂ ಕಂಟ್ರಾಕ್ಟರ್‌ಗಳ ಆಯ್ಕೆ ಭಾಗವಹಿಸುತ್ತಾರೆ–ಕನ್ಸಲ್ಟಿಂಗ್ ಇಂಜಿನಿಯರ್ ಬಿ.ಆರ್. ಬದ್ರಿನಾಥ್ ಹಾಗೂ ನಿರ್ಮಾಣ ಸಲಹೆಗಾರರಾದ ನಿರಂಜನ್ ಸಿಂಹ, ಪ್ರಸ್ತುತಿ –ಎನ್.ಕೇಶವಮೂರ್ತಿ, 6.50 ಕೃಷಿರಂಗ –ಜೈವಿಕ ಇಂಧನದ ಪ್ರಾಮುಖ್ಯತೆ ಈ ಕುರಿತು ಮೈಸೂರು ತಾಲೂಕು ನಾಗನಹಳ್ಳಿಯ ಸಾವಯವ ಕೃಷಿ ಸಂಶೋಧನಾ ಕೇಂದ್ರದ ಸಹಪ್ರಾಧ್ಯಾಪಕರಾದ ಡಾ.ಟಿ.ಎಸ್. ಗಣೇಶ್ ಪ್ರಸಾದ್ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್. ಕೇಶವಮೂರ್ತಿ, 7.45 ಚಿತ್ರಗೀತೆಗಳು, 8.00 ವಿಶೇಷ ಕಾರ್ಯಕ್ರಮ ಮೈಸೂರು ಆಕಾಶವಾಣಿ ತೊಂಬತ್ತು–ನೆನಪುಗಳ ಹೊತ್ತು – ವಿಶೇಷ ಕಾರ್ಯಕ್ರಮ ಸರಣಿ, ಸಾಹಿತಿ, ಸಂಘಟಕ ಹಾಗೂ ಮಂಡ್ಯ ಕರ್ನಾಟಕ ಸಂಘದ ಅಧ್ಯಕ್ಷರಾದ ಪ್ರೊ. ಜಯಪ್ರಕಾಶ್‌ಗೌಡ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಡಾ. ಮೈಸೂರು ಉಮೇಶ್, 8.30 ಹಿಂದಿ ಚಿತ್ರಗೀತೆಗಳು, 9.30 ಕ್ರೀಡಾಲೋಕ, 10.00 ಜನಪದ ಸಂಗೀತ, 10.30 ಸವಿನೆನಪು

ಮೈಸೂರು ಮಿತ್ರ ಬುಧವಾರ 26 ನವೆಂಬರ್ 2025

ಸರಗೂರು ಬಳಿ ಮತ್ತೊಂದು ಹುಲಿ ಸೆರೆ

ಆಗಾಗ ಜಾನುವಾರುಗಳ ಬಲಿ ಪಡೆಯುತ್ತಿದ್ದ 6–7 ವರ್ಷದ ವ್ಯಾಘ್ರ



ಸರಗೂರು ತಾಲೂಕಿನ ದೇವಲಾಪುರದ ಬಳಿ ಮುಂಜಾನೆ ಸೆರೆ ಸಿಕ್ಕ ಹುಲಿ.



ಹುಲಿ ಸೆರೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡ ಸಿಬ್ಬಂದಿ ತಂಡ.

ಮೈಸೂರು,ನ.25(ಎಂಟಿವೈ)– ಮೈಸೂರು ವಿಭಾಗ ವ್ಯಾಪ್ತಿಯ ಸರಗೂರು ತಾಲೂಕಿನ ವಿವಿಧ ಗ್ರಾಮಗಳಂಚಿನಲ್ಲಿ ಕಾಣಿಸಿಕೊಂಡು, ಹೊಲದಲ್ಲಿ ಮೇಯುತ್ತಿದ್ದ ಜಾನುವಾರುಗಳನ್ನು ಬಲಿ ಪಡೆಯುತ್ತಿದ್ದ ಗಂಡು ಹುಲಿಯೊಂದನ್ನು ಅರಣ್ಯ ಸಿಬ್ಬಂದಿ ಮಂಗಳವಾರ ಮುಂಜಾನೆ ದೇವಲಾಪುರ–ಪುರದಶೆಡ್ ಗ್ರಾಮದ ಬಳಿ ಸುರಕ್ಷಿತವಾಗಿ ಸೆರೆ ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ.

ಸರಗೂರು ತಾಲೂಕು ವ್ಯಾಪ್ತಿಯ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಕಾಡಂಚಿನ ಗ್ರಾಮಗಳಲ್ಲಿ ಉಪಟಳ ನೀಡಿ, ಜನರ ಮೇಲೆರಗುತ್ತಿದ್ದ ಹುಲಿಗಳನ್ನು ಈಗಾಗಲೇ ಒಂದೊಂದಾಗಿ ಸೆರೆ ಹಿಡಿದಿದ್ದು, ಇದೀಗ ಗ್ರಾಮಗಳ ವ್ಯಾಪ್ತಿಯಲ್ಲಿ ಜಾನುವಾರುಗಳ ಮೇಲೆ ದಾಳಿ ಮಾಡುತ್ತಿದ್ದ ಹುಲಿಯ ಸೆರೆ ಹಿಡಿದು ಜನರ ಮೇಲಿನ ಸಂಭವನೀಯ ದಾಳಿ ತಪ್ಪಿಸಲಾಗಿದೆ.

ಜಾನುವಾರುಗಳ ಮೇಲೆ ದಾಳಿ: ಸರಗೂರು ತಾಲೂಕು ವ್ಯಾಪ್ತಿಯ ಪುರದಶೆಡ್, ಹಂಚೀಪುರ, ಹೆಗ್ಗನೂರು, ಕೆಂಗೇನಹಳ್ಳಿ, ಕಾಟ್ವಾಳು, ದಡದಹಳ್ಳಿ, ದೇವಲಾಪುರ ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಕಳೆದ 5–6 ತಿಂಗಳಿಂದ ಕಾಣಿಸಿಕೊಳ್ಳುತ್ತಿದ್ದ 6–7 ವರ್ಷದ ಈ ಹುಲಿ ಹೊಲದಲ್ಲಿ ಹಾಗೂ ಅರಣ್ಯದಂಚಿನ ಪ್ರದೇಶದಲ್ಲಿ ಮೇಯುವ ಜಾನುವಾರಗಳ ಮೇಲೆ ದಾಳಿ ನಡೆಸಿ, ಬಲಿ ಪಡೆಯುತ್ತಿತ್ತು. ಆಗಾಗ ಗ್ರಾಮಸ್ಥರ ಕಣ್ಣಿಗೆ ಬೀಳುತ್ತಿತ್ತು. ಈ ಹುಲಿ ಸೆರೆಗೆ ಗ್ರಾಮಸ್ಥರು ಒತ್ತಾಯಿಸಿದ್ದರು. ಸರಗೂರು ತಾಲೂಕಿನಲ್ಲಿ ಹುಲಿ ದಾಳಿಗೆ ಈಗಾಗಲೇ ಮೂವರು ರೈತರು ಬಲಿಯಾದ ಹಿನ್ನೆಲೆಯಲ್ಲಿ ದೇವಲಾಪುರದ ಬಳಿ ಓಡಾಡುತ್ತಿದ್ದ ಹುಲಿ ಸೆರೆಗೆ ಹಿರಿಯ ಅಧಿಕಾರಿಗಳು ಸೂಚನೆ ನೀಡಿದ್ದರು.

ರಾತ್ರಿ ಕಾಣಿಸಿಕೊಂಡ ಹುಲಿ: ಹಂಚೀಪುರ, ಹೆಗ್ಗನೂರು ಬಳಿ ಸೋಮವಾರ ರಾತ್ರಿ ಹುಲಿ ಇರುವ ಮಾಹಿತಿಯನ್ನು ಗ್ರಾಮಸ್ಥರು ನೀಡಿದ್ದ ಹಿನ್ನೆಲೆಯಲ್ಲಿ ಕೂಂಬಿಂಗ್ ಕಾರ್ಯಾಚರಣೆಗೆ ಸಿದ್ಧತೆ ಮಾಡಿಕೊಳ್ಳಲಾಯಿತು. ಮೈಸೂರು ವಿಭಾಗದ ಸಿಬ್ಬಂದಿಗಳೊಂದಿಗೆ ಬಂಡೀಪುರ ಅರಣ್ಯದ ಸಿಬ್ಬಂದಿ ಸೇರಿಕೊಂಡು ಕಾರ್ಯಾಚರಣೆ ಮುಂದುವರೆಸಿದರು. ಥರ್ಮಲ್ ಡ್ರೋನ್ ತಂಡ ಹುಲಿ ಮೇಲೆ ನಿಗಾ ಇಟ್ಟರೆ, ಸಾಕಾನೆಗಳಾದ ಮಹೇಂದ್ರ, ಧನಂಜಯ, ಪ್ರಶಾಂತ, ಭೀಮ ಹಾಗೂ ಇಂದ್ರನನ್ನು ಕರೆಸಿಕೊಂಡು ಕೂಂಬಿಂಗ್ ಕಾರ್ಯಾಚರಣೆ ಆರಂಭಿಸಲಾಯಿತು.

ರಾತ್ರಿಯಿಡೀ ಕೂಂಬಿಂಗ್ ಸಿಬ್ಬಂದಿಗಳಿಂದ ತಪ್ಪಿಸಿಕೊಳ್ಳಲು ಸುಮಾರು 2 ಕಿ.ಮೀ.ವರೆಗೂ ಸಾಗಿದ ಹುಲಿ ಮುಂಜಾನೆ ಅರಣ್ಯದಂಚಿನ ಟ್ರೆಂಚ್ ಸಮೀಪದ ಹಳ್ಳವೊಂದರ ಪೊದೆಯಲ್ಲಿ ಅಡಗಿ ಕುಳಿತಿತ್ತು. ಈ ವೇಳೆ ಭೀಮನ ಮೇಲೆ ಕುಳಿತಿದ್ದ ಬಂಡೀಪುರದ ಪಶುವೈದ್ಯ ಡಾ.ವಾಸಿಂ ಮಿರ್ಜಾ ಹುಲಿಗೆ ಅರವಳಿಕೆ ಮದ್ದು ನೀಡಿದರು. ಇದರಿಂದ ಮತ್ತೆ ಸ್ಥಳ ಬದಲಿಸಲು ಮುಂದಾದ ಹುಲಿ ಮಂಪರು ಬಂದು ನೆಲಕ್ಕೆ ಉರುಳಿದೆ. ತಕ್ಷಣ ಬಲೆ ಹಾಕಿ ಹುಲಿಯನ್ನು ಬೋನ್ ಒಳಗೆ ಇಟ್ಟು, ಪ್ರಥಮ ಚಿಕಿತ್ಸೆ ನೀಡಿ ಸುರಕ್ಷಿತ ಸ್ಥಳಕ್ಕೆ ಕೊಂಡೊಯ್ಯಲಾಯಿತು.

ಸಣ್ಣಪುಟ್ಟ ಗಾಯದ ದಷ್ಟಪುಷ್ಟ ಹುಲಿ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಮೊಳೆಯೂರು ವ್ಯಾಪ್ತಿಯಲ್ಲಿ ಜನಿಸಿದ್ದು, ಕೆಲ ವರ್ಷಗಳಿಂದ ಕಾಡಂಚಿನ ಪ್ರದೇಶದ ಆನೆ ಕಂದಕ, ನಾಲೆ, ಹಳ್ಳಗಳಲ್ಲಿ ನೆಲೆ ಕಂಡುಕೊಂಡಿತ್ತು. ಅಲ್ಲದೆ, ಪ್ರತಿದಿನ ವಿವಿಧ ಗ್ರಾಮಗಳ ವ್ಯಾಪ್ತಿಯ ಹಳ್ಳ–ಕೊಳ್ಳದ ವ್ಯಾಪ್ತಿಯಲ್ಲೇ ಓಡಾಡುತ್ತಾ ಸರಹದ್ದು ಕಂಡುಕೊಂಡಿತ್ತು. ಅರಣ್ಯ ಪ್ರದೇಶದಲ್ಲಿದ್ದಾಗ ಬೇರೊಂದು ಹುಲಿಯೊಂದಿಗೆ ಸರಹದ್ದಿಗಾಗಿ ಕಾದಾಟ ನಡೆಸಿ, ಸಣ್ಣಪುಟ್ಟದಾಗಿ ಗಾಯಗೊಂಡಿದ್ದ ಈ ಹುಲಿ ಅರಣ್ಯ ಪ್ರದೇಶ ತೊರೆದು, ಕಾಡಂಚಿನ ಗ್ರಾಮಗಳ ಹಳ್ಳಗಳನ್ನೆ ಆವಾಸ ಸ್ಥಾನ ಮಾಡಿಕೊಂಡಿತ್ತು. ಕಳೆದ 5–6 ತಿಂಗಳಿಂದಲೂ ಜನರ ಕಣ್ಣಿಗೆ ಆಗಾಗ ಕಾಣಿಸಿಕೊಂಡರೂ ದಾಳಿ ಮಾಡಿರಲಿಲ್ಲ. ಆಗೊಮ್ಮೆ–ಈಗೊಮ್ಮೆ ಜಾನುವಾರುಗಳ ಮೇಲೆ ಮಾತ್ರ ದಾಳಿ ಮಾಡುತ್ತಿತ್ತು.

ದಷ್ಟ–ಪುಷ್ಟವಾಗಿರುವ ಈ ಹುಲಿಯಿಂದ ಸಂಭವನೀಯ ಜನರ ಮೇಲಿನ ದಾಳಿ ತಡೆಗಟ್ಟುವ ನಿಟ್ಟಿನಲ್ಲಿ ಆ ಹುಲಿಯನ್ನು ಸೆರೆ ಹಿಡಿಯಲು ಸೂಚನೆ ದೊರೆತ ಹಿನ್ನೆಲೆಯಲ್ಲಿ ಕಾರ್ಯಾಚರಣೆ ನಡೆಸಿ, ಸುರಕ್ಷಿತವಾಗಿ ಸೆರೆ ಹಿಡಿಯಲಾಗಿದೆ. ಹುಲಿಯನ್ನು ಕೂರ್ಗಳ್ಳಿಯಲ್ಲಿರುವ ಮೈಸೂರು ಮೃಗಾಲಯದ ಪುನರ್ವಸತಿ ಕೇಂದ್ರಕ್ಕೆ ತಂದು ಅದರ ಆರೋಗ್ಯ ಪರಿಶೀಲಿಸಲಾಗಿದ್ದು, ಮೇಲಾಧಿಕಾರಿಗಳ ಆದೇಶದ ಮೇರೆಗೆ ಮುಂದಿನ ಕ್ರಮ ಕೈಗೊಳ್ಳಲು ನಿರ್ಧರಿಸಲಾಗಿದೆ.

ಕಾರ್ಯಾಚರಣೆ ನೇತೃತ್ವವನ್ನು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಎಸ್.ಪ್ರಭಾಕರನ್, ಮೈಸೂರು ಡಿಸಿಎಫ್ ಕೆ.ಪರಮೇಶ್ ವಹಿಸಿದ್ದರು. ಸರಗೂರು ಆರ್‌ಎಫ್‌ಓ ಅಕ್ಷಯ್, ಪಶುವೈದ್ಯರಾದ ಡಾ.ವಾಸಿಂ ಮಿರ್ಜಾ, ಡಾ.ಆದರ್ಶ್, ಗುರಿಕಾರರಾದ ಡಿಆರ್‌ಎಫ್‌ಓ ರಂಜನ್, ಗುರಿಕಾರ ಅಕ್ರಂ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಹುಲಿ ದಾಳಿಗೆ ಊಟಿ ರೈತ ಮಹಿಳೆ ಬಲಿ



ಗುಂಡ್ಲುಪೇಟೆ, ನ 25(ಸೋಮ್.ಜಿ)–ಹುಲಿ ದಾಳಿಗೆ ರೈತ ಮಹಿಳೆ ಬಲಿಯಾಗಿರುವ ಘಟನೆ ನೆರೆಯ ತಮಿಳುನಾಡಿನ ಊಟಿ ಜಿಲ್ಲೆಯ ಕೂಡಲೂರು ತಾಲೂಕಿನ ಮದುಮಲೈ ಸಮೀಪದ ಸಿಂಗಾರ ವನ್ಯ ಜೀವಿ ಅರಣ್ಯ ವಲಯದ ವ್ಯಾಪ್ತಿಯಲ್ಲಿ ನಡೆದಿದೆ.

ಮಸಿನಗುಡಿ ಸಮೀಪ ಕುರಿ ಮೇಯಿಸುತ್ತಿದ್ದ ನಾಗಿಯಮ್ಮಾಳ್ (65) ಹುಲಿ ದಾಳಿಗೆ ಬಲಿಯಾದ ಮಹಿಳೆ. ಎಂದಿನಂತೆ ಈಕೆ ಕುರಿ ಮೇಯಿಸುತ್ತಿದ್ದಾಗ ಹಠಾತ್ ದಾಳಿ ನಡೆಸಿದ ಹುಲಿ ಆಕೆಯ ಕತ್ತನ್ನು ಕಚ್ಚಿಕೊಂಡು ನೂರಾರು ಮೀಟರ್‌ಗಳಷ್ಟು ಎಳೆದೊಯ್ದು ಕೊಂದು ಹಾಕಿದೆ. ವಿಷಯ ತಿಳಿದು ಸ್ಥಳೀಯರು ಹಾಗೂ ಅರಣ್ಯ ಸಿಬ್ಬಂದಿ ಹುಡುಕಾಟ ನಡೆಸಿದಾಗ ಮಸಿನಗುಡಿ ಸಮೀಪದ ಮಾವಿನ ಹಳ್ಳ ಪ್ರದೇಶದಲ್ಲಿ ರುಂಡ ಬೇರ್ಪಟ್ಟ ಸ್ಥಿತಿಯಲ್ಲಿ ಮೃತ ದೇಹ ಪತ್ತೆಯಾಗಿದ್ದು, ಅರಣ್ಯ ಅಧಿಕಾರಿಗಳು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಹೂಟಗಳ್ಳಿ ನಗರಸಭೆ ಆರ್‌ಐ ರಾಮಸ್ವಾಮಿ, ಕೊಡಗಿನ ಪಿಡಬ್ಲ್ಯುಡಿ ಎಇಇ ಡಿ.ಎಂ. ಗಿರೀಶ್ ಮನೆ, ಕಚೇರಿ ಮೇಲೆ

ಲೋಕಾಯುಕ್ತ ದಾಳಿ

ರಾಜ್ಯಾದ್ಯಂತ 10 ಅಧಿಕಾರಿಗಳ ಆಸ್ತಿ, ದಾಖಲೆ ಪರಿಶೀಲನೆ



ಲೋಕಾಯುಕ್ತ ದಾಳಿಯಲ್ಲಿ ಪತ್ತೆಯಾದ ಚಿನ್ನಾಭರಣಗಳು

ದಾಳಿ ನಡೆದ ಅಧಿಕಾರಿಗಳು

- ಬೆಂಗಳೂರು (ಎಲೆಕ್ಟ್ರಾನಿಕ್ ಸಿಟಿ) – RTO ಸೂಪರಿಂಟೆಂಡೆಂಟ್ ಕುಮಾರಸ್ವಾಮಿ
- ಮಂಡ್ಯ – ನಗರ ಪಾಲಿಕೆ CAO ಪುಟ್ಟಸ್ವಾಮಿ
- ಬೀದರ್ – ಕೃಷ್ಣಾ ಮೇಲ್ದಂಡೆ ಯೋಜನೆ ಮುಖ್ಯ ಇಂಜಿನಿಯರ್ ಪ್ರೇಮ್ ಸಿಂಗ್
- ಮೈಸೂರು – ಹೂಟಗಳ್ಳಿ ನಗರ ಪಾಲಿಕೆ ರೆವಿನ್ಯೂ ಇನ್ಸ್‌ಪೆಕ್ಟರ್ ರಾಮಸ್ವಾಮಿ ಸಿ
- ಧಾರವಾಡ – ಕರ್ನಾಟಕ ವಿವಿಯ ಸಹ ಪ್ರಾಧ್ಯಾಪಕ ಸುಭಾಷ್ ಚಂದ್ರ
- ಧಾರವಾಡ – ಪ್ರಾ.ಪಶು ಕ್ಲಿನಿಕ್ ಹುಲಿಗೋಲ್ ಹಿರಿಯ ಪರೀಕ್ಷಕ ಸತೀಶ್
- ಶಿವಮೊಗ್ಗ – SIMS ಮೆಡಿಕಲ್ ಕಾಲೇಜಿನ FDA ಲಕ್ಷ್ಮೀಪತಿ ಸಿ.ಎನ್
- ದಾವಣಗೆರೆ – APMC ಸಹ ನಿರ್ದೇಶಕ ಪ್ರಭು ಜೆ.
- ಮೈಸೂರು – ಮಡಿಕೇರಿ PWD, ಸ.ಅ. ಇಂಜಿನಿಯರ್ ಗಿರೀಶ್ ಡಿ.ಎಂ
- ಹಾವೇರಿ – ಶೇಕಪ್ಪ, EE, ಯೋಜನಾ ನಿರ್ದೇಶಕ ಕಚೇರಿ ಹಾವೇರಿ

ಮೈಸೂರು, ನ. 25 (ಆರ್‌ಕೆ)– ಆದಾಯಕ್ಕಿಂತ ಅಧಿಕ ಆಸ್ತಿ ಹೊಂದಿದ್ದಾರೆಂಬ ದೂರುಗಳ ಹಿನ್ನೆಲೆಯಲ್ಲಿ ಲೋಕಾಯುಕ್ತ ಪೊಲೀಸರು ಮೈಸೂರಿನ ಹೂಟಗಳ್ಳಿ ನಗರಸಭೆ ರೆವಿನ್ಯೂ ಇನ್ಸ್‌ಪೆಕ್ಟರ್ (ಆರ್‌ಐ) ಸಿ. ರಾಮಸ್ವಾಮಿ ಹಾಗೂ ಕೊಡಗಿನ ಲೋಕೋಪಯೋಗಿ ಇಲಾಖೆ ಅಸಿಸ್ಟೆಂಟ್ ಎಗ್ಸಿಕ್ಯೂಟಿವ್ ಇಂಜಿನಿಯರ್ (ಎಇಇ) ಡಿ.ಎಂ. ಗಿರೀಶ್ ಸೇರಿದಂತೆ ರಾಜ್ಯದಾದ್ಯಂತ 10 ಮಂದಿ ಅಧಿಕಾರಿಗಳ ಮನೆ ಹಾಗೂ ಕಚೇರಿಗಳ ಮೇಲೆ ಇಂದು ದಾಳಿ ನಡೆಸಿ ಅಪಾರ ಪ್ರಮಾಣದ ನಗದು, ಚಿನ್ನಾಭರಣ ಹಾಗೂ ಸ್ಥಿರಾಸ್ತಿಗಳ ದಾಖಲೆ ಪತ್ರಗಳನ್ನು ವಶಪಡಿಸಿಕೊಂಡಿದ್ದಾರೆ.

ಕರ್ನಾಟಕ ಲೋಕಾಯುಕ್ತ ಮೈಸೂರು ಎಸ್ಪಿ ಟಿ.ಜೆ. ಉದೇಶ್ ಅವರ ಮಾರ್ಗದರ್ಶನದಂತೆ ಡಿವೈಎಸ್ಪಿಗಳಾದ ಶೈಲೇಂದ್ರ (ಮೈಸೂರು) ಮತ್ತು ದಿನಕರ್ ಶೆಟ್ಟಿ (ಚಾಮರಾಜನಗರ) ಅವರ ನೇತೃತ್ವದಲ್ಲಿ ಇಂದು ಮುಂಜಾನೆ 6 ಗಂಟೆ ವೇಳೆ ಟಿ. ನರಸೀಪುರ ಮತ್ತು ಬನ್ನೂರಿನ ರಾಮ ಸ್ವಾಮಿ ಅವರ ಮನೆ, ಕುಶಾಲನಗರ ಮತ್ತು ಮೈಸೂರಿನ ವಿಜಯನಗರ 3ನೇ ಹಂತದ ಗಿರೀಶ್ ಮನೆ ಬಾಗಿಲು ತಟ್ಟಿದ ಪೊಲೀಸರು ಶೋಧ ಕಾರ್ಯ ಆರಂಭಿಸಿದರು. ಆ ವೇಳೆ ಅಧಿಕಾರಗಳು ಮನೆಯಲ್ಲಿಯೇ ಇದ್ದರು ಎನ್ನಲಾಗಿದೆ.

ನಂತರ ಬೆಳಿಗ್ಗೆ 10 ಗಂಟೆಗೆ ಹೂಟಗಳ್ಳಿಯ ನಗರ ಸಭೆ ಕಛೇರಿ ಮತ್ತು ಕುಶಾಲನಗರದ ಲೋಕೋಪಯೋಗಿ ಇಲಾಖೆ ಅಸಿಸ್ಟೆಂಟ್ ಎಗ್ಸಿಕ್ಯೂಟಿವ್ ಇಂಜಿನಿಯರಿಂಗ್ ಕಚೇರಿಗಳ ಮೇಲೂ ಏಕಕಾಲದಲ್ಲಿ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರು ಮಧ್ಯಾಹ್ನದವರೆಗೆ ಶೋಧ ಕಾರ್ಯ ನಡೆಸಿದರು. ಅಲ್ಲದೇ ಅವರು ಈ ಹಿಂದೆ ಕೆಲಸ ಮಾಡುತ್ತಿದ್ದ ಕಚೇರಿಗಳು ಹಾಗೂ ಅವರ ಹತ್ತಿರದ ಸಂಬಂಧಿಕರ ಮನೆಗಳ ಮೇಲೂ ದಾಳಿ ನಡೆಸಿ ಆಸ್ತಿ ಮತ್ತಿತರ ದಾಖಲಾತಿಗಳನ್ನು ಪರಿಶೀಲಿಸಿದರು.



ರಾಮಸ್ವಾಮಿ

ಅವರು ಹೊಂದಿರುವ ಮನೆ, ನಿವೇಶನ, ಜಮೀನು, ವಾಹನಗಳು, ಬೆಳ್ಳಿ ಪದಾರ್ಥಗಳು, ಚಿನ್ನಾಭರಣ, ಬ್ಯಾಂಕ್ ಖಾತೆಯಲ್ಲಿರುವ ಹಣ, ಲಾಕರ್‌ನಲ್ಲಿರುವ ಆಭರಣ, ಹಣ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದರು. ಈ ಅಧಿಕಾರಿಗಳಿಂದ ಆಸ್ತಿ ಮಾಹಿತಿ, ದಾಖಲೆಗಳು ಪತ್ತೆಯಾಗಿವೆ ಎಂದಿರುವ ಲೋಕಾ ಯುಕ್ತ ಪೊಲೀಸರು, ಹೆಚ್ಚಿನ ಮಾಹಿತಿಯನ್ನು ಸದ್ಯಕ್ಕೆ ನೀಡಲಾಗದು ಎಂದಿದ್ದಾರೆ.

ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಆರ್‌ಟಿಓ ಕಚೇರಿ ಅಧೀಕ್ಷಕ ಕುಮಾರಸ್ವಾಮಿ, ಮಂಡ್ಯ ನಗರ ಸಭೆ ಮುಖ್ಯ ಲೆಕ್ಕಾಧಿಕಾರಿ ಪುಟ್ಟಸ್ವಾಮಿ, ಬೀದರ್‌ನ ಕೃಷ್ಣಾ ಮೇಲ್ದಂಡೆ ಯೋಜನೆಯ ಚೀಫ್ ಇಂಜಿನಿಯರ್ ಪ್ರೇಮ್ ಸಿಂಗ್, ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಸುಭಾಷ್ ಚಂದ್ರ ಹುಳಗೋಳದ ಪಶು ಆಸ್ಪತ್ರೆ ಹಿರಿಯ ಪರೀಕ್ಷಕ ಸತೀಶ್, ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಮತ್ತು ವೈದ್ಯಕೀಯ ಕಾಲೇಜಿನ ಪ್ರಥಮ ದರ್ಜೆ ಸಹಾಯಕ ಸಿ.ಎನ್. ಲಕ್ಷ್ಮೀಪತಿ, ದಾವಣಗೆರೆಯ ಎಪಿಎಂಸಿ ಉಪ ನಿರ್ದೇಶಕ ಜೆ. ಪ್ರಭು, ಹಾವೇರಿಯ ಯೋಜನಾ ನಿರ್ದೇಶಕರ ಕಛೇರಿ ಎಕ್ಸಿಕ್ಯೂಟಿವ್ ಇಂಜಿನಿಯರ್ ಶೇಕಪ್ಪ ಅವರ ಮನೆ, ಕಛೇರಿಗಳ ಮೇಲೂ ದಾಳಿ ನಡೆಸಿದ ಪೊಲೀಸರು ಅಪಾರ ಪ್ರಮಾಣದ ನಗದು, ಚಿನ್ನಾಭರಣ, ಸ್ಥಿರಾಸ್ತಿಗಳಿಗೆ ಸಂಬಂಧಿಸಿದ ದಾಖಲೆ ಪತ್ರಗಳನ್ನು ವಶಕ್ಕೆ ಪಡೆದಿದ್ದಾರೆ. ಇತ್ತೀಚೆಗಷ್ಟೇ ರಾಜ್ಯದ 48 ಕಡೆ 12 ಮಂದಿ ಸರ್ಕಾರದ ವಿವಿಧ ಇಲಾಖೆ ಅಧಿಕಾರಿಗಳ ಮನೆ, ಕಚೇರಿಗಳ ಮೇಲೆ ದಾಳಿ ನಡೆಸಿದ ಪೊಲೀಸರು 38.10 ಕೋಟಿ ರೂ. ಮೌಲ್ಯದ ಆಸ್ತಿಗಳನ್ನು ವಶಪಡಿಸಿಕೊಂಡಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಡಾ. ಅಂಬೇಡ್ಕರ್ ಅವರಿಂದ ರಚಿತ ಸಂವಿಧಾನ ಟೀಕಿಸುವ ಚಾಳಿ ಈಗ ಹೆಚ್ಚಾಗಿದೆ

- ಹೈಕೋರ್ಟ್ ನ್ಯಾಯಮೂರ್ತಿ ವಿ.ಶ್ರೀಶಾನಂದ ವಿಷಾದ
- ಸಂವಿಧಾನವನ್ನು ಅರ್ಥೈಸಿಕೊಳ್ಳುವಲ್ಲಿ ನಾವು ವಿಫಲರಾಗಿದ್ದೇವೆ



ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳಾದ ವಿ.ಶ್ರೀಶಾನಂದ 'ಸಂವಿಧಾನ ಪೀಠಿಕೆಯ ಮಹತ್ವ' ಉಪನ್ಯಾಸ ನಡೆಸಿಕೊಟ್ಟರು.

> 1976ರಲ್ಲಿ ಸಂವಿಧಾನಕ್ಕೆ ತಂದ 48ನೇ ತಿದ್ದುಪಡಿಗೂ ಮುನ್ನಾ, ಜಾತ್ಯಾತೀತ ಪದದ ಅರ್ಥ, ಆಶಯ ಬೇರೆ ಇತ್ತು. ಅದೊಂದು ನಿಂತ ನೀರಾಗಿತ್ತು. ಆ ಕೊಳಕ್ಕೆ ಕಲ್ಲೆಸೆದು ರಾಡಿ ಮಾಡಿಟ್ಟಿದ್ದೇವೆ.
> -ವಿ.ಶ್ರೀಶಾನಂದ, ನ್ಯಾಯಮೂರ್ತಿಗಳು, ಕರ್ನಾಟಕ ಉಚ್ಚ ನ್ಯಾಯಾಲಯ

ಮೈಸೂರು, ನ.25(ವಿವಿಹೆಚ್)– ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಸಂವಿಧಾನವನ್ನು ನಿರಂತರವಾಗಿ ದೂರುವ ಕೆಲಸಗಳು ಇಂದಿನ ಕಾಲಘಟ್ಟದಲ್ಲಿ ನಡೆಯುತ್ತಿರುವುದು ವಿಷಾದನೀಯ ಎಂದು ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ವಿ.ಶ್ರೀಶಾನಂದ ಅವರು ತಿಳಿಸಿದರು.

ಮೈಸೂರಿನ ನಾದಬ್ರಹ್ಮ ಭವನದ ಕೆ.ವಾಸುದೇವಾಚಾರ್ಯ ಸಭಾಂಗಣದಲ್ಲಿ ಪರಂಪರೆ ಸಂಸ್ಥೆ ವತಿಯಿಂದ ಆಯೋಜಿಸಿದ್ದ ಭಾರತ ಸಂವಿಧಾನ–ವಿಶೇಷ ಉಪನ್ಯಾಸಗಳು ವಿಷಯದಡಿ 'ಸಂವಿಧಾನದ ಪೀಠಿಕೆಯ ಮಹತ್ವ' ಕುರಿತಾಗಿ ಅವರು ಮಾತನಾಡಿದರು.

ಸ್ವಾತಂತ್ರ್ಯ ನಂತರದ ಭಾರತ ಕಟ್ಟುವ ಕೆಲಸ ಸುಲಭವಾಗಿರಲಿಲ್ಲ. ವೈವಿಧ್ಯಪೂರ್ಣ ದೇಶವನ್ನು, ಎಲ್ಲಾ ಕಲೆ, ಸಂಸ್ಕೃತಿ, ಆಚಾರ–ವಿಚಾರವನ್ನು ಒಗ್ಗೂಡಿಸಿ ಒಂದು ಕಾನೂನಿನ ಚೌಕಟ್ಟಿನೊಳಗೆ ತರುವ ಕೆಲಸ ಆಗಬೇಕಿತ್ತು. ಅದಕ್ಕಾಗಿಯೇ ಸಂವಿಧಾನ ರಚನೆ ಆಯಿತು ಎಂದರು.

ಅಂಬೇಡ್ಕರ್ ಅವರು ಸಂವಿಧಾನ ರಚನೆ ವೇಳೆ 'ಜಾತ್ಯಾತೀತ' ಮತ್ತು 'ಸಮಾಜವಾದ' ಪದಗಳನ್ನು ಸಂವಿಧಾನದಿಂದ ದೂರವಿಡಲು ಪ್ರಯತ್ನಿಸಿದ್ದರು. ಅವುಗಳು ಧರ್ಮಾಧಾರಿತ ರಾಜಕೀಯ ಅಧಿಕಾರಕ್ಕೆ ನಾಂದಿ ಹಾಡುತ್ತವೆ ಎಂಬುದು ಅವರ ವಾದವಾಗಿತ್ತು. ಇದನ್ನು ತಿಳಿಯದ ಎಷ್ಟೋ ಜನ ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಸಂವಿಧಾನವನ್ನೇ ದೂರುತ್ತಿದ್ದಾರೆ. ನಿಜವಾಗಿಯೂ ಈ ಎರಡು ಪದಗಳು ಎಲ್ಲರೂ ಮಲಗಿದ್ದಾಗ ನಂತರ ಹಿತ್ತಲ ಬಾಗಿಲಿನಿಂದ ಸಂವಿಧಾನಕ್ಕೆ ಬಂದು ಸೇರಿದ್ದವು ಎಂದು ಕಿಡಿಕಾರಿದರು.

ಸಂವಿಧಾನದಿಂದಲೇ ಅಧಿಕಾರಕ್ಕೆ ಬಂದು, ಅದನ್ನು ದುರುಪಯೋಗ ಮಾಡಿಕೊಂಡು ಸಂವಿಧಾನದ ಮೂಲ ಆಶಯಗಳನ್ನು ಹತ್ಯೆ ಮಾಡುವ ಕೆಲಸ ಸದ್ದಿಲ್ಲದೇ ನಡೆಯುತ್ತಿದೆ. ಪ್ರಶ್ನೆ ಮಾಡುವ ಮನೋಭಾವವನ್ನೇ ಹತ್ತಿಕ್ಕುವ ಸಂಚು ಹುಟ್ಟಿಕೊಂಡಿದ್ದು, ಸಮಾನತೆ ಎಂಬ ಅಸ್ತ್ರವನ್ನು ದುರುಪಯೋಗ ಮಾಡಿಕೊಂಡು ಜನರನ್ನು ಕತ್ತಲಿನಲ್ಲಿಡುವ ಕೆಲಸ ಆಗುತ್ತಿದೆ. ಸಂವಿಧಾನ ಎಂಬ ಬೆಳಕಿನಲ್ಲಿ ಕತ್ತಲಿನಲ್ಲಿ ಹುದುಗಿ ಹೋಗಿರುವ ನಮ್ಮ ಮೂಲ ಆಶಯಗಳನ್ನು ಹೊರ ತೆಗೆಯುವ ಕೆಲಸ ಇಂದು ಆಗುತ್ತಿಲ್ಲ ಎಂದು ಬೇಸರಿಸಿದರು.

ಅನುಕೂಲ ಸಿಂಧು ತೀರ್ಪುಗಳನ್ನು ಕೊಡುವುದರಿಂದ ಸಂವಿಧಾನಕ್ಕೆ ಅಪಚಾರ ಎಸಗಿದಂತೆ ಆಗುತ್ತದೆ. ಎಂತಹ ಸಂದರ್ಭದಲ್ಲೂ ಸಂವಿಧಾನದ ಪೀಠಿಕೆಯ ಆಶಯಕ್ಕೆ ತೊಡಕಾಗದಂತೆ ಎಚ್ಚರವಹಿಸಬೇಕು. ಇದರ ವಿರುದ್ಧವಾದ ತೀರ್ಪುಗಳನ್ನು ನೀಡಿದ್ದೇ ಆದಲ್ಲಿ ಮುಂದಿನ ಘೋರ ಕೃತ್ಯಕ್ಕೆ ಮುನ್ನುಡಿ ಬರೆದಂತೆ ಎಂದರು.

ದೇಶದ ಪ್ರತಿಯೊಬ್ಬರಿಗೂ ಸಮಾನ ಅವಕಾಶ ಕೊಡುವಂತೆ ಸಂವಿಧಾನ ಹೇಳಿದೆ. ಸಂವಿಧಾನವನ್ನು ಕೀಳಾಗಿ ಕಾಣುತ್ತ ಬರುತ್ತಿದ್ದರೂ ಅದು ಎಲ್ಲರನ್ನು ರಕ್ಷಿಸುತ್ತ ಬರುತ್ತಿದೆ. ಸಂವಿಧಾನ ಸರಿಯಾಗಿದೆ. ಸಂವಿಧಾನ ರಚಿಸಿದವರು ದೇಶವನ್ನು ಕಾಪಾಡಲು ಬೇಕಾದ ಎಲ್ಲಾ ಅಂಶಗಳನ್ನು ಕೊಟ್ಟು ಹೋಗಿದ್ದಾರೆ. ನಾವು ಅದನ್ನು ಅರ್ಥೈಸಿಕೊಳ್ಳುವ ಪ್ರಯತ್ನ ಮಾಡಲೇ ಇಲ್ಲ. ತಿಳಿದಷ್ಟೆ ಸತ್ಯ ಎಂದು ನಂಬಿ, ಕತ್ತಲಿನಲ್ಲಿ ಒಡೆದಾಡುತ್ತಿದ್ದೇವೆ. ಸಂವಿಧಾನ ರಕ್ಷಣೆ ವಿಚಾರಕ್ಕೆ ಬಂದರೆ ವರ್ತಮಾನದಲ್ಲಿ ನಂಬಿಕೆಯೇ ಇಲ್ಲವಾಗಿದೆ. ಆದರೂ ನಾನು ನಿರಾಶವಾದಿಯಲ್ಲ. ಸಂವಿಧಾನದ ಮಹತ್ವವನ್ನು ಎತ್ತಿ ಹಿಡಿಯುವಲ್ಲಿ ನಿರಂತರವಾಗಿ ಶ್ರಮಿಸುತ್ತೇನೆ ಎಂದರು.

ಬುಡಕಟ್ಟು ಮಹಿಳೆ ದೇಶದ ಪ್ರಥಮ ಪ್ರಜೆ ಆಗಲು. ವಂಶಾಡಳಿತ ತೊಡೆದು ಪ್ರಜಾಪ್ರಭುತ್ವಕ್ಕೆ ಬುನಾದಿ ಹಾಕಿದ್ದು, ಎಲ್ಲರಿಗೂ ಎಲ್ಲಾ ಹಕ್ಕು ನೀಡಿದ್ದು ಸಂವಿಧಾನ. ಯಾವುದೇ ಧರ್ಮದ ವ್ಯಕ್ತಿ ಇನ್ನಾವುದೇ ಧರ್ಮ ಗ್ರಂಥವನ್ನು ಓದಿದರೂ ತೊಂದರೆಯಿಲ್ಲ. ಎಲ್ಲಾ ಎಲ್ಲೆ, ಗಡಿ ಮೀರಿದ ದೇಶದ ಪವಿತ್ರ ಗಂಥ ಎಂದರೆ ನಮ್ಮ ಸಂವಿಧಾನ. ಇದನ್ನು ನಾವು ಗೌರವಿಸುವ ಜೊತೆಗೆ ನಾಗರಿಕರಾಗಿ ದೇಶದ ಒಳಿತಿಗಾಗಿ ಪಾಲಿಸಬೇಕು ಎಂದು ಸೂಚಿಸಿದರು.

ಮೈಸೂರು ಜಿಲ್ಲಾ ಪ್ರಧಾನ ನ್ಯಾಯಾಧೀಶರಾದ ಉಷಾರಾಣಿ, ನ್ಯಾಯಾಧೀಶರಾದ ಸಾವಿತ್ರಿ, ನಾಗರಾಜ್ ಪರಂಪರೆ ಅಧ್ಯಕ್ಷ ಸುಂದರ್ ಉಪಸ್ಥಿತರಿದ್ದರು.

PUBLIC NOTICE

NOTICE IS HERE BY GIVEN to the General public that my client is intending to purchase the schedule property morefully described in the schedule herein below from Sri. **Uday K.B. S/o Dr. Bogegowda M, Residing at No. 004, Orchid Rakesh Fantasy Garden, 2nd Main, 4th Cross, Kasturi Nagar, Bangalore North, and Sri. Sanjay B.S/o Dr. Bogegowda M Residing at No. 17, Bellary Road, Sadashiva Nagar, Bangalore** and have been negotiating the formalities of completing the sale transaction in respect of schedule property.


All or any person/s having any claim of any nature whatsoever in the Schedule Property by way of Sale, exchange, lease, license, trust, lien, easement, inheritance, possession, attachment, mortgage, charge, gift, or otherwise of any nature whatsoever including any financial institutions, are hereby required to make the same known in writing with copies of all supporting documents to the undersigned within **FIFTEEN DAYS** from the date of publication of this Notice, failing which the same shall be deemed to have been waived and my client will proceed and finalize the sale transaction with the above person. If any objections are received subsequent to the said date, the same will not be considered.

SCHEDULE

All that piece and parcel of House bearing Door No.633, N-20, (Bharkat Manzil) situated in Vasanthmahal Road (formerly known as Hydar Ali Road), Nazarbad, Nazarbad Mohalla, Mysore Ward No. 61. Bounded on: East by-Vasanthamahal Road, West by- Conservancy Lane, North by-House property belongs to Sri Dharanipal, South by-House belongs to Late Dalvoy Devaraj Urs Property sital area measuring: East to West 41.148082 Meters, North to South 28.65125 Meters

Total area measuring 1178.76 Sq. Meters Building plinth area measuring - 464.515 Sq. Meters

Sd/- **M.D. HARISH KUMAR HEGDE,** B.Com, LLB., Advocate
M/s. HEGDE ASSOCIATES, Advocates & Legal consultants,
No.1064, New CH-16, Hotel Airlines Complex, Jayalakshmivilas Road, Chamarajapuram, Mysore-570005. Ph: 0821-4252194
Date: 25/11/2025



ನಕ್ಕರೆ ಅದೇ ಸ್ವರ್ಗ

ಗುಂಡ ಬೀಡಿ ಸೇದುವ ಚಟ ಕಲಿತಿದ್ದ. ಅವನ ತಂದೆ ಚಟ ಬಿಡಿಸುವ ಸಲುವಾಗಿ ಯೋಗ ಕ್ಲಾಸಿಗೆ ಸೇರಿಸಿದ. ಆದರೆ ಈಗ ಗುಂಡ ಕಾಲಿನಿಂದಲೂ ಬೀಡಿ ಸೇದುವುದನ್ನು ಕಲಿತುಬಿಟ್ಟ!

ಮೈಸೂರು ಮಿತ್ರ

ಬುಧವಾರ, 26 ನವೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಒಂದು ಸಣ್ಣ ಮಾತು ಮನಸನ್ನು ಗಾಯಗೊಳಿಸುತ್ತೆ.
ಒಂದು ಸಣ್ಣ ಸುಳ್ಳು ಸ್ನೇಹನ ದೂರ ಮಾಡುತ್ತೆ.
ಒಂದು ಸಣ್ಣ ಅನುಮಾನ ಸಂಬಂಧಗಳನ್ನು ಬೇರೆ ಮಾಡುತ್ತೆ.

ವೇದ ಸುಳ್ಳಾದರೂ	ಹೊಳೆಯುವುದೆಲ್ಲ
ಗಾದೆ ಸುಳ್ಳಾಗದು	ಬಂಗಾರವಲ್ಲ

ನಿಮ್ಮ ಪತ್ರಗಳು

ಕಾಂಗ್ರೆಸ್ ಪಕ್ಷ ಮತ್ತಷ್ಟು ಪ್ರಪಾತಕ್ಕೆ ಬೀಳಬಹುದು

ಮಾನ್ಯರೆ,

ರಾಜ್ಯದ ಆಡಳಿತರೂಢ ಕಾಂಗ್ರೆಸ್ ಪಕ್ಷದಲ್ಲಿ ನಾಯಕತ್ವಕ್ಕಾಗಿ ನಡೆಯುತ್ತಿರುವ ಜಟಾಪಟಿ ನಿಜಕ್ಕೂ ದುರದೃಷ್ಟಕರವಾಗಿದ್ದು, ರಾಜ್ಯದ ಜನತೆಗೆ ಬಿಟ್ಟಿ ಮನರಂಜನೆ ನೀಡುತ್ತಿದೆ. ವಿರೋಧ ಪಕ್ಷಗಳಾದ ಬಿಜೆಪಿ ಹಾಗೂ ಜೆಡಿಎಸ್‌ಗೆ ಸರ್ಕಾರದ ವಿರುದ್ಧ ಹರಿಹಾಯಲು ಒಳ್ಳೆಯ ಅಸ್ತ್ರವೇ ಸಿಕ್ಕಿದಂತಾಗಿದೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರಿಗೆ ಇದರಿಂದ ತೀವ್ರ ಬೇಸರವಾಗಿದೆಯೆಂದು ತಿಳಿದು, ಈ ಕಗ್ಗಂಟನ್ನು ಪಕ್ಷದ ಹೈಕಮಾಂಡ್ ಬಗೆಹರಿಸುವ ಸೂಚನೆ ನೀಡಿದ್ದಾರೆ. ಪಕ್ಷದ ಅಧ್ಯಕ್ಷರೇ ಈ ರೀತಿ ನಿಸ್ಸಹಾಯಕರಾಗಿ ಕೈಚೆಲ್ಲಿ ಕುಳಿತು ಬಿಟ್ಟರೇ ಹೇಗೆ? ಇನ್ನು ನಾಯಕತ್ವದ ಬಿಕ್ಕಟ್ಟನ್ನು ಪರಿಹರಿಸುವ ಹೊಣೆಗಾರಿಕೆ ಶ್ರೀಮತಿ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಹೆಗಲಿಗೆ ಬೀಳಬಹುದು. ನಾಯಕತ್ವಕ್ಕಾಗಿ ನಡೆಯುತ್ತಿರುವ ಈ ಹಾದಿ ರಂಪ, ಬೀದಿ ರಂಪಕ್ಕೆ ಈಗಲಾದರೂ ತೆರೆ ಎಳೆಯದಿದ್ದರೆ, ದೇಶಾದ್ಯಂತ ಕುಸಿದು ಹೋಗುತ್ತಿರುವ ಕಾಂಗ್ರೆಸ್ ಪಕ್ಷ ಮತ್ತಷ್ಟು ಪ್ರಪಾತಕ್ಕೆ ಬೀಳಬಹುದು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಮನೆ ಮನೆಗೆ ಪೊಲೀಸ್ ಶ್ಲಾಘನೀಯ

ಮಾನ್ಯರೆ,

ಮೈಸೂರಿನ ಬೋಗಾದಿಯಲ್ಲಿರುವ ನಮ್ಮ ಮನೆಗೆ ಪೊಲೀಸ್ ಅಧಿಕಾರಿಯೊಬ್ಬರು ಬಂದು ' ಮನೆ ಮನೆಗೆ ಪೊಲೀಸ್' ಎಂಬ ವಿನೂತನ ಜನ ಸ್ನೇಹಿ ಸೇವೆಯ ಬಗ್ಗೆ ಮಾಹಿತಿ ನೀಡಿದರು. ಯಾವುದೇ ತುರ್ತು ಪರಿಸ್ಥಿತಿಯಲ್ಲಿ ನಾವು ಸಂಪರ್ಕಿಸಲು ದೂರವಾಣಿ ಹಾಗೂ ನಿಯೋಜಿತ ಪೊಲೀಸ್ ಅಧಿಕಾರಿಯೊಬ್ಬರ ಮೊಬೈಲ್ ಸಂಖ್ಯೆ ನೀಡಿ ಈ ಅಭಿಯಾನದ ಮಾಹಿತಿ ಇರುವ ಸ್ಟಿಕರ್ ಒಂದನ್ನು ಮನೆಯ ಬಾಗಿಲಿನಲ್ಲಿ ಅಂಟಿಸಿ ಅಗತ್ಯವಿರುವಾಗ ಕರೆ ಮಾಡಬಹುದು ಎಂಬ ಸಂದೇಶವನ್ನು ನೀಡಿದ್ದಾರೆ. ಪೊಲೀಸ್ ಇಲಾಖೆಯ ಈ ಕಾರ್ಯಕ್ರಮ ಶ್ಲಾಘನೀಯ.

–ಲಕ್ಷ್ಮಣ್ ಗೊರ್ಲಕಟ್ಟೆ, ಗದ್ದಿಗೆ ರಸ್ತೆ, ಬೋಗಾದಿ, ಮೈಸೂರು

ರಸ್ತೆ ಬದಿಯ ನಕಲಿ ಆಯುರ್ವೇದ ಗುಡಾರ ನಿರ್ಬಂಧಿಸಿ

ಮಾನ್ಯರೆ,

ಬೆಂಗಳೂರು ನಗರದ ಇತ್ತೀಚಿನ ಘಟನೆ ನಮ್ಮ ಸಮಾಜದಲ್ಲಿ ಹೆಚ್ಚುತ್ತಿರುವ ವೈದ್ಯಕೀಯ ಮೋಸದ ಗಂಭೀರತೆಯನ್ನು ಸ್ಪಷ್ಟವಾಗಿ ತೋರಿಸಿದೆ. ರಸ್ತೆ ಬದಿಯ ಆಯುರ್ವೇದ ಗುಡಾರದಲ್ಲಿ ಚಿಕಿತ್ಸೆ ಪಡೆಯಲು ಹೋಗಿದ್ದ ಟೆಕ್ ಉದ್ಯೋಗಿ ದೊಡ್ಡ ಮೊತ್ತದ ಹಣ ಕಳೆದುಕೊಂಡಿದ್ದು ಮಾತ್ರವಲ್ಲ, ಮೂತ್ರಪಿಂಡ ಮತ್ತು ಯಕೃತ್ ಹಾನಿಗೂ ಒಳಗಾಗಿದ್ದಾರೆ. ಪೊಲೀಸರಿಗೂ ದೂರು ನೀಡಿದ್ದಾರೆ. ಇದೊಂದು ಕಳವಳಕಾರಿ ಸಂಗತಿ.

ಆಯುರ್ವೇದದ ಹೆಸರಿನಲ್ಲಿ ನಡೆಯುತ್ತಿರುವ ಇಂತಹ ಅನಧಿಕೃತ ಗುಡಾರಗಳು ಜನರ ಭಯ ಮತ್ತು ಅಜ್ಞಾನವನ್ನು ದುರುಪಯೋಗ ಪಡಿಸಿಕೊಂಡು, ಪರೀಕ್ಷಿಸದ ಮತ್ತು ಅಪಾಯಕಾರಿಯಾದ ವಸ್ತುಗಳನ್ನು ಮಾರಾಟ ಮಾಡುತ್ತಿವೆ. ಇವರಿಗೆ ಯಾವುದೇ ವೈದ್ಯಕೀಯ ಅರ್ಹತೆ ಅಥವಾ ಪರವಾನಗಿ ಇಲ್ಲದೆ ಚಿಕಿತ್ಸೆ ನೀಡುತ್ತಿರುವುದು ಸಾರ್ವಜನಿಕ ಆರೋಗ್ಯಕ್ಕೆ ದೊಡ್ಡ ಅಪಾಯವನ್ನು ಉಂಟುಮಾಡುತ್ತದೆ. ಇಂತಹ ನಕಲಿ ಅಯುರ್ವೇದ ಗುಡಾರಗಳು ಮುಕ್ತವಾಗಿ ಕಾರ್ಯನಿರ್ವಹಿಸುತ್ತಿರುವುದು ಸರ್ಕಾರದ ನಿಯಂತ್ರಣ ಮತ್ತು ಮೇಲ್ವಿಚಾರಣೆಯ ದೌರ್ಬಲ್ಯವನ್ನು ತೋರಿಸುತ್ತದೆ. ಸರ್ಕಾರವು ತಕ್ಷಣವೇ ಇಂತಹ ಅನಧಿಕೃತ ಗುಡಾರಗಳನ್ನು ಮುಚ್ಚಿಸಿ, ಸರಿಯಾದ ವೈದ್ಯಕೀಯ ಮಾನದಂಡಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ಜೊತೆಗೆ, ಜನರಲ್ಲಿ ನಕಲಿ ಮತ್ತು ನಿಜವಾದ ಆಯುರ್ವೇದ ಚಿಕಿತ್ಸೆಗಳ ನಡುವಿನ ವ್ಯತ್ಯಾಸದ ಬಗ್ಗೆ ಜಾಗೃತಿ ಮೂಡಿಸುವುದು ಅತ್ಯಂತ ಅಗತ್ಯ.

–ಡಾ.ಎಚ್.ಕೆ. ವಿಜಯಕುಮಾರ್, ಮೈಸೂರು.

ಪಕ್ಷದ ಹಿಡಿತ ಗಾಂಧಿ ಕುಟುಂಬದಿಂದ ದೂರ

ಮಾನ್ಯರೆ,

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ಅಧಿಕಾರದ ಹಸ್ತಾಂತರ ಕೊನೆಯ ಘಟ್ಟ ತಲುಪಿದೆ. ಇದು ಸರ್ಕಾರದ ಅಳಿವು – ಉಳಿವಿನ ಪ್ರಶ್ನೆಯೂ ಆಗಿದೆ. ಇಂತಹ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡ ಹಾಗೂ ಹೈಕಮಾಂಡ್‌ನ ಒಂದು ಭಾಗವೇ ಆಗಿರುವ ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕರೂ ಆಗಿರುವ ರಾಹುಲ್ ಗಾಂಧಿ ಅವರು ವಿದೇಶಕ್ಕೆ ಹೋಗಿರುವುದು ನಾಯಕ ಸ್ಥಾನದ ಬೇಜವಾಬ್ದಾರಿ ಎನ್ನಬೇಕು. ಇಡೀ ರಾಷ್ಟ್ರದಲ್ಲೇ ಕೇವಲ ಮೂರು ರಾಜ್ಯಗಳನ್ನು ಹೊರತುಪಡಿಸಿದರೆ ಬೇರೆಲ್ಲೂ ಕಾಂಗ್ರೆಸ್ ಪಕ್ಷದ ಸರ್ಕಾರ ಇಲ್ಲ. ಈಗ ಕಾಂಗ್ರೆಸ್ ಹೈಕಮಾಂಡ್ ಪಾಲಿಗೆ ಕಾಂಗ್ರೆಸ್ ಕರ್ನಾಟಕದಲ್ಲಿ ತನ್ನ ಸರ್ಕಾರವನ್ನು ಉಳಿಸಿಕೊಳ್ಳುವ ಅನಿವಾರ್ಯತೆಯೂ ಇದೆ. ಆದರೆ ಕಾಂಗ್ರೆಸ್ ಹೈಕಮಾಂಡ್ ಈಗ ಸಂಪೂರ್ಣ ದುರ್ಬಲವಾಗಿದೆ. ಪಕ್ಷದ ಹಿಡಿತ ಗಾಂಧಿ ಕುಟುಂಬದಿಂದ ದೂರವಾಗುತ್ತಿದೆ. ಜನರು ಕೊಟ್ಟಿರುವ ಅಧಿಕಾರವನ್ನು ಉಳಿಸಿಕೊಳ್ಳಲು ಸಾಧ್ಯವಾಗದಂತಹ ಪರಿಸ್ಥಿತಿ ಕಾಂಗ್ರೆಸ್ ಪಕ್ಷಕ್ಕೆ ಇದೆ. ಸದ್ಯದ ಪರಿಸ್ಥಿತಿಯಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್ ಹೈಕಮಾಂಡ್ ತನ್ನ ಸರ್ಕಾರವನ್ನು ಉಳಿಸಿಕೊಳ್ಳದೇ ಹೋದರೆ, ಮುಂದೆಂದೂ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರಲು ಸಾಧ್ಯವೇ ಇಲ್ಲ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ರಾಜಕೀಯ ಚದುರಂಗ

ಮಾನ್ಯರೆ,

ತೃಷೆಗಿಂತ ಅಧಿಕಾರ ದಾಹವೇ ಮಿಗಿಲಾಗಿ
ಅರಾಜಕತೆಯ ಅರಸೊತ್ತಿಗೆ
ಮೋಜು ಬಾಜಿನ ಬಲಾಬಲಗಳ ರಂಗಸಜ್ಜಿಕೆ
ಪ್ರಜಾಹಿತ ರಕ್ಷಣೆಗೆ ಸಿಕ್ಕದೆಷ್ಟೋ ಅನುದಾನ
ನರಿಬುದ್ಧಿಯ ಚಾಣಕ್ಷರಿಗೆ ದಕ್ಕುವುದೆಷ್ಟೋ ಹಣ
ಪ್ರಾಮಾಣಿಕತೆ ನ್ಯಾಯನಿಷ್ಠೆಗಿಲ್ಲ ಆಸ್ಪದ ಅನುಷ್ಠಾನ
ಬೇಲಿಯೇ ಎದ್ದು ಹೊಲ ಮೇಯ್ದಂತೆ
ಸಾರ್ವಜನಿಕ ಸಮಾಜದ ಸಮಸ್ಯೆ ನೂರೆಂಟು
ಬಗೆಹರಿಯಲಾರದ ಕಗ್ಗಂಟು

–ಯಶೋಧ ರಾಮಕೃಷ್ಣ, ವಿಜಯನಗರ, ಮೈಸೂರು



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಕಲೆಯೇ ಸಂಸ್ಕೃತಿಮುಕುರ

ಜೀವನವನ್ನು ಸುಂದರಗೊಳಿಸುವ, ಬದುಕನ್ನು ಸೊಬಗಿನಿಂದ ತುಂಬಿಸುವ ಎಲ್ಲವೂ ಕಲೆಗಳೇ. ಗಾನ, ನಾಟ್ಯ, ವಾದ್ಯ ಇವೆಲ್ಲವೂ ಹುಟ್ಟಿದುದು ಬದುಕಿನ ಚಾರುತ್ವವನ್ನು ಹೆಚ್ಚಿಸುವುದಕ್ಕಾಗಿ. ಸಂಸ್ಕೃತಿ, ಸುಸಂಸ್ಕಾರ, ಸಂಭಾವಿತತ್ವ, ಇವೆಲ್ಲ ಪ್ರತಿಬಿಂಬಿತವಾಗುವುದು ಕಲೆಯಲ್ಲ. ಸಾಹಿತ್ಯ ಕಲೆಯಲ್ಲಿ ಪರಿಣತರಾದವರ ಮಾತಿನಲ್ಲಿ, ಬರವಣಿಗೆಯಲ್ಲಿ, ಕವಿತೆಯಲ್ಲಿ ಸಂಸ್ಕೃತಿಯ ಪ್ರತಿಬಿಂಬವನ್ನು ಕಾಣುತ್ತೇವೆ. ಹಾಗೆಯೇ ಕುಂಚ ಕಲಾವಿದನ ಬಣ್ಣದಲ್ಲಿ, ಚಿತ್ರಕಲಾವಿದನ ರೇಖೆಗಳಲ್ಲಿ, ಗಾಯಕನ ಸ್ವರಗಳ ವಿನ್ಯಾಸದಲ್ಲಿ, ನರ್ತಕಿಯ ಹೆಜ್ಜೆಯ ಕೌಶಲದಲ್ಲಿ ಸಂಸ್ಕೃತಿಯು ಪ್ರತಿಬಿಂಬಿತವಾಗುತ್ತದೆ. ಆದ್ದರಿಂದಲೇ ಕಲೆಯೇ ಸಂಸ್ಕೃತಿಯ ಮುಕುರ ಎಂದು ಕವಿಯು ಹೇಳಿರುವುದು. ಮುಕುರ ಎಂದರೆ ಕನ್ನಡಿ. ಕನ್ನಡಿಯಲ್ಲಿ ಮುಖವು ಪ್ರತಿಬಿಂಬಿತವಾಗುವಂತೆ ಕಲೆಯಲ್ಲಿ ಸಂಸ್ಕೃತಿ ಪ್ರತಿಬಿಂಬಿತವಾಗುತ್ತದೆ. ಒಂದು ದೇಶ ನಾಗರಿಕತೆಯ ಯಾವ ಮೆಟ್ಟಿಲನ್ನು ಏರಿದೆಯೆಂದು ತಿಳಿಯಲು ಅದರ ಕಲೆಗಳಿಂದಲೇ ನೆರವು ದೊರೆಯುತ್ತದೆ. ಇದನ್ನು ಮುದ್ದುರಾಮ ಹೇಗೆ ಹೇಳುತ್ತಾನೆ ನೋಡೋಣ :

ಚೆಂದ ನೋಟಕೆ ಒಲಿದು, ನಲಿವ ಮನಸಿಗೆ ಮಣಿದು
ರಸಗೀತೆಯೊಲಿಪುದೆ ಸೌಂದರ್ಯ ನಿಧಿಯೊ!
ಲಾವಣ್ಯ ದರ್ಶನವೆ ಜೀವಿತಕೆ ಆಸರೆಯೊ
ಕಲೆಯೆ ಸಂಸ್ಕೃತಿ ಮುಕುರ ಮುದ್ದುರಾಮ ॥

ಸ್ವರವಿನ್ಯಾಸಗಳಿಂದ ರಾಗತಾನಗಳಿಂದ ರಸವತ್ತಾದ ಗೀತೆ ಸೌಂದರ್ಯದ ನಿಧಿಯಾಗುತ್ತದೆ. ಚೆಂದವಾದ ನೋಟಕ್ಕೆ ಮನಸ್ಸು ಒಲಿದಾಗ, ಅದು ಸತ್ಯ ಸೌಂದರ್ಯಕ್ಕೆ ಮಣಿಯುತ್ತದೆ, ನಮಿಸುತ್ತದೆ. ಇದನ್ನೇ ಕಾಳಿದಾಸ ಮಹಾಕವಿಯು ಅಭಿಜ್ಞಾನ ಶಾಕುಂತಲದಲ್ಲಿ –

ರಮ್ಯಾಣಿ ವೀಕ್ಷ್ಯ ಮಧುರಾಂಶ್ಚ ನಿಶಮ್ಯ ಶಬ್ದಾನ್
ಪರ್ಯುತ್ಸುಕೀಭವತಿ ಯತ್ ಸುಖಿತೋಪಿ ಜಂತುಃ।
ತಚ್ಚೇತಸಾ ಸ್ಮರತಿ ನೂನಮಬೋಧಪೂರ್ವಂ
ಭಾವಸ್ಥಿರಾಣಿ ಜನನಾಂತರ ಸೌಹೃದಾನಿ ॥

ಎಂಬ ಪದ್ಯದಿಂದ ಸೂಚಿಸಿದ್ದಾನೆ. ಸಂಸ್ಕಾರ ಶೂನ್ಯರಿಗೆ ಸಮುದ್ರವನ್ನು ನೋಡಿದರೂ ಹಿಮಾಲಯ ಶಿಖರವನ್ನು ಕಂಡರೂ, ಮೋಹನ ರಾಗದ ಆಲಾಪನೆಯನ್ನು ಕೇಳಿದರೂ ಏನೂ ಪರಿಣಾಮವಾಗದಿರಬಹುದು. ಆದರೆ ಸಂಸ್ಕೃತಿ ಮಂತರನ್ನು ಅವು ಮೈಮರೆಸುತ್ತವೆ. ತಮ್ಮ ಅರಿವಿಗೆ ಬರದಂತೆಯೇ ಅವರು ಜನನಾಂತರದ, ಎಂದರೆ ಹಿಂದಿನ ಜನ್ಮಗಳ ಅನುಭವಗಳ ಅಲೆಗಳಲ್ಲಿ ತೇಲಿ ಹೋಗುತ್ತಾರೆ. ಆ ರಸಗೀತೆಯ ಗುಂಗಿನಲ್ಲಿ ಸತ್ಯ–ಶಿವ–ಸುಂದರದ ಸಾಕ್ಷಾತ್ಕಾರದಲ್ಲಿ ತಲ್ಲೀನರಾಗುತ್ತಾರೆ. ಅಲೌಕಿಕವಾದ ಲಾವಣ್ಯದ ಲೋಕೋತ್ತರ ಚಾರುತ್ವದ ನಿಧಿಯನ್ನು ಪ್ರತ್ಯಕ್ಷವಾಗಿ ಕಂಡುಕೊಳ್ಳುತ್ತಾರೆ. ಅದೇ ಜೀವಿತಕ್ಕೆ ಆಸರೆ, ಆಶ್ರಯ, ಆಧಾರ. ಒಬ್ಬೊಬ್ಬನ ಸಂಸ್ಕೃತಿಯ ರೂಪ ಕಾಣಿಸಿಕೊಳ್ಳುವುದು ಕಲಾಸೃಷ್ಟಿಯಲ್ಲಿ, ಕಲಾನುಭವದಲ್ಲಿ. ಕಲಾನುಭವ, ಕಲೆಯ ಆರಾಧನೆ ಶುದ್ಧ ಮನಸ್ಸಿನಿಂದಾಗಬೇಕು. ಪಂಪನ ಕಾವ್ಯವನ್ನು ಓದಿ, ಕೇಳಿ ಆಸ್ವಾದಿಸುವಾಗ ಆ ಮಹಾಕವಿಯ ಜಾತಿ, ಮತ, ದೇಶಗಳ ಚಿಂತೆ ಬೇಡ. ಕಲೆಯನ್ನು ಕಲೆಯೆಂದು ನಾವು ಸವಿಯಬೇಕು. ಇದನ್ನು ಮುದ್ದುರಾಮ ನೆನಪಿಸುತ್ತಾನೆ–

ಕಾವ್ಯ ಪದ ನೈಪುಣ್ಯ ಗಾನ ದನಿ ಮಾಧುರ್ಯ
ಮೂರ್ತಿ ಮೃತ್ತಿಕೆಯಿಂದ, ಶಿಲ್ಪ ಶಿಲೆಯಿಂದ
ಜಾತಿ ಮತ ಸೀಮೆಗಳ ಸೋಂಕಿಲ್ಲ ಅಭಿರುಚಿಗೆ
ಆರಾಧಿಸೋ ಕಲೆಯ ಮುದ್ದುರಾಮ.

ಕಲೆಯನ್ನು ಕಲೆಯೆಂದು ಶುದ್ಧ ಮನಸ್ಸಿನಿಂದ ಆರಾಧಿಸಬೇಕು. ಕಾವ್ಯವನ್ನು ರಚಿಸಬೇಕಾದರೆ ಪದ ನೈಪುಣ್ಯ ಬೇಕು. ಕವಿ ಪದ್ಯವನ್ನು ಹೇಗೆ ರಚಿಸುತ್ತಾನೆಂದು ನೋಡೋಣ. ಸಂಜೆಯ ನಸುಗತ್ತಲಿನಲ್ಲಿ ಹಕ್ಕಿಗಳ ಹಿಂಡು ಸಾಲುಗಟ್ಟಿ ಹಾರುತ್ತಿರುವುದನ್ನು ನೋಡುತ್ತಾನೆ. ಮನಸ್ಸಿನಲ್ಲಿ ವಿಶೇಷ ಅನುಭವ ಉಂಟಾಗುತ್ತದೆ. ಅದನ್ನು ಲೋಕಕ್ಕೆ ತಿಳಿಸಬೇಕೆಂಬ ಉತ್ಕಟ ತವಕ ಅವನಲ್ಲಿ ಮೂಡುತ್ತದೆ. ಏನನ್ನು ಹೇಳಬೇಕು, ಹೇಗೆ ಹೇಳಬೇಕು ಎಂದು ಚಿಂತಿಸಿದಾಗ ಅರ್ಥಸ್ವರೂಪವೂ ಅದರ ಅಭಿವ್ಯಕ್ತಿಗೆ ಅನುಗುಣವಾದ ಪದಪುಂಜವೂ ಪ್ರತಿಭೆಗೆ ಗೋಚರವಾಗುತ್ತದೆ. ಆಗ ಕವಿತೆಯ ಹುಟ್ಟು, ಕಾವ್ಯ ಪದನೈಪುಣ್ಯ.

ಒಂದೇ ಹಾಡನ್ನು ನೂರು ಜನ ನೂರು ರೀತಿಯಲ್ಲಿ ಹಾಡುತ್ತಾರೆ. ಅದು ಗಾನವಾಗುವುದು ದನಿಯಲ್ಲಿ ಮಾಧುರ್ಯವಿದ್ದಾಗ, ದನಿಯೇ ಇಲ್ಲದಿದ್ದರೆ, ಅಥವಾ ಅದು ಕರ್ಕಶವಾಗಿದ್ದರೆ ಗಾನ ಎಲ್ಲಿಂದ ಬಂದೀತು? ಗಣೇಶನಮೂರ್ತಿ ತಯಾರಾಗುವುದು ಮೃತ್ತಿಕೆಯಿಂದ, ದೇವರ ವಿಗ್ರಹದ ಶಿಲ್ಪ ಉಂಟಾಗುವುದು ಶಿಲೆಯಿಂದ – ಕಲಾಸೃಷ್ಟಿಗೆ, ಕಲೆಯನ್ನು ಆಸ್ವಾದಿಸುವ ಅಭಿರುಚಿಗೆ ಜಾತಿಯ, ಮತದ, ಹೆಣ್ಣು ಗಂಡೆಂಬ ಸೀಮೆಯ ಸೋಂಕು ತಟ್ಟುವುದಿಲ್ಲ, ತಟ್ಟಬಾರದು. ಕಲೆಯನ್ನು ಅದರ ಸೊಬಗಿಗಾಗಿ ಆರಾಧಿಸಬೇಕು. ಕಲೆಗಾರನ ಇತರ ವಿಷಯಗಳು ಅಪ್ರಸ್ತುತ.

ಸಾಹಿತ್ಯ ಕಲೆಗೆ ಬೇಕಾದ ಸಾಮಗ್ರಿ ಏನು? ಚಮತ್ಕಾರಜನಕ ಅರ್ಥ, ಮೃದು ಮಧುರ ಪದಗಡಣ. ಪದಗಳೆಲ್ಲವೂ ಆಗಿರುವುದು ಅಕಾರಾದಿ ಹಕಾರಾಂತ ವರ್ಣಮಾಲೆಯ ಅಕ್ಷರಗಳಿಂದ ಅವು ಪಂಪನಿಗೂ ನಮಗೂ ಸಮಾನ. ಅವನು ಕಂಡ ಕಾಡುಗಳನ್ನು, ಬೆಟ್ಟಗಳನ್ನು, ಪ್ರಾಣಿಗಳನ್ನು ನಾವೂ ಕಂಡಿದ್ದೇವೆ. ಆದರೆ ಅವನು ಬರೆದ ಒಂದು ಪದ್ಯವನ್ನೂ ನಾವು ಬರೆಯಲಾರೆವು. ಒಂದು ಪದ್ಯವನ್ನು ಬರೆದರೂ ಅದರ ಛಂದೋಗತಿ ನಮಗೆ ದಕ್ಕುವುದಿಲ್ಲ. ಅದೇಕೆ?

ಇರುವಷ್ಟು ಅಕ್ಷರದಿ ಎಷ್ಟೊಂದು ವಿನ್ಯಾಸ
ಭಾವಸಂಪ್ರೋಕ್ಷಣೆಗೆ ಮಧುರ ನುಡಿ ತೀರ್ಥ
ಪದ ಪದದ ಆಕಾಂಕ್ಷೆ ಅಷ್ಟಪದಿನಿರ್ಮಿತಿಯೊ
ಕೆತ್ತಿದಂತಿದೆ ಶಿಲ್ಪ ಮುದ್ದುರಾಮ ॥

ಅವೇ ಅಕ್ಷರಗಳು, ಅವೇ ಪದಗಳು, ಅವೇ ಪದಾರ್ಥಗಳು. ಅವುಗಳಿಂದಲೇ ಕುವೆಂಪು, ಬೇಂದ್ರೆ, ಮಾಸ್ತಿ ಮುಂತಾದವರು ಎಂತಹ ಸಾಹಿತ್ಯ ರಚಿಸಿದ್ದಾರೆ.

ನೀಲಕಂಠ ದೀಕ್ಷಿತನೆಂಬ ಸಂಸ್ಕೃತ ಕವಿ ಹೇಳುತ್ತಾನೆ –

ಯಾನೇವ ಶಬ್ದಾನ್ ವಯಮಾಲಪಾಮೋ
ಯಾನೇವ ಚಾರ್ಥಾನ್ ವಯಮುಲ್ಲಿಖಾಮಃ।
ತೈರೇವ ವಿನ್ಯಾಸವಿಶೇಷ ಭವ್ಯಃ
ಸಂಮೋಹಯಂತೇ ಕವಯೋ ಜಗಂತಿ॥

(ಯಾವ ಶಬ್ದಗಳನ್ನು ನಾವು ನುಡಿಯುವೆವೋ ಯಾವ ವಸ್ತುಗಳನ್ನು ನಾವು ನೋಡುವೆವೋ ಅವುಗಳನ್ನು ವಿನ್ಯಾಸ ವೈಭವಗಳಿಂದ ಕವಿಗಳೇ ಲೋಕಗಳ ಮುಗ್ಧಗೊಳಿಸುವರು).

ಕಾರಣವೇನೆಂದರೆ, ಇರುವುವು ಅವೇ ಅಷ್ಟೇ ಅಕ್ಷರಗಳಾದರೂ ಅವು ಬೇರೆ ಬೇರೆ ವಿನ್ಯಾಸದಿಂದ ಹೊಸತನವನ್ನು ಪಡೆದುಕೊಳ್ಳುತ್ತವೆ. ನಮಗೂ ಎರಡು ಪಾದಗಳು, ಐದು ಬೆರಳುಗಳು. ನರ್ತಕನಿಗೂ ಅಷ್ಟೆ, ಆದರೆ ಅವನ ಹೆಜ್ಜೆಯ ವಿಲಾಸದಲ್ಲೆಷ್ಟು ವೈವಿಧ್ಯ! ಭಾವಾಭಿವ್ಯಕ್ತಿಯನ್ನು ಮಾಡಲು ಕವಿ ಮಧುರ ನುಡಿಯ ತೀರ್ಥವನ್ನು ಬಳಸಿದ್ದಾನೆ. ಅದೇ ಕನ್ನಡ ನುಡಿಯನ್ನು ಆಡುವ ನಾವು ಏಕೆ ಚೌಪದಿಗಳನ್ನು ರಚಿಸಲಾಗಿಲ್ಲ? ಒಂದು ಪದಕ್ಕೂ ಇನ್ನೊಂದು ಪದಕ್ಕೂ ಇರುವ ಅರ್ಥಸಂಬಂಧ ಆಕಾಂಕ್ಷೆ.ಲ ಅದರಿಂದಲೇ ಅಷ್ಟಪದಿಗಳನ್ನು ಸಂಸ್ಕೃತಕವಿ ಜಯದೇವನು ಗೀತ ಗೋವಿಂದದಲ್ಲಿ ಮಾಡಿ ಜಗದ್ವಿಸ್ಮಯವನ್ನು ಮಾಡಿದ್ದಾನೆ. ಶ್ರೇಷ್ಠ ಶಿಲ್ಪಿಯು ಕೆತ್ತಿದ ಶಿಲ್ಪದಂತಿದೆ. ಆ ಅಷ್ಟಪದಿ. ಅದರ ಗುಟ್ಟೇನು? ಪದಗಳ ವಿಶೇಷ ವಿನ್ಯಾಸ.

ಪ್ರಪಂಚದಲ್ಲಿ ಎಲ್ಲ ರೀತಿಯ ಸಾಹಿತ್ಯವೂ ಇದೆ. ಧರ್ಮಶಾಸ್ತ್ರವೂ ಇದೆ. ಕಾಮಶಾಸ್ತ್ರವೂ ಇದೆ. ಚತುಷ್ಪಷ್ಟಿ (ಅರವತ್ತು ನಾಲ್ಕು) ಕಲೆಗಳಲ್ಲಿ ಚೌರ್ಯವೂ ಸೇರಿದೆಯಂತೆ! ಬರೆದುದೆಲ್ಲ ಒಳ್ಳೆಯ ಸಾಹಿತ್ಯವಲ್ಲ. ಮುದ್ರಿತವಾಗಿದೆ ಎಂದ ಮಾತ್ರಕ್ಕೆ ಎಲ್ಲವೂ ಸತ್ಯವಲ್ಲ. ಹಿತವೂ ಅಲ್ಲ. ಭೂಮಿಯಲ್ಲಿ ಬೆಳೆದುದೆಲ್ಲ ಆಹಾರವಲ್ಲ. ಪ್ರತಿಯೊಂದನ್ನೂ ಪರೀಕ್ಷಿಸಿ ಸ್ವೀಕರಿಸಬೇಕೆನ್ನುತ್ತಾನೆ ಮುದ್ದುರಾಮ –

ಮಿಂದು ಕೆಲ ಹೊತ್ತಿಗೆಯ ಮುಟ್ಟಿ ನೀ ಶುಚಿಯಾಗು
ಮುಟ್ಟಿ ಕೆಲ ಹೊತ್ತಿಗೆಯ ಮಿಂದು ಶುಚಿಯಾಗು
ವಿಷಯವೆಂತೋ ಅಂತೆ ಭಾವಶುದ್ಧಿಯ ರೀತಿ
ಓದಿನಲಿ ಶುಚಿಯಿರಲಿ ಮುದ್ದುರಾಮ॥

ರಾಮಾಯಣ, ಭಗವದ್ಗೀತೆ, ವಚನಗಳು, ದಾಸರ ಹಾಡುಗಳು ಮುಂತಾದ ಶ್ರೇಷ್ಠ ಗ್ರಂಥಗಳನ್ನು ಮುಟ್ಟುವ ಮೊದಲು ಮಿಂದು, ಎಂದರೆ ಸ್ನಾನಮಾಡಿ ಮುಟ್ಟಬೇಕು. ಅವನ್ನು ಕೈಯಿಂದ ಮುಟ್ಟಿದರೂ ಮನಸ್ಸು ಶುದ್ಧವಾಗುತ್ತವೆ. ಬೇರೆ ಸಾಹಿತ್ಯವೂ ಇದೆ. ವ್ಯಭಿಚಾರದ, ಹಾದರದ ಕಥೆಗಳನ್ನು ಬರೆಯುವ ಸಾಹಿತಿಗಳೂ ಇದ್ದಾರೆ. ಅಂತಹ ಪುಸ್ತಕವನ್ನು ಮುಟ್ಟುವುದೂ ತಪ್ಪು. ಅದನ್ನು ಮುಟ್ಟಿದ ಪಾಪದ ನಿವಾರಣೆಗೆ ನಖಶಿಖಾಂತ ಸ್ನಾನ ಮಾಡಬೇಕು.

ಪುಸ್ತಕದ ವಿಷಯ ಹೇಗಿದೆಯೋ ಹಾಗೆ ಭಾವಶುದ್ಧಿ. ಓದುತ್ತಾನೆ ಎಂದರೆ ದೊಡ್ಡತನ ಬರದು. ಏನನ್ನು ಓದುತ್ತಾನೆ ಎಂಬುದೂ ಮುಖ್ಯ. ಆಹಾರವನ್ನು ತಿನ್ನುವಾಗ, ನೀರನ್ನು ಕುಡಿಯುವಾಗ, ಅದು ಶುದ್ಧವಾಗಿರಬೇಕೆಂದು ಹೇಗೆ ಎಚ್ಚರ ವಹಿಸುವೆವೋ ಹಾಗೆ ಪುಸ್ತಕವನ್ನು ಓದುವಾಗಲೂ ಎಚ್ಚರ ವಹಿಸಬೇಕು. ಆದ್ದರಿಂದಲೇ ಮುದ್ದುರಾಮನು ಹೇಳುತ್ತಾನೆ – ಓದಿನಲಿ ಶುಚಿಯಿರಲಿ ಎಂದು.

ವಾಲ್ಮೀಕಿ, ಕಾಳಿದಾಸ, ಪಂಪ, ರನ್ನ ಯಾರೂ ನಮ್ಮ ಮುಂದೆ ಇಲ್ಲ. ಎಲ್ಲರೂ ತೆರಳಿದರು ನಮ್ಮೊಡನೆ ಅವರಿಲ್ಲ. ಆದರೂ ನಮ್ಮ ಚಿಂತನೆಗಳಲ್ಲಿ ಅವರಿದ್ದಾರೆ.

ಕವಿ ಸತ್ತರೇನಂತೆ? ಇದೆ ಕವಿತೆ ನಮ್ಮ ಜೊತೆ
ಆ ಕಾವ್ಯ ನರುಗುಂಪು ಪಸರುತಿದೆ ಸುತ್ತ.
ಮರೆಯಾದ ಮುಖದಲ್ಲಿ ಚಿಂತನೆಯ ಕಾಂತಿಯಿದೆ
ಚೇತನಕೆ ಸಾವಿಲ್ಲ ಮುದ್ದುರಾಮ

ಕವಿಯ ಚೇತನವಿರುವುದು ಮಾಂಸರಕ್ತಗಳ ಶರೀರದಲ್ಲಲ್ಲ. ನಿಜವಾಗಿ ಅದಿರುವುದು ಕವಿತೆಯಲ್ಲಿ. ಕವಿ ಭೌತಿಕವಾಗಿ ಸತ್ತರೂ ಕವಿತೆ ನಮ್ಮ ಜೊತೆಯಲ್ಲಿದೆ. ವಾಲ್ಮೀಕಿ ಸತ್ತು ಹಲವು ಸಾವಿರ ವರ್ಷಗಳಾದುವು. ಅವನು ಬದುಕಿದ್ದಾಗಿಗಿಂತ ಈಗ ಪ್ರಪಂಚದಲ್ಲಿ ಅವನು ರಾಮಾಯಣ ರೂಪದಲ್ಲಿ ಹೆಚ್ಚು ಬದುಕಿದ್ದಾನೆ. ಆ ಕಾವ್ಯದ ಕಂಪು ಇಂದಿಗೂ ಜಗತ್ತಿನಲ್ಲಿ ಹರಡುತ್ತಿದೆ. ಮುಖಮರೆಯಾದರೂ ಅವನ ಚಿಂತನೆಯ ಕಾಂತಿ ಇಂದೂ ಉಜ್ವಲವಾಗಿದೆ. ಆ ಕಾವ್ಯಚೇತನಕ್ಕೆ ಸಾವಿಲ್ಲ.

ಜಯಂತಿ ತೇ ಸುಕೃತಿನೋ ರಸಸಿದ್ಧಾಃ ಕವೀಶ್ವರಾಃ।
ನಾಸ್ತಿ ಯೇಷಾಂ ಯಶಃ ಕಾಯೇ ಜರಾಮರಣಜಂ ಭಯಮ್।

(ರಸಸಿದ್ಧರಾದ ಧನ್ಯ ಕವಿಗಳಿಗೆ ಜಯವು ಅವರಿಗಿರುವುದು ನಿತ್ಯ ಕೀರ್ತಿಕಾಯ। ಅದಕಿಲ್ಲ ಎಂದಿಗೂ ಮುಪ್ಪು–ಸಾವು ಅದಕೆ ಪೂಜಿಸುವೆವು ನಾವು).

ಯಶೋಧ ಕೃಷ್ಣ ಚಾರಿಟಬಲ್ ಟ್ರಸ್ಟ್ ಉದ್ಘಾಟನೆ, 350 ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಉಚಿತ ವಿತರಣೆ

ಸೇವಾ ಕೈಂಕರ್ಯವಿದ್ದ ಜಾಗದಲ್ಲಿ ಪರಮಾತ್ಮ ನೆಲೆಸುತ್ತಾನೆ

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಅಭಿಮತ



ಮೈಸೂರಿನ ಕಲಾಮಂದಿರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಯಶೋಧ ಕೃಷ್ಣ ಚಾರಿಟಬಲ್ ಟ್ರಸ್ಟ್‌ನಿಂದ ವಿದ್ಯಾರ್ಥಿಗಳಿಗೆ ಉಚಿತವಾಗಿ ಲ್ಯಾಪ್‌ಟಾಪ್ ವಿತರಿಸಲಾಯಿತು.

ಮೈಸೂರು,ನ.25(ಪಿಎಂ)– ಸೇವಾ ಕೈಂಕರ್ಯ ಇದ್ದ ಜಾಗದಲ್ಲಿ ಪರಮಾತ್ಮ ನೆಲೆಸುತ್ತಾನೆ ಎಂದು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ಮೈಸೂರಿನ ಕಲಾಮಂದಿರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರ ತಂದೆ ಕೃಷ್ಣ ಮತ್ತು ತಾಯಿ ಯಶೋಧ ಅವರ ಹೆಸರಿನಲ್ಲಿ ಸ್ಥಾಪಿಸಿರುವ 'ಯಶೋಧ ಕೃಷ್ಣ ಚಾರಿಟಬಲ್ ಟ್ರಸ್ಟ್ ಉದ್ಘಾಟನಾ ಸಮಾರಂಭ ಮತ್ತು ಟ್ರಸ್ಟ್ ವತಿಯಿಂದ 300ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಉಚಿತವಾಗಿ ಲ್ಯಾಪ್‌ಟಾಪ್ ವಿತರಿಸುವ ಕಾರ್ಯಕ್ರಮದ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

'ಯಾರು ಇತರರಿಗಾಗಿ ಬದುಕುತ್ತಾರೋ ಅವರು ಮಾತ್ರ ಬದುಕಿರುತ್ತಾರೆ, ಉಳಿದವರು ಬದುಕಿದ್ದು ಸತ್ತಂತೆ' ಎಂದು ಸ್ವಾಮಿ ವಿವೇಕಾನಂದರು ಸಂದೇಶ ನೀಡಿದ್ದಾರೆ. ವಿವೇಕಾನಂದರು ಮೈಸೂರಿನಲ್ಲಿ ಅಂದಿನ ಮಹಾರಾಜ ಚಾಮರಾಜ ಒಡೆಯರ್ ಅವರನ್ನು ಭೇಟಿ ಮಾಡಿದ್ದರು. ನಂತರ ಅಮೆರಿಕಾಗೆ ಹೋಗಿ ನಮ್ಮ ದೇಶದ ಜ್ಞಾನಪರಂಪರೆಯನ್ನು ಜಗತ್ತಿಗೇ ಸಾರಿದರು. ಅವರೊಬ್ಬ ಶ್ರೇಷ್ಠ ಸನ್ಯಾಸಿ. ಅವರು ಸೇವೆಯ ಮಹತ್ವದ ಬಗ್ಗೆ ಸಾರಿ ಹೇಳಿದ್ದಾರೆ ಎಂದರು.

ಯಾರು ತನ್ನ ಬದುಕಿನ ಜೊತೆಗೆ ನೆರೆಹೊರೆಯವರ ಬದುಕಿಗೂ ಸ್ಪಂದಿಸುತ್ತಾನೋ ಅವನು ತಾನು ಬದುಕಿದ್ದಾಗಲೂ ಬದುಕುವ ಜೊತೆಗೆ ಸತ್ತ ಮೇಲೆಯೂ ಚಿರಸ್ಥಾಯಿಯಾಗುತ್ತಾನೆ. ಯಾರು ಬದುಕಿದ್ದಾಗ ಸ್ವಾರ್ಥಿಯಾಗುತ್ತಾರೋ ಅಂತಹವರು ಸತ್ತ ಮೇಲೆ ಸ್ಮಶಾನದಲ್ಲಿ ಮಣ್ಣಾಗುತ್ತಾರೆಯಷ್ಟೇ. ಇದೇ ಹಿನ್ನೆಲೆಯಲ್ಲಿ ಸ್ವಾಮಿ ವಿವೇಕಾನಂದರು ಸೇವೆಯ ಮಹತ್ವವನ್ನು ಸಾರಿದ್ದಾರೆ. ಇಂದು ಕೆ.ಹರೀಶ್‌ಗೌಡರು ಮಹತ್ವದ ಸೇವಾ ಕಾರ್ಯ ಮಾಡುತ್ತಿದ್ದಾರೆ. ಅವರ ಸೇವಾ ಕೈಂಕರ್ಯ ನಿತ್ಯ ನಿರಂತರವಾಗಲಿ ಎಂದು ಹಾರೈಸಿದರು.

ಉದ್ಘಾಟನೆ ನೆರವೇರಿಸಿದ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, ಕೆ.ಹರೀಶ್‌ಗೌಡರು ಶಾಸಕರಾಗಲು 10ರಿಂದ 15 ವರ್ಷಗಳ ಕಾಲ ನಿರಂತರವಾಗಿ ಶ್ರಮಿಸಿದ್ದಾರೆ. ಅವರು ಒರಟಾಗಿ ಕಾಣುತ್ತಾರೆ. ಆದರೆ ಅವರು ನಿಜಕ್ಕೂ ಹೃದಯವಂತ. ಈ ಬಾರಿ ಚುನಾವಣೆ ಸಂದರ್ಭದಲ್ಲಿ ಅವರಿಗೆ ಅವಕಾಶ ತಪ್ಪುವ ಸನ್ನಿವೇಶ ಇತ್ತು ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಇವರಿಗೆ ಅವಕಾಶ ನೀಡಬೇಕೆಂದು ನಿರ್ಧರಿಸಿದರು. ಆ ಬಳಿಕ ಕ್ಷೇತ್ರದ ಜನತೆಯೂ ಆಶೀರ್ವದಿಸಿದರು ಎಂದರು.

350 ವಿದ್ಯಾರ್ಥಿಗಳಿಗೆ ಉಚಿತವಾಗಿ ಲ್ಯಾಪ್‌ಟಾಪ್ ನೀಡಲು ಕೆ.ಹರೀಶ್‌ಗೌಡರು ವೈಯಕ್ತಿಕವಾಗಿ 2 ಕೋಟಿಗೂ ಅಧಿಕ ವೆಚ್ಚ ಮಾಡಿದ್ದಾರೆ. ಇಂದು ಶೈಕ್ಷಣಿಕ ಚಟುವಟಿಕೆಗೆ ಲ್ಯಾಪ್‌ಟಾಪ್ ಅಗತ್ಯವಿದ್ದು, ಈ ಹಿನ್ನೆಲೆಯಲ್ಲಿ ಅತ್ಯಂತ ಉಪಯುಕ್ತ ಸೇವಾ ಕಾರ್ಯವನ್ನು ಹರೀಶ್‌ಗೌಡರು ಮಾಡಿದ್ದಾರೆ. ಅವರೊಬ್ಬ ಶ್ರಮ ಜೀವಿ. ಕ್ಷೇತ್ರದಲ್ಲಿ ಜನರ ಸಂಪರ್ಕದಲ್ಲಿರುವ ಸ್ನೇಹಜೀವಿ. ಕೆಲಸ ಮಾಡುವಲ್ಲಿ ಬದ್ಧತೆ ಹೊಂದಿದ್ದಾರೆ. ಜನರ ಮಧ್ಯೆ ಇರಬೇಕು. ಮತ್ತೊಮ್ಮೆ ಶಾಸಕನಾಗಿ ಕ್ಷೇತ್ರದಲ್ಲಿ ಸೇವೆ ಸಲ್ಲಿಸಬೇಕೆಂಬ ಆಶಯ ಹೊಂದಿ ನಿತ್ಯ ಸಾರ್ವಜನಿಕರಿಗೆ ಸ್ಪಂದಿಸುತ್ತಿದ್ದಾರೆ. ಕ್ಷೇತ್ರದ ಜನತೆ ಅವರಿಗೆ ಬೆಂಬಲವಾಗಿ ನಿಲ್ಲಬೇಕು ಎಂದು ಕೋರಿದರು.

ಮೈಸೂರು ಜಿಲ್ಲೆಯು ಯುವ ಶಾಸಕರ ಆಯ್ಕೆ ಮಾಡಿದೆ. ಮುಂದಿನ ದಶಕದಲ್ಲಿ ಮೈಸೂರು ಜಿಲ್ಲೆಯ ನಾಯಕತ್ವ ವಹಿಸುವವರು ಅವರಲ್ಲಿದ್ದಾರೆ. ಸಿಎಂ ಸಿದ್ದರಾಮಯ್ಯನವರು ಮೈಸೂರು, ಚಾಮರಾಜನಗರ ಜಿಲ್ಲೆಗಳಿಗೆ ಹೆಚ್ಚಿನ ಅನುದಾನ ಕಲ್ಪಿಸಿದ್ದಾರೆ ಎಂದರು.

ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಮಾತನಾಡಿ, ನನ್ನ ಪೋಷಕರ ಹೆಸರಿನಲ್ಲಿ ಟ್ರಸ್ಟ್ ಉದ್ಘಾಟನೆ ಮೂಲಕ ನನ್ನ ಕೈಲಾದ ಸಮಾಜ ಸೇವೆ ಮುಂದುವರೆಸಲು ಹೊರಟಿದ್ದೇನೆ. ಇದಕ್ಕೆ ಡಾ.ನಿರ್ಮಲಾನಂದನಾಥ ಸ್ವಾಮೀಜಿಯವರ ಪ್ರೇರಣೆ ಇದೆ. ನಮ್ಮ ತಂದೆ ಮೈಸೂರು ವಿವಿಯಲ್ಲಿ ಗ್ರಂಥಪಾಲಕರಾಗಿ ಸೇವೆ ಸಲ್ಲಿಸುತ್ತಿದ್ದರು. ಅವರು ಕಾಲವಾದ ನಂತರ ವಿವಿಯಲ್ಲಿ ಉದ್ಯೋಗ ದೊರೆಯಿತು. ಆ ಬಳಿಕ ಅಲ್ಲಿ ಯೂನಿಯನ್ ಚುನಾವಣೆಗೆ ಸ್ಪರ್ಧಿಸಿ ಗೆದ್ದ ನಂತರ ಜನರ ಸೇವೆಯಲ್ಲಿ ಇರಬೇಕೆಂಬ ಮನಸ್ಸು ಬಂದಿತು ಎಂದು ತಿಳಿಸಿದರು.

2008ರಲ್ಲಿ ವಿವಿ ಉದ್ಯೋಗಕ್ಕೆ ರಾಜೀನಾಮೆ ನೀಡಿ ರಾಜಕೀಯ ಪ್ರವೇಶಿಸಿದೆ. ಅಂದಿನಿಂದ ಉದ್ಯೋಗ ಮೇಳ ಸೇರಿದಂತೆ ಅನೇಕ ಸೇವಾ ಕಾರ್ಯಗಳನ್ನು ಮಾಡುತ್ತಾ ಬಂದಿದ್ದೇನೆ. ನಾನಿಂದು ಕಾಂಗ್ರೆಸ್ ಶಾಸಕನಾಗಲು ಪ್ರಮುಖ ಕಾರಣ ಮುಖ್ಯಮಂತ್ರಿ ಸಿದ್ದರಾಮಯ್ಯನವರು. ಅವರ ಹಾಗೂ ಕ್ಷೇತ್ರದ ಜನತೆಯ ಆಶೀರ್ವಾದದಿಂದ ಶಾಸಕನಾಗಿದ್ದೇನೆ. ನಾನು ಕಾಂಗ್ರೆಸ್ ಸೇರಿದಾಗ ನನಗೆ ಮಾರ್ಗದರ್ಶನ ನೀಡಿದವರು ಎನ್.ಚಲುವರಾಯಸ್ವಾಮಿಯವರು. ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿಯವರು ನನಗೆ ಮಾರ್ಗದರ್ಶನ ನೀಡುತ್ತಿದ್ದು, ಎಲ್ಲಾ ವಿಷಯದಲ್ಲೂ ಸಮರ್ಪಕ ಸಲಹೆ ಸೂಚನೆ ನೀಡುತ್ತಿದ್ದಾರೆ ಎಂದರು.

350 ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್: ನಮ್ಮ ಕ್ಷೇತ್ರದಲ್ಲಿ ಮಧ್ಯಮ, ಬಡ ವರ್ಗದ ಬಿಇ, ಬಿಸಿಎ ಮತ್ತು ಎಂಸಿಎ ಓದುತ್ತಿರುವ ವಿದ್ಯಾರ್ಥಿಗಳಿಗೆ ಉಚಿತವಾಗಿ ಲ್ಯಾಪ್‌ಟಾಪ್ ನೀಡುತ್ತಿದ್ದು, ಮೊದಲಿಗೆ 100 ವಿದ್ಯಾರ್ಥಿಗಳಿಗೆ ಕೊಡುವ ಉದ್ದೇಶವಿತ್ತು. ನಂತರ 500ಕ್ಕೂ ಹೆಚ್ಚು ಅರ್ಜಿಗಳು ಬಂದ ಹಿನ್ನೆಲೆಯಲ್ಲಿ ಕಷ್ಟವಾದರೂ ಪರವಾಗಿಲ್ಲ ಸಾಧ್ಯವಾದಷ್ಟು ಎಲ್ಲರಿಗೂ ಕೊಡಬೇಕೆಂದು 350 ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ನಗರದ ಎಲ್ಲಾ ಕ್ಷೇತ್ರಗಳಿಂದ ಲ್ಯಾಪ್‌ಟಾಪ್‌ಗೆ ಬೇಡಿಕೆ ಬಂದಿತು. ಆದರೆ ಅಷ್ಟು ಶಕ್ತಿ ನನ್ನಲ್ಲಿ ಇರಲಿಲ್ಲ. ಮುಂದಿನ ದಿನಗಳಲ್ಲಿ ಎಲ್ಲಾ ಕ್ಷೇತ್ರಗಳಿಗೂ ಸೇವಾ ಕಾರ್ಯ ವಿಸ್ತರಿಸುವ ಶಕ್ತಿಯನ್ನು ಕರುಣಿಸಬೇಕೆಂದು ದೇವರಲ್ಲಿ ಪ್ರಾರ್ಥಿಸುತ್ತೇನೆ. ಲ್ಯಾಪ್‌ಟ್ಯಾಪ್ ಪಡೆದ ವಿದ್ಯಾರ್ಥಿಗಳು ಅದನ್ನು ಸದಪಯೋಗ ಮಾಡಿಕೊಳ್ಳಬೇಕು. ನಾನು ಬದುಕಿರುವವರೆಗೂ ಸೇವಾ ಕಾರ್ಯ ಮುಂದುವರೆಸುತ್ತೇನೆ ಎಂದು ಹೇಳಿದರು.

ಇದೇ ವೇಳೆ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸಲಾಯಿತು. ಶ್ರೀ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ, ಶಾಸಕರಾದ ತನ್ವೀರ್‌ಸೇಠ್, ಡಿ.ರವಿಶಂಕರ್, ಗಣೇಶ್‌ಪ್ರಸಾದ್, ದರ್ಶನ್ ಧ್ರುವನಾರಾಯಣ್, ರಮೇಶ್ ಬಂಡಿಸಿದ್ದೇಗೌಡ, ಎಂಎಲ್‌ಸಿ ಡಾ.ಡಿ. ತಿಮ್ಮಯ್ಯ, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ರಾಜ್ಯ ಸಹಕಾರ ಸಂಘಗಳ ಪತ್ತಿನ ಮಹಾಮಂಡಳದ ಅಧ್ಯಕ್ಷ ಎಸ್. ಚಂದ್ರಶೇಖರ್, ಮಾಜಿ ಮೇಯರ್ ಪುಷ್ಪಲತಾ ಚಿಕ್ಕಣ್ಣ, ಮುಖಂಡರಾದ ರವಿ ಮಂಚೇಗೌಡನಕೊಪ್ಪಲು, ರವಿ (ಡೆಲ್ಲಿ) ಮತ್ತಿತರರು ಹಾಜರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಸಮಾಜಮುಖಿ ಕಾರ್ಯಗಳ ಮೂಲಕ ಸಹಕಾರ ಧುರೀಣ, ಶಾಸಕ ಜಿಟಿಡಿ ಹುಟ್ಟುಹಬ್ಬ ಆಚರಣೆ

ದೇವರ ದರ್ಶನ, ಸಸಿ ನೆಟ್ಟು ಅನ್ನಸಂತರ್ಪಣೆ, ಹಣ್ಣು ಹಂಪಲು ವಿತರಣೆ, ಲೇಖನ ಸಾಮಗ್ರಿ ಕೊಡುಗೆ, ಶುಭಾಶಯಗಳ ಸುರಿಮಳೆ



ಕುಟುಂಬಸ್ಥರೊಂದಿಗೆ ಕೇಕ್ ಕತ್ತರಿಸಿ ಜಿಟಿಡಿ ಹುಟ್ಟುಹಬ್ಬ ಆಚರಿಸಲಾಯಿತು. ಈ ವೇಳೆ ಪತ್ನಿ ಲಲಿತಾ ಜಿ.ಟಿ.ದೇವೇಗೌಡ, ಪುತ್ರಿ ಅನ್ನಪೂರ್ಣ, ಮೊಮ್ಮಕ್ಕಳು ಹಾಗೂ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಚಂದ್ರಿಕಾ ಸುರೇಶ್ ಉಪಸ್ಥಿತರಿದ್ದರು.



ಶಾರದಾದೇವಿನಗರದಲ್ಲಿ ಅಭಿಮಾನಿಗಳು ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ರಸ್ತೆಬದಿ ವ್ಯಾಪಾರಿಗಳಿಗೆ 16ಕ್ಕೂ ಹೆಚ್ಚು ತಳ್ಳುವ ಗಾಡಿಗಳನ್ನು ಜಿ.ಟಿ.ದೇವೇಗೌಡರು ವಿತರಿಸಿದರು. ಈ ಸಂದರ್ಭದಲ್ಲಿ ಬೇಬಿ ಮಠದ ಶ್ರೀ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ಸೇರಿದಂತೆ ಮುಖಂಡರು ಉಪಸ್ಥಿತರಿದ್ದರು.

ಪ್ರೀತಿಗೆ ಚಿರಋಣಿ, ಶಕ್ತಿ ಮೀರಿ ಸೇವೆ ಮಾಡುತ್ತೇನೆ

ಹುಟ್ಟುಹಬ್ಬದ ಅಂಗವಾಗಿ ಮಾಧ್ಯಮಗಳೊಂದಿಗೆ ಶಾಸಕ ಜಿ.ಟಿ. ದೇವೇಗೌಡರು ಮಾತನಾಡಿ, ಈ ಬಾರಿ ಹುಟ್ಟುಹಬ್ಬವನ್ನು ಸರಳವಾಗಿ ಆಚರಿಸಿಕೊಳ್ಳಬೇಕು ಎಂದು ಕುಟುಂಬ ಸಮೇತ ತಿರುಪತಿ ಶ್ರೀನಿವಾಸ ದರ್ಶನ ಮಾಡಿ ವಿಶೇಷ ಪೂಜೆ ಸಲ್ಲಿಸಿ, ನಂತರ ಮೈಸೂರಿನ ಅಧಿದೇವತೆ ಚಾಮುಂಡೇಶ್ವರಿ ಮತ್ತು ತ್ರಿಪುರ ಸುಂದರಿ ಅಮ್ಮನವರ ದರ್ಶನ ಪಡೆದು ಬರುವಷ್ಟರಲ್ಲಿ ಅಭಿಮಾನಿಗಳು ಎಲ್ಲೆಡೆ ಫ್ಲೆಕ್ಸ್, ಬಾವುಟ ಕಟ್ಟಿ ಅದ್ದೂರಿಯಾಗಿ ಆಚರಿಸುತ್ತಿದ್ದಾರೆ ಎಂದರು.

ಇಂದಿನ ದಿನಪತ್ರಿಕೆಗಳಲ್ಲಿ ನೋಡಿ ಶುಭ ಹಾರೈಸುತ್ತಿದ್ದಾರೆ. 1971ರಿಂದಲೂ ಇದೇ ಪ್ರೀತಿ ಮುಂದುವರೆದಿದ್ದು, ಅವರ ಪ್ರೀತಿ ಅಭಿಮಾನಕ್ಕೆ ನಾನು ಚಿರಋಣಿ. ಅವರ ಸೇವೆಯನ್ನು ನಿರಂತರವಾಗಿ ಮಾಡುತ್ತೇನೆ. ಮತ್ತಷ್ಟು ಸೇವೆ ಮಾಡುವ ಶಕ್ತಿ ದೇವರು ನೀಡಲಿ ಎಂದು ಎಲ್ಲರೂ ಇಂದು ಹಾರೈಸಿದ್ದಾರೆ. ಚಾಮುಂಡೇಶ್ವರಿ ವಿಶಾಲ ಕ್ಷೇತ್ರವಾಗಿದೆ. ಶಕ್ತಿ ಮೀರಿ ಮಾಡುತ್ತಿದ್ದೇನೆ ಎಂದು ತಿಳಿಸಿದರು.

ಚುನಾವಣೆ ನಂತರ ಯಾರು ಓಟ್ ಹಾಕಿದ್ದಾರೆ ಎಂಬುದರ ಬಗ್ಗೆ ನಾನು ಈವರೆಗೂ ಸಂಶೋಧನೆ ಮಾಡಿಲ್ಲ. ಆದ್ದರಿಂದ ಎಲ್ಲರೂ ಪ್ರೀತಿಯಿಂದ ನೋಡುತ್ತಾರೆ. ಪಕ್ಷಾತೀತವಾಗಿ ಗೌರವದಿಂದ ನೋಡಿ, ಹಾರೈಸುತ್ತಿದ್ದಾರೆ ಎಂದರು.



ಮೈಸೂರು ಪಾಲಿಕೆಯ 44ನೇ ವಾರ್ಡಿನ ನಿಕಟಪೂರ್ವ ಸದಸ್ಯರಾದ ಸವಿತಾ ಸುರೇಶ್, ವಾರ್ಡ್ ಮುಖಂಡರ ನೇತೃತ್ವದಲ್ಲಿ ಮಾಜಿ ಸಚಿವರು, ಹಾಲಿ ಶಾಸಕರಾದ ಜಿ.ಟಿ.ದೇವೇಗೌಡರನ್ನು ಅವರ ಹುಟ್ಟುಹಬ್ಬದ ಪ್ರಯುಕ್ತ ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಲಾಯಿತು. ಈ ವೇಳೆ ಮುಖಂಡರಾದ ಸುರೇಶ್, ಟೆಂಟ್ ಕುಮಾರ್, ಪುಟ್ಟಸ್ವಾಮಿಗೌಡ, ಮಿಲ್ಕ್ ಕುಮಾರ್, ಸೊಸೈಟಿ ಲೋಕೇಶ್, ಸೊಸೈಟಿ ಕುಮಾರ್, ಮಂಜು, ಪ್ರಸಾದ್, ಕೃಷ್ಣ, ಬಸವರಾಜು, ವೆಂಕಟೇಶ್ ಇತರರು ಹಾಜರಿದ್ದರು.



ಮೈಸೂರು ತಾಲೂಕು ಹುಯಿಲಾಳು ಗ್ರಾಮದ ಶ್ರೀಮನೆ ಮಂಚಮ್ಮ ದೇವಸ್ಥಾನ ಸೇವಾ ಟ್ರಸ್ಟ್ ಅಧ್ಯಕ್ಷ ಹುಯಿಲಾಳು ರಾಮಸ್ವಾಮಿ, ಶಾಸಕ ಜಿ.ಟಿ.ದೇವೇಗೌಡರಿಗೆ ಹುಟ್ಟುಹಬ್ಬದ ಶುಭಾಶಯ ಕೋರಿದರು. ಜೆಡಿಎಸ್ ಮುಖಂಡ ಧನಗಹಳ್ಳಿ ಸ್ವಾಮಿ, ಯುವ ಮುಖಂಡ ಹುಯಿಲಾಳು ಮಂಜುನಾಥ್ ಪ್ರಸಾದ್ ಉಪಸ್ಥಿತರಿದ್ದರು.



ಮೈಸೂರಿನ ವಿವಿಧ ಉದ್ಯಾನವನಗಳಲ್ಲಿ 75 ಸಸಿಗಳನ್ನು ನೆಟ್ಟು, ಪರಿಸರ ಸಂರಕ್ಷಣೆ ಮಾಡುವ ಮೂಲಕ ಕನ್ನಡಾಂಬೆ ರಕ್ಷಣಾ ವೇದಿಕೆ ವತಿಯಿಂದ ಶಾಸಕ ಜಿ.ಟಿ.ದೇವೇಗೌಡರ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಎಂದೆಂದಿಗೂ ನಾನು ಜೆಡಿಎಸ್ ಶಾಸಕ

ಜೆಡಿಎಸ್ ಪಕ್ಷದ ಬೆಳ್ಳಿ ಹಬ್ಬಕ್ಕೆ ಬರುವಂತೆ ಒಬ್ಬ ಕಾರ್ಯಕರ್ತ, ಮುಖಂಡರು, ಹಿರಿಯರು ಆಹ್ವಾನ ನೀಡಿಲ್ಲ. ಆಹ್ವಾನಿಸಿದರೆ, ಶುಭ ಹಾರೈಸುತ್ತಿದ್ದೆ. ಅಂದು ವಿರೋಧ ಪಕ್ಷದ ನಾಯಕ ಆಗಿಲ್ಲ ಎಂದು ಬೇಸರದಿಂದ ಬಂದ ನಂತರ ಯಾವುದಕ್ಕೂ ಆಹ್ವಾನ ಬಂದಿಲ್ಲ. ಇತ್ತೀಚೆಗೆ ಮೈಸೂರಿನಲ್ಲಿ ನಡೆದ ದಿಶಾ ಸಭೆಗೂ ಕರೆದಿಲ್ಲ. ಆದರೆ, ನಾನು ಎಂದೆಂದಿಗೂ ಜೆಡಿಎಸ್ ಪಕ್ಷವನ್ನು ಬಿಟ್ಟಿಲ್ಲ. ಇಂದಿಗೂ ನಾನು ಜೆಡಿಎಸ್ ಪಕ್ಷದ ಶಾಸಕ. ಪಕ್ಷದ ಪರವಾಗಿ ಕೆಲಸ ಮಾಡುತ್ತೇನೆ. ಈ ಹಿಂದೆ ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಗಳಾದ ಅವಧಿಯಲ್ಲಿ ಅವರ ಬಳಿ ಹೋಗಿ ಅಭಿವೃದ್ಧಿ ಕೆಲಸಕ್ಕಾಗಿ ಮಾತನಾಡುತ್ತಿದ್ದೆ. ಹಾಗೇ ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೂ ಅಭಿವೃದ್ಧಿ ವಿಚಾರವಾಗಿ ಮಾತನಾಡುತ್ತೇನೆ. ಎಂದು ನಾನು ಒಂದು ಪಕ್ಷದ ಸರ್ಕಾರ ಎಂದು ಭಾವಿಸುವುದಿಲ್ಲ. ಅದು ರಾಜ್ಯದ ಸರ್ಕಾರ ಎಂದು ಭಾವಿಸಿ, ಕ್ಷೇತ್ರದ ಕೆಲಸಕ್ಕೆ ಸಿದ್ದರಾಮಯ್ಯ ಅವರ ಬಳಿ ಹೋಗಿ ನೀವು-ನಾನು ಇಬ್ಬರು 45 ವರ್ಷದಿಂದ ಕ್ಷೇತ್ರವನ್ನು ಪ್ರತಿನಿಧಿಸಿದ್ದೇವೆ ಈ ನಿಟ್ಟಿನಲ್ಲಿ ಅಭಿವೃದ್ಧಿಗೆ ಸಹಕರಿಸಿ ಎಂದು ಮಾತನಾಡಿದ್ದೇನೆ ಅಷ್ಟೇ. ಸಿದ್ದರಾಮಯ್ಯ ಅವರು ಎಂದಿಗೂ ಕಾಂಗ್ರೆಸ್ ಪಕ್ಷಕ್ಕೆ ಬಾ ಎಂದು ಆಹ್ವಾನ ನೀಡಿಲ್ಲ. ಇಬ್ಬರು ಯಾವಾಗಲೂ ಅಭಿವೃದ್ಧಿ ಕೆಲಸದ ಬಗ್ಗೆ ಮಾತನಾಡುತ್ತೇವೆ. ರಾಜಕಾರಣ ಬಗ್ಗೆ ಮಾತನಾಡುವುದಿಲ್ಲ ಎಂದು ಎಂದು ಶಾಸಕ ಜಿಟಿಡಿ ತಿಳಿಸಿದರು.



ಚಾಮುಂಡೇಶ್ವರಿ ಕ್ಷೇತ್ರದ ಶಾಸಕರಾದ ಜಿ.ಟಿ.ದೇವೇಗೌಡರ 75ನೇ ವರ್ಷದ ಹುಟ್ಟುಹಬ್ಬಕ್ಕೆ ಸಮಾಜ ಸೇವಕ ಎಸ್.ಶ್ರೀಕಾಂತ್ ಬೃಹತ್ ಗಾತ್ರದ ಹೂವಿನ ಹಾರ ಹಾಕಿ, ಶಾಲು, ಪೇಟ ತೊಡಿಸಿ, ಸ್ಮರಣಿಕೆ ನೀಡಿ, ಕೇಕ್ ತಿನ್ನಿಸುವ ಮೂಲಕ ಹುಟ್ಟುಹಬ್ಬದ ಶುಭಾಶಯ ಕೋರಿದರು. ಲಲಿತಾ ಜಿ.ಟಿ ದೇವೇಗೌಡ, ಜಯಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮುಖಂಡರಾದ ಜವರನಾಯಕ, ದಾರಿಪುರ ಬಸವಣ್ಣ, ಅಬ್ದುಲ್ ಮುತಾಲೀಫ್, ಬರಡನಪುರ ಬಸವಣ್ಣ, ರೇಣುಕಾ, ನಾಗರಾಜು, ಹೊಸಕೆರೆ ಮಂಜುನಾಥ್, ಬೈರೇಶ್ ಉಪಸ್ಥಿತರಿದ್ದರು.



ಮಾಜಿ ಸಚಿವರೂ ಆದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕರಾದ ಜಿ.ಟಿ.ದೇವೇಗೌಡರಿಗೆ 75ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ಹಿನಕಲ್ ಗ್ರಾಮದ ಮುಖಂಡರು ಬೃಹತ್ ಹಾರ ಹಾಕಿ, ಶಾಲು ಹೊದಿಸಿ, ಶುಭ ಕೋರಿದರು.



ಶಾಸಕ ಜಿ.ಟಿ.ದೇವೇಗೌಡರು ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಪತ್ನಿ ಲಲಿತಾ, ಕುಟುಂಬ ಸದಸ್ಯರೊಂದಿಗೆ ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿ, ದೇವಿ ದರ್ಶನ ಪಡೆದರು.

ಮೈಸೂರು,ನ.25(ಜಿಎ)-ಸಹಕಾರ ಕ್ಷೇತ್ರದ ಧುರೀಣರು, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಅಧ್ಯಕ್ಷ, ಮಾಜಿ ಸಚಿವರು, ಚಾಮುಂಡೇಶ್ವರಿ ಕ್ಷೇತ್ರದ ಶಾಸಕರಾದ ಜಿ.ಟಿ.ದೇವೇಗೌಡರ ಹುಟ್ಟುಹಬ್ಬವನ್ನು ಸಮಾಜಮುಖಿ ಕಾರ್ಯಗಳ ಮೂಲ ವಿಜೃಂಭಣೆಯಿಂದ ಆಚರಿಸಲಾಯಿತು. ಹಳೇ ಮೈಸೂರು ಭಾಗದ ಹಿರಿಯ ರಾಜಕಾರಣಿ ಜಿಟಿಡಿ ಎಂದು ಜನಪ್ರಿಯರಾದ ಜಿ.ಟಿ.ದೇವೇಗೌಡರ 75ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ಸಸಿ ನೆಟ್ಟು, ಅನ್ನಸಂತರ್ಪಣೆ ಮಾಡಿ, ವಿಶೇಷ ಪೂಜೆ, ಹಣ್ಣು ಹಂಪಲು ವಿತರಣೆ, ಬಡವರಿಗೆ ದಿನಸಿ ಪದಾರ್ಥ ವಿತರಿಸುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು.

ದೇವರ ದರ್ಶನ: ಜಿ.ಟಿ.ದೇವೇಗೌಡರು ಗುಂಗ್ರಾಲ್‌ಛತ್ರದಲ್ಲಿ ಮನೆಯ ದೇವರಿಗೆ ಪೂಜೆ ಸಲ್ಲಿಸಿ, ನಂತರ ಚಾಮುಂಡಿಬೆಟ್ಟಕ್ಕೆ ಪತ್ನಿ ಲಲಿತಾ ಅವರೊಂದಿಗೆ ತೆರಳಿ ಚಾಮುಂಡೇಶ್ವರಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ದೇವಾಲಯದ ಅರ್ಚಕರು ಫಲತಾಂಬೂಲ ನೀಡಿ, ಜನುಮ ದಿನದ ಶುಭಾಶಯ ಕೋರಿದರು. ಬಳಿಕ ಉತ್ತನಹಳ್ಳಿಯ ತ್ರಿಪುರಸುಂದರಿ ಅಮ್ಮನವರ ದೇವಸ್ಥಾನಕ್ಕೆ ತೆರಳಿ ದರ್ಶನ ಪಡೆದರು.

ಉತ್ತನಹಳ್ಳಿ, ಹೊಸಹುಂಡಿ ಸೇರಿದಂತೆ ಇನ್ನಿತರ ಅಕ್ಕಪಕ್ಕದ ಗ್ರಾಮಗಳ ಮುಖಂಡರು ಬೃಹತ್ ಗಾತ್ರದ ಗುಲಾಬಿ ಹೂವಿನ ಹಾರ ಹಾಕಿ ಸಾರ್ವಜನಿಕರಿಗೆ ಸಿಹಿ ಹಂಚಿ ಸಂಭ್ರಮಿಸಿದರು. ನಂತರ ಮೈಸೂರಿನ ವಿ.ವಿ.ಮೊಹಲ್ಲಾದಲ್ಲಿರುವ ತಮ್ಮ ನಿವಾಸಕ್ಕೆ ಬಂದು ವಿಶೇಷ ಪೂಜೆ ಸಲ್ಲಿಸಿದರು.



ಜಿ.ಟಿ.ದೇವೇಗೌಡರಿಗೆ ಮಾಜಿ ಕಾರ್ಪೊರೇಟರ್ ಪ್ರಶಾಂತ್‌ಗೌಡ, ಒಕ್ಕಲಿಗ ಸಂಘದ ನಿರ್ದೇಶಕ ಎ.ರವಿ, ಎಫ್‌ಸಿ ಒಕ್ಕಲಿಗ ಉದ್ಯಮಿಗಳ ಅಧ್ಯಕ್ಷ ಚೇತನ್, ಉದ್ಯಮಿ ನಂದಕುಮಾರ್ ಹುಟ್ಟುಹಬ್ಬದ ಶುಭಾಶಯ ಕೋರಿದರು.

ವಿಶೇಷ ವೇದಿಕೆ ನಿರ್ಮಾಣ: ಮನೆಯ ಪಕ್ಕದ ರಸ್ತೆಯಲ್ಲಿ ಅಭಿಮಾನಿಗಳು ಹುಟ್ಟುಹಬ್ಬವನ್ನು ಆಚರಿಸಲು ವಿಶೇಷ ವೇದಿಕೆ ನಿರ್ಮಿಸಿ, ಸೂಕ್ತ ವ್ಯವಸ್ಥೆ ಮಾಡಿದ್ದರು. ರಾಜಕೀಯ ಮುಖಂಡರು, ವಿವಿಧ ಸಂಘ-ಸಂಸ್ಥೆಯವರು, ಅಧಿಕಾರಿಗಳು, ಹಿತೈಷಿಗಳು, ಗಣ್ಯರು ಸಾಲು ಸಾಲಾಗಿ ಬಂದು ಕೆಲವರು ಜಿ.ಟಿ.ದೇವೇಗೌಡರಿಂದ ಕೇಕ್ ಕಟ್ ಕತ್ತರಿಸಿ ತಿನ್ನಿಸಿದರೆ, ಹಲವರು ಸಿಹಿ ತಿನ್ನಿಸಿದರು. ಇಲವಾಲದ ಮುಖಂಡರು ಪಟಾಕಿ ಸಿಡಿಸಿ ಹೂವಿನ ಮಳೆ ಸುರಿಸಿದರು.

ಗಣ್ಯರ ಶುಭ ಹಾರೈಕೆ: ಮೈಮುಲ್ ಅಧ್ಯಕ್ಷ ಕೆ.ಈರೇಗೌಡ, ನಿರ್ದೇಶಕ ಎ.ಟಿ.ಸೋಮಶೇಖರ್, ಮಾಜಿ ಮೇಯರ್ ಆರ್.ಲಿಂಗಪ್ಪ ಪಾಲಿಕೆ ಮಾಜಿ ಸದಸ್ಯರಾದ ಸವಿತಾ ಸುರೇಶ್, ಕೆ.ಮಹದೇಶ್, ಶ್ರೀರಾಂಪುರ ಗ್ರಾಮಪಂಚಾಯಿತಿ ಮಾಜಿ ಉಪಾಧ್ಯಕ್ಷೆ ಕಮಲಾ ನಟರಾಜು, ನಗರಪಾಲಿಕೆ ವಲಯ ಕಚೇರಿ ಮೂರರ ಆಯುಕ್ತ ಸಂದೀಪ್, ಅಭಿವೃದ್ಧಿ ಅಧಿಕಾರಿ ಸತ್ಯಮೂರ್ತಿ, ರಾಜ್ಯ ಒಕ್ಕಲಿಗರ ಸಂಘದ ಖಜಾಂಚಿ ಕೆ.ವಿ.ಶ್ರೀಧರ್, ಕೆ.ಆರ್.ನಗರ ತಾಲೂಕು ಜಾ.ದಳದ ವಕ್ತಾರ ಕೆ.ಟಿ.ರಮೇಶ್, ಮೈಸೂರು ನಗರ ಬಿಜೆಪಿ ಮಹಿಳಾ ಮೋರ್ಚಾ ಮಾಜಿ ಅಧ್ಯಕ್ಷೆ ಹೇಮಾ ನಂದೀಶ್, ಹಿರಿಯ ವಕೀಲರಾದ ಎಂ.ಡಿ.ಹರೀಶ್‌ಕುಮಾರ್ ಹೆಗ್ಡೆ, ಹೆಚ್.ಎನ್. ವೆಂಕಟೇಶ್, ಮುಖಂಡರಾದ ಸಿದ್ದಯ್ಯ, ಮಹದೇಶ್, ರಾಜು ಹಿನಕಲ್, ತಮ್ಮಣ್ಣೇಗೌಡ, ಹಿನಕಲ್ ಜಗದೀಶ್, ಜವರನಾಯಕ, ಉದ್ಬೂರು ಕೃಷ್ಣ, ಕಡಕೊಳ ಕುಮಾರಸ್ವಾಮಿ ಶುಭಾಶಯ ಕೋರಿದರು.

ಫೋನ್ ಮೂಲಕ ಶುಭಾಶಯ: ಮಾಜಿ ಸಚಿವ ಕೆ.ಎನ್. ರಾಜಣ್ಣ, ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ್, ಸಾ.ರಾ. ಮಹೇಶ್, ಎಸ್.ಟಿ.ಸೋಮಶೇಖರ್ ಸೇರಿದಂತೆ ಸಚಿವರು, ಮಾಜಿ ಸಚಿವರು, ಶಾಸಕರು, ಮಾಜಿ ಶಾಸಕರು, ಜಿಪಂ ಸದಸ್ಯರು, ಸಹಕಾರ ಮಹಾಮಂಡಳದ ನಿರ್ದೇಶಕರು,ಸಹಕಾರ ಇಲಾಖೆ ಅಧಿಕಾರಿಗಳು ಕರೆ ಮಾಡಿ ಶುಭಾಶಯ ತಿಳಿಸಿದರು.

ಬೃಹತ್ ಹಾರ: ಜಿ.ಟಿ.ದೇವೇಗೌಡರಿಗೆ ಗುಂಗ್ರಾಲ್ ಛತ್ರದ ಗ್ರಾಪಂ ಮಾಜಿ ಉಪಾಧ್ಯಕ್ಷ ಇ.ಪಿ.ರವಿಶಂಕರ್, ಮುಖಂಡರಾದ ಬೋಗಾದಿ ಚಂದ್ರಶೇಖರ್ ತಂಡದವರು ಬೃಹತ್ ಗಾತ್ರದ ಮಲ್ಲಿಗೆ ಹಾರಹಾಕಿ ಮೈಸೂರು ಪೇಟ ತೊಡಿಸಿ ಸಿಹಿ ಹಂಚಿದರು. ಇದಾದ ಬಳಿಕ ಶಾರದಾದೇವಿನಗರದಲ್ಲಿ ಅಭಿಮಾನಿಗಳು ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ರಸ್ತೆಬದಿ ವ್ಯಾಪಾರಿಗಳಿಗೆ ತಳ್ಳುವ ಗಾಡಿಗಳನ್ನು ಜಿ.ಟಿ.ದೇವೇಗೌಡರು ವಿತರಿಸಿದರು.

ಇಲವಾಲ, ಸಿದ್ದಲಿಂಗಪುರ ಗ್ರಾಮದಲ್ಲೂ ಅದ್ದೂರಿಯಾಗಿ ಆಚರಿಸಲಾಯಿತು. ಅಭಿಮಾನಿಗಳು, ಬೆಂಬಲಿಗರು ಆಯೋಜಿಸಿದ್ದ ಇವೆರಡೂ ಸಮಾರಂಭದಲ್ಲಿ ಭಾಗವಹಿಸಿ ಕೇಕ್ ಕತ್ತರಿಸಿದರು. ಬಳಿಕ ನೆನಪಿನ ಕಾಣಿಕೆ ನೀಡಿ ಸನ್ಮಾನಿಸಲಾಯಿತು.

75 ಸಸಿ ನೆಟ್ಟು ಪರಿಸರ ಜಾಗೃತಿ: ಮೈಸೂರಿನ ವಿವಿಧ ಉದ್ಯಾನಗಳಲ್ಲಿ 75 ಸಸಿಗಳನ್ನು ನೆಟ್ಟು, ಪರಿಸರ ಸಂರಕ್ಷಣೆ ಮಾಡುವ ಮೂಲಕ ಕನ್ನಡಾಂಬೆ ರಕ್ಷಣಾ ವೇದಿಕೆ ವತಿಯಿಂದ ಜಿ.ಟಿ. ದೇವೇಗೌಡರ ಹುಟ್ಟುಹಬ್ಬವನ್ನು ಆಚರಿಸಲಾಯಿತು. ವೇದಿಕೆ ಅಧ್ಯಕ್ಷ ಬಿ.ಬಿ.ರಾಜಶೇಖರ್ ನೇತೃತ್ವದಲ್ಲಿ ಕಾರ್ಯಕರ್ತರು ಈರಪ್ಪನಕೊಪ್ಪಲು ಉದ್ಯಾನವನದಲ್ಲಿ ವಿವಿಧ ಹಣ್ಣು, ಹೂವುಗಳ 75 ಸಸಿಗಳನ್ನು ನೆಟ್ಟು ನೀರೆರೆದರು. ಬಳಿಕ ಈರಪ್ಪನಕೊಪ್ಪಲು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ಲೇಖನ ಸಾಮಗ್ರಿಗಳನ್ನು ವಿತರಿಸಿದರು. ನಂತರ ವಿವಿಪುರಂ ಬಡಾವಣೆಯ ಶ್ರೀ ಲಕ್ಷ್ಮೀದೇವಮ್ಮ ಶಂಕರಶೆಟ್ಟಿ ಹೆರಿಗೆ ಆಸ್ಪತ್ರೆಯ ಒಳರೋಗಿಗಳಿಗೆ ಬ್ರೆಡ್ ಮತ್ತು ಹಣ್ಣುಗಳನ್ನು ವಿತರಿಸಲಾಯಿತು. ಈ ವೇಳೆ ರಾಜ್ಯ ಖಜಾಂಚಿ ನಂಜುಂಡ, ಸಿಂಧುವಳ್ಳಿ ಶಿವಕುಮಾರ್, ಕಿರಣ್, ಲೋಕೇಶ್, ಹರೀಶ್, ಬೊಮ್ಮನಹಳ್ಳಿ ಲೋಕೇಶ್, ಶಿವಕುಮಾರ್, ಶಿವಲಿಂಗಪ್ಪ, ಚಂದ್ರ ಶೇಖರ್, ಕಾವಿ ಬಸಪ್ಪ, ಈಡೇಗೌಡ, ಮಾದಪ್ಪ, ವತ್ಸಲ, ರಶ್ಮಿ ಸಿಂಗ್ ಪಾಲ್ಗೊಂಡಿದ್ದರು.

ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ 30ನೇ ಸಂಗೀತ ಸಮ್ಮೇಳನ



ಮೈಸೂರು: ಜೆಎಸ್‌ಎಸ್ ಮಹಾವಿದ್ಯಾಪೀಠದ ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ವತಿಯಿಂದ ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಸಂಸ್ಮರಣಾ 30ನೇ ಸಂಗೀತ ಸಮ್ಮೇಳನ ಡಿ.2ರಿಂದ 6ರವರೆಗೆ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳ ಸಾನ್ನಿಧ್ಯದಲ್ಲಿ ಆಯೋಜಿಸಲಾಗಿದೆ. ಐದು ದಿನಗಳು ನಡೆಯುವ ಈ ಸಮ್ಮೇಳನದಲ್ಲಿ ಪ್ರತಿದಿನ ಸಂಜೆ ನಾಡಿನ ಒಳಗಿನ ಹಾಗೂ ಹೊರಗಿನ ಖ್ಯಾತ ನಾಮರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಹಾಗೂ ಬೆಳಗಿನ ವಿದ್ವತ್ ಗೋಷ್ಠಿಯ ಮೊದಲಿಗೆ ಗೀತಾಂಜಲಿ ಕಾರ್ಯಕ್ರಮ ನಡೆಯಲಿದೆ. ಸಮ್ಮೇಳನದ ಅಧ್ಯಕ್ಷರಾಗಿ ಕರ್ನಾಟಕ ಶಾಸ್ತ್ರೀಯ ಸಂಗೀತ ದಿಗ್ಗಜ ಡಾ.ಟಿ.ಎಸ್.ಸತ್ಯವತಿ ಆಗಮಿಸಲಿದ್ದಾರೆ.

ಷಷ್ಠಿ: ವಿಶೇಷ ಪೂಜಾ ಕಾರ್ಯಕ್ರಮ ಇಂದು

ಮೈಸೂರು: ದೇವಯ್ಯನಹುಂಡಿಯಲ್ಲಿರುವ ಶ್ರೀ ವಿಘ್ನೇಶ್ವರ, ಸುಬ್ರಹ್ಮಣ್ಯೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಷಷ್ಠಿ ಅಂಗವಾಗಿ ನ.26ರ ಬುಧವಾರದಂದು ವಿಶೇಷ ಪೂಜಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಅಂದು ಬೆಳಗ್ಗೆ ಪ್ರಾತ:ಕಾಲದಿಂದಲೇ ಮಹಾಗಣಪತಿ ಪೂಜೆ, ಪುಣ್ಯಾಹ, ನವಗ್ರಹ ಪೂಜೆ, ಅಷ್ಟದಿಕ್ಪಾಲಕ, ಕರ್ಮ ಸಾದ್ಗುಣ್ಯ ದೇವತೆಗಳ ಪೂಜೆ, ಶ್ರೀ ಸುಬ್ರಹ್ಮಣ್ಯ ಸ್ವಾಮಿಗೆ ಅಭಿಷೇಕ, ಹೋಮ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳು ನೇರವೇರಲಿವೆ. ಮಧ್ಯಾಹ್ನ 12 ಗಂಟೆಗೆ ಮಹಾಮಂಗಳಾರತಿ. ನಂತರ ಅನ್ನ ಸಂತರ್ಪಣೆ ಹಮ್ಮಿಕೊಳ್ಳಲಾಗಿದೆ.

ಅಮೃತೇಶ್ವರ ದೇವಸ್ಥಾನದಲ್ಲಿ ಷಷ್ಠಿ ಪೂಜೆ

ಮೈಸೂರಿನ ಶ್ರೀ ಅಮೃತೇಶ್ವರಸ್ವಾಮಿ ದೇವಸ್ಥಾನದಲ್ಲಿ ಶ್ರೀ ಸುಬ್ರಹ್ಮಣ್ಯಸ್ವಾಮಿ ಸನ್ನಿಧಿಯಲ್ಲಿ ಷಷ್ಠಿ ಪ್ರಯುಕ್ತ ನ.26ರಂದು ಬೆಳಗ್ಗೆ 10 ಗಂಟೆಗೆ ವಿಶೇಷ ಪೂಜೆ, ಶ್ರೀ ಸುಬ್ರಹ್ಮಣ್ಯಹೋಮ, ಕುಜದೋಷ, ನಾಗದೋಷ ನಿವಾರಣಾ ಹೋಮ, ಕಾಲಸರ್ಪ ಶಾಂತಿ ಹೋಮ ಹಾಗೂ ಸಂಜೆ ದೀಪಾರಾಧನೆ ನೆರವೇರಲಿದೆ. ಮಾಹಿತಿಗೆ ಜಗದೀಶ್ ಶರ್ಮ, ಮೊ. 9916617795, 9535413360 ಸಂಪರ್ಕಿಸಲು ಕೋರಲಾಗಿದೆ.

ಭಗವದ್ಗೀತಾ ಕಂಠಪಾಠ ಸ್ಪರ್ಧೆ

ಮೈಸೂರು: ಗೀತಾ ಜಯಂತಿ ಪ್ರಯುಕ್ತ ದಿವ್ಯಧ್ವನಿ ಸಂಪದ ವತಿಯಿಂದ ನರ್ಸರಿ, ಪ್ರಾಥಮಿಕ, ಹಿರಿಯ ಪ್ರಾಥಮಿಕ, ಪ್ರೌಢ ಶಾಲೆ, ಕಾಲೇಜು ಹಾಗೂ ಸಂಘ ಸಂಸ್ಥೆಗಳ ವಿದ್ಯಾರ್ಥಿಗಳಿಗೆ ಭಗವದ್ಗೀತಾ ಕಂಠಪಾಠ ಸ್ಪರ್ಧೆಯನ್ನು ಡಿ.14ರಂದು ಬೆಳಗ್ಗೆ 10 ಗಂಟೆಗೆ ಹೆಬ್ಬಾಳು 1ನೇ ಹಂತ, ಲಕ್ಷ್ಮೀಕಾಂತನಗರದ ದಿವ್ಯಧ್ವನಿ ಸಂಪದ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಆಸಕ್ತರು ಡಿ.11ರೊಳಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ಕೋರಲಾಗಿದೆ. ಮಾಹಿತಿಗೆ ಮೊ.98450 98426 ಸಂಪರ್ಕಿಸಿ.

ಭಗವದ್ಗೀತಾ ಸ್ಪರ್ಧೆ: ವಿವೇಕಾನಂದ ಕೇಂದ್ರ ಕನ್ಯಾಕುಮಾರಿ, ಮೈಸೂರು ಶಾಖೆಯಲ್ಲಿ ನ.29ರಂದು ಬೆಳಗ್ಗೆ 10 ಗಂಟೆಗೆ ಭಗವದ್ಗೀತಾ ಕಂಠಪಾಠ ಸ್ಪರ್ಧೆ ಆಯೋಜಿಸಲಾಗಿದೆ. ಸ್ಪರ್ಧೆಯಲ್ಲಿ ನರ್ಸರಿಯಿಂದ 10ನೇ ತರಗತಿವರೆಗಿನ ಮಕ್ಕಳು ಭಾಗವಹಿಸಬಹುದು. ವಿವರಗಳಿಗೆ ಮೊ. 9449488228 ಸಂಪರ್ಕಿಸಬಹುದು.

ನ.29ರವರೆಗೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು: ವಿ.ವಿ.ಮೊಹಲ್ಲಾ ಉಪ ವಿಭಾಗದ ಜಯಲಕ್ಷ್ಮಿಪುರಂ ಶಾಖಾ ವ್ಯಾಪ್ತಿಯಲ್ಲಿ ಭೂಗತ ಕೇಬಲ್ ಅಳವಡಿಸುವ ಕೆಲಸ ಹಮ್ಮಿಕೊಂಡಿರುವುದರಿಂದ, ನ.29ರವರೆಗೆ ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುತ್ತದೆ.

ವಿಜಯನಗರ 1ನೇ ಹಂತ, ಹುಣಸೂರು ಮುಖ್ಯರಸ್ತೆ, ಯೋಗನರಸಿಂಹ ಸ್ವಾಮಿ ದೇವಸ್ಥಾನ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನ.27 ಮತ್ತು 29ರಂದು ವಿದ್ಯುತ್ ವ್ಯತ್ಯಯವಾಗುತ್ತದೆ.

ಜಯಲಕ್ಷ್ಮಿಪುರಂ, ಕೆ.ಡಿ.ರಸ್ತೆ, ರಾಘವೇಂದ್ರ ಸ್ವಾಮಿ ಮಠ, ಬಿ.ಎಂ ಹ್ಯಾಬಿಟೇಟ್ ಮಾಲ್, ಚಂದ್ರಕಲಾ ಆಸ್ಪತ್ರೆ ಹಾಗೂ ಮಹಾಜನ ಕಾಲೇಜಿನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನ.26 ಮತ್ತು 28ರಂದು ವಿದ್ಯುತ್ ವ್ಯತ್ಯಯವಾಗುವುದು.

ಸರ್ವ ಸದಸ್ಯರ ಸಭೆ

ಮೈಸೂರು: ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘದ 2024-25ನೇ ಸಾಲಿನ ಸರ್ವ ಸದಸ್ಯರ ಸಭೆ ನ.26ರಂದು ಮಧ್ಯಾಹ್ನ 3 ಗಂಟೆಗೆ ಸಂಘದ ವಿದ್ಯಾರ್ಥಿನಿಲಯ, ನಂ.12/1, ಡಾ.ಶ್ರೀ ಶಿವರಾತ್ರಿ ರಾಜೇಂದ್ರ ವಿದ್ಯಾರ್ಥಿ ನಿಲಯ, ಮಾರುತಿ ಟೆಂಪಲ್ ರಸ್ತೆ ಗಂಗೋತ್ರಿ ಬಡಾವಣೆಯಲ್ಲಿ ಸಂಘದ ಅಧ್ಯಕ್ಷ ರೇವಣ್ಣಸಿದ್ದಯ್ಯ ಅಧ್ಯಕ್ಷತೆಯಲ್ಲಿ ನಡೆಯಲಿದೆ.

ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು: ಮೈಸೂರಿನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ನ.27ರಂದು ಬೆಳಗ್ಗೆ 10ರಿಂದ ರಾತ್ರಿ 8ರವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ದೂ. 0821-4259259.

ವಿಶ್ವ ಪ್ರತಿಜೀವಕ ಪ್ರತಿರೋಧ ಸಪ್ತಾಹ ಅಂಗವಾಗಿ ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಜಾಗೃತಿ ಜಾಥಾ

ಮೈಸೂರು,ನ.25-ಜೆಎಸ್‌ಎಸ್ ಆಸ್ಪತ್ರೆಯಲ್ಲಿ ವಿಶ್ವ ಪ್ರತಿಜೀವಕ ಪ್ರತಿರೋಧ ಸಪ್ತಾಹದ ಅಂಗವಾಗಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಆಸ್ಪತ್ರೆಯ ಸೋಂಕು ನಿಯಂತ್ರಣ ವಿಭಾಗದ ವತಿಯಿಂದ ಜಾಗೃತಿ ಜಾಥಾವನ್ನು ಹಮ್ಮಿಕೊಳ್ಳಲಾಗಿತ್ತು.

ಆಸ್ಪತ್ರೆಯ ನಿರ್ದೇಶಕ ಡಾ.ಸಿ.ಪಿ.ಮಧು ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿ, ಪ್ರತಿಜೀವಕಗಳನ್ನು ಸಾಮಾನ್ಯವಾಗಿ ಸೋಂಕು ನಿವಾರಣೆಗೆ ಬಳಸುತ್ತಾರೆ ಆದರೆ ಇದರ ದುರ್ಬಳಕೆಯಿಂದ ಸೋಂಕು ಉಂಟು ಮಾಡುವ ಸೂಕ್ಷ್ಮಜೀವಾಣುಗಳಿಗೆ ಈ ಔಷಧಿಗಳ ಮೇಲೆ ನಿರೋಧ ಶಕ್ತಿ ಬರುತ್ತದೆ. ಇದರಿಂದ ಔಷಧಿಯು ರೋಗ ನಿವಾರಣೆಯಲ್ಲಿ ವಿಫಲವಾಗುತ್ತದೆ. ನಮ್ಮ ದೇಶದಲ್ಲಿ ಪ್ರತಿಜೀವಕಗಳನ್ನು ವೈದ್ಯರ ಸಲಹಾ ಚೀಟಿ ಇಲ್ಲದೆ ಉಪಯೋಗಿಸುವುದರಿಂದ ಈ ಸಮಸ್ಯೆಯು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಹೀಗೆ ಅಸಮರ್ಪಕವಾಗಿ ಅಪೂರ್ಣವಾಗಿ ಈ ಔಷಧಿಗಳನ್ನು ತೆಗೆದುಕೊಳ್ಳುವುದು. ಅನಗತ್ಯವಾಗಿ ಉಪಯೋಗಿಸುವುದರ ವಿರುದ್ಧ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಅನಿವಾರ್ಯ ಮತ್ತು ಅವಶ್ಯಕ ಎಂದರು.



ವಿಶ್ವ ಪ್ರತಿಜೀವಕ ಪ್ರತಿರೋಧ ಸಪ್ತಾಹದ ಅಂಗವಾಗಿ ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಜಾಗೃತಿ ಜಾಥಾವನ್ನು ಹಮ್ಮಿಕೊಳ್ಳಲಾಗಿತ್ತು.

ಜೆಎಸ್‌ಎಸ್ ಆಸ್ಪತ್ರೆ ವತಿಯಿಂದ ಹಮ್ಮಿಕೊಂಡಿದ್ದ ಜಾಗೃತಿ ನಡಿಗೆಯಲ್ಲಿ ಆಸ್ಪತ್ರೆ ಸಿಬ್ಬಂದಿ, ಜೆಎಸ್‌ಎಸ್ ಮೆಡಿಕಲ್ ಕಾಲೇಜು ವಿದ್ಯಾರ್ಥಿಗಳು, ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಜಾಥದಲ್ಲಿ ಆಸ್ಪತ್ರೆಯ ಸ್ಥಾನೀಯ ವೈದ್ಯಾಧಿಕಾರಿ ಡಾ.ಶಾಂತಮಲ್ಲಪ್ಪ, ವೈದ್ಯಕೀಯ ವಿಭಾಗದ ಮುಖ್ಯಸ್ಥ ಡಾ.ವೈ.ಎಸ್.ರವಿಕುಮಾರ್, ಪ್ರಾಧ್ಯಾಪಕ ಡಾ.ಸುಭಾಷ್‌ಚಂದ್ರ, ಮೈಕ್ರೋ ಬಯಾಲಜಿ ವಿಭಾಗದ ಮುಖ್ಯಸ್ಥ ಡಾ.ತೇಜಶ್ರೀ, ಆಸ್ಪತ್ರೆ ಸೋಂಕು ನಿಯಂತ್ರಣ ಸಮಿತಿಯ ಅಧ್ಯಕ್ಷ ಡಾ.ರಶ್ಮಿ ಪಿ ಮಹಾಲೆ, ಡಾ.ನೀತು ಮೂರ್ತಿ, ಆಡಳಿತಾಧಿಕಾರಿ ಲೋಕೇಶ್ ಹಾಗೂ ಎಲ್ಲಾ ವಿಭಾಗಗಳ ಮುಖ್ಯಸ್ಥರು ಮತ್ತು ಸಿಬ್ಬಂದಿ ವರ್ಗ ಹಾಜರಿದ್ದರು.

ಮೈಸೂರು ಮಿತ್ರ ಬುಧವಾರ 26 ನವೆಂಬರ್ 2025

ರಾಜ್ಯ ಸರ್ಕಾರದಿಂದ ಜನರ ಮೇಲೆ ಸಾಲದ ಹೊರೆ

ಮಾಜಿ ಸಂಸದ ಪ್ರತಾಪ್ ಸಿಂಹ ಆರೋಪ



ಸುದ್ದಿಗೋಷ್ಠಿಯಲ್ಲಿ ಮಾಜಿ ಸಂಸದ ಪ್ರತಾಪ್ ಸಿಂಹ ಮಾತನಾಡಿದರು.

ಮಂಡ್ಯ, ನ.25– ರಾಜ್ಯದಲ್ಲಿ ರೈತ ವಿರೋಧಿ ಸರ್ಕಾರ ಅಧಿಕಾರದಲ್ಲಿದ್ದು, ಜನರ ಮೇಲೆ ಸಾಲದ ಹೊರೆ ಬಿಟ್ಟರೆ ಯಾವುದೇ ಅಭಿವೃದ್ಧಿ ಕೆಲಸ ಆಗುತ್ತಿಲ್ಲ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಆರೋಪಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತರ ವಿಚಾರದಲ್ಲಿ ವ್ಯಾಪಕ ಸಮಸ್ಯೆ ಇದೆ. ಹೀಗಾಗಿ ಬಿಜೆಪಿ ರೈತ ಮೋರ್ಚಾ ನೇತೃತ್ವದಲ್ಲಿ ರಾಜ್ಯಾದ್ಯಂತ ಹೋರಾಟ ನಡೆಯಲಿದ್ದು, ರೈತರು ಎದುರಿಸುತ್ತಿರುವ ಸಮಸ್ಯೆ ಬಗ್ಗೆ ಸರ್ಕಾರದ ಗಮನಕ್ಕೆ ತರಲಾಗುವುದು. 2008ರಲ್ಲಿ ಬಿ.ಎಸ್.ಯಡಿಯೂರಪ್ಪ ರೈತರ ಹೆಸರಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿದರು. ಆ ಕಾರಣಕ್ಕೆ ಕೃಷಿ ಬಜೆಟ್ ಕೊಟ್ಟಿದ್ದರು. ರೈತರ ಸಾಲ ಮನ್ನಾ ಮಾಡಿದ್ದರೆ ಅದು ಕುಮಾರಸ್ವಾಮಿ ಕೊಡುಗೆ. ಯಡಿಯೂರಪ್ಪ ಕುಮಾರಸ್ವಾಮಿ ಇಬ್ಬರೂ ಸಹ ರೈತರ ಸಾಲ ಮನ್ನಾ ಮಾಡಿದ್ದರು ಎಂದರು.

ಹಾಲಿಗೆ ಪ್ರೋತ್ಸಾಹಧನ ಆರಂಭಿಸಿದ್ದು ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪನವರು ಶಾಲಾ ಮಕ್ಕಳಿಗೆ ಸೈಕಲ್ ಕೊಟ್ಟರು. ಭಾಗ್ಯಲಕ್ಷ್ಮಿ ಯೋಜನೆ ಕೊಟ್ಟು ಹೆಣ್ಣು ಮಕ್ಕಳಿಗೆ ಅನುಕೂಲ ಮಾಡಿಕೊಟ್ಟರು. ಕೃಷಿಗೆ ಹೆಚ್ಚು ಹಣ ಕೊಟ್ಟು ಅಭಿವೃದ್ಧಿ ಪಡಿಸಿದರು. ರಾಜ್ಯದಲ್ಲಿ ರೈತ ವಿರೋಧಿ ಸರ್ಕಾರ ಇದೆ. ಉತ್ತರ ಕರ್ನಾಟಕದಲ್ಲಿ ಕಬ್ಬು ಬೆಳೆಗಾರರ ಹೋರಾಟ ನೋಡಿದ್ದೇವೆ. ಬೆಂಬಲ ಬೆಲೆ ಕೊಡುವಲ್ಲಿ ಸರ್ಕಾರ ನಿರ್ಲಕ್ಷ್ಯ ವಹಿಸಿದೆ. ರೈತರ ಪರ ನಾವು ಹೋರಾಟ ಮಾಡುತ್ತೇವೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಬರೀ ಗ್ಯಾರಂಟಿ ಅಂತಾರೆ ಅಷ್ಟೇ. ಯಾವ ಯೋಜನೆಯೂ ಜನರಿಗೆ ತಲುಪುತ್ತಿಲ್ಲ. ಶಕ್ತಿ ಯೋಜನೆಗೆ ಕೊಟ್ಟು ಬಸ್ ರಿಪೇರಿ ಮಾಡಕ್ಕಾಗದ ಸ್ಥಿತಿಗೆ ಬಂದಿದೆ. ರಾಜ್ಯದಲ್ಲಿ ಸಾಲದ ಹೊರೆ ಬಿಟ್ಟರೆ ಅಭಿವೃದ್ಧಿ ಕೆಲಸ ಆಗ್ತಿಲ್ಲ. ಕಾಂಗ್ರೆಸ್ ಸರ್ಕಾರ ನಮ್ಮ ಯೋಜನೆ ತಡೆ ಹಿಡಿಯುವ ಕೆಲಸ ಮಾಡಿದೆ. ಈ ಸರ್ಕಾರ ರೈತರ ಸಾಲ ಮನ್ನಾ ಬಗ್ಗೆ ಯೋಚನೆ ಕೂಡ ಮಾಡುತ್ತಿಲ್ಲ ಎಂದು ಕಿಡಿಕಾರಿದರು.

ಸಿದ್ದರಾಮಯ್ಯ ಅಭಿವೃದ್ಧಿ ಕೆಲಸ ಕಲಿತಿದ್ದರೆ ರಾಜ್ಯಕ್ಕೆ ಒಳ್ಳೆಯದಾಗುತ್ತಿತ್ತು: ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಗರಡಿಯಲ್ಲಿ ಪಳಗಿದ ಸಿದ್ದರಾಮಯ್ಯ ಅವರು ಅಭಿವೃದ್ಧಿ ಕೆಲಸ ಕಲಿತಿದ್ದರೆ ರಾಜ್ಯಕ್ಕೆ ಒಳ್ಳೆಯದಾಗುತ್ತಿತ್ತು. ಸಿದ್ದರಾಮಯ್ಯ ಬರಿ ಪಾಲಿಟಿಕ್ಸ್ ಕಲಿತರು. ಓಲೈಕೆ, ಗುರ್ ಅನ್ನೋದು ಬಿಟ್ಟರೆ ಪಾಲಿಟಿಕ್ಸ್ ಚೆನ್ನಾಗಿ ಮಾಡುತ್ತಾರೆ. ಸಿದ್ದರಾಮಯ್ಯಗೆ ಕುರ್ಚಿ ಬಿಟ್ಟು ಕೊಡುವ ಮನಸ್ಸಿಲ್ಲ. ಹೀಗಾಗಿ ಡಿ.ಕೆ. ಶಿವಕುಮಾರ್‌ಗೆ ಸಿಎಂ ಕುರ್ಚಿ ಬಿಟ್ಟು ಕೊಡುತ್ತಾರೆ ಎಂದು ಅನ್ನಿಸುತ್ತಿಲ್ಲ. ಎರಡೂವರೆ ವರ್ಷ ಒಳ್ಳೆಯ ಕೆಲಸ ಮಾಡಿದ್ದರೆ ಸಿದ್ದರಾಮಯ್ಯ ಮುಂದುವರಿಯಲಿ ಎಂದು ಜನರೇ ಧ್ವನಿ ಎತ್ತುತ್ತಿದ್ದರು. ಈಗ ಜನರು ಉಗಿಯುತ್ತಿದ್ದಾರೆ. ಕಾಂಗ್ರೆಸ್ ಹೈಕಮಾಂಡ್ ಎಲ್ಲರಿಗೂ ಹೆದರಿಕೊಳ್ಳುವ ಆಗಿದೆ. ಅದಕ್ಕೆ ಸಿದ್ದರಾಮಯ್ಯ ಸಿಎಂ ಆಗಿದ್ದಾರೆ. ಮೂಲ ಕಾಂಗ್ರೆಸ್ ನಿಯಮದ ಪ್ರಕಾರ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರೇ ಸಿಎಂ ಆಗಬೇಕಿತ್ತು ಎಂದರು.

ಚುನಾವಣೆಯಲ್ಲಿ ಪಕ್ಷಕ್ಕೆ ಬಹುಮತ ಬಂದರೆ ಕೆಪಿಸಿಸಿ ಅಧ್ಯಕ್ಷರಾದವರು ಸಿಎಂ ಆಗುತ್ತಾರೆ. ಮಾಜಿ ಸಿಎಂ ಎಸ್.ಎಂ.ಕೃಷ್ಣ ಕೂಡ ಹಾಗೆಯೇ ಸಿಎಂ ಆಗಿದ್ದು, 2013ರಲ್ಲಿ ಪರಮೇಶ್ವರ್ ಅಧ್ಯಕ್ಷರಾಗಿದ್ದರು. ಮೂಲ ಕಾಂಗ್ರೆಸ್ಸಿಗ ಪರಮೇಶ್ವರ್ ಅವರಿಗೆ ಅವಕಾಶ ಸಿಗುತ್ತದೆ ಎಂದು ಸ್ವಾಭಾವಿಕವಾದರೂ ಚೂ ಬಿಟ್ಟು ಸೋಲಿಸಿ, ಇವರು ಸಿಎಂ ಆಗಿಬಿಟ್ಟರು. 2023ರಲ್ಲಿ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರನ್ನು ಸೋಲಿಸಲು ಆಗಿಲ್ಲ. ಡಿ.ಕೆ.ಶಿವಕುಮಾರ್ ಹುಟ್ಟು ಹೋರಾಟಗಾರ, ರಾಜಕಾರಣ ಚೆನ್ನಾಗಿ ಮಾಡುತ್ತಾರೆ. ಎದುರಿಸಲು ಶಕ್ತಿ ಇರುವ ಮನುಷ್ಯ ಇವರನ್ನು ಸೋಲಿಸಕ್ಕಾಗಲ್ಲ ಎಂದರು.

ಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಎನ್.ಎಸ್. ಇಂದ್ರೇಶ್, ಮುಖಂಡರಾದ ಇಂಡುವಾಳು ಎಸ್.ಸಚ್ಚಿದಾನಂದ, ಅಶೋಕ್ ಜಯರಾಂ, ರೈತ ಮೋರ್ಚಾ ಜಿಲ್ಲಾಧ್ಯಕ್ಷ ಅಶೋಕ್ ಕುಮಾರ್ ಸೇರಿದಂತೆ ಇತರರಿದ್ದರು.

ನವೆಂಬರ್‌ನಲ್ಲಿ ಕ್ರಾಂತಿ, ಡಿಸೆಂಬರ್‌ನಲ್ಲಿ ಭ್ರಾಂತಿ

ರಾಜ್ಯ ಸರ್ಕಾರದಲ್ಲಿ ನವೆಂಬರ್ ಕ್ರಾಂತಿ ಶುರುವಾಗಿದೆ. ಡಿಸೆಂಬರ್‌ನಲ್ಲಿ ಭ್ರಾಂತಿ ಆಗಲಿದೆ. ಕ್ರಾಂತಿ, ಭ್ರಾಂತಿ ಬಿಟ್ಟರೆ ಬೇರೆ ಏನು ಮಾಡುತ್ತಿಲ್ಲ. ಸರ್ಕಾರಕ್ಕೆ ಎರಡೂವರೆ ವರ್ಷ ಕಳೆದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪರ ವಿರೋಧ ಚರ್ಚೆ ನಡೆಯುತ್ತಿದೆ. ಸಚಿವ ಸತೀಶ್ ಜಾರಕಿಹೊಳಿ ಎತ್ತಿ ಕಟ್ಟುವುದು, ಶಾಸಕರ ಹಿಡಿದಿಟ್ಟುಕೊಳ್ಳುವ ಕೆಲಸ ಮಾತ್ರ ಆಗುತ್ತಿದೆ.

– ಪ್ರತಾಪ್ ಸಿಂಹ, ಮಾಜಿ ಸಂಸದ.

ಡೇರಿ ಅಭಿವೃದ್ಧಿಗೆ ಪ್ರತಿಯೊಬ್ಬರೂ ಸಹಕರಿಸಿ

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಸಲಹೆ



ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರನ್ನು ಅಭಿನಂದಿಸಲಾಯಿತು.

ಪಾಂಡವಪುರ, ನ.25– ರೈತರ ಬೆನ್ನೆಲುಬಾಗಿರುವ ಹಾಲು ಉತ್ಪಾದಕರ ಸಹಕಾರ ಸಂಘಗಳ ಅಭಿವೃದ್ಧಿಗೆ ಪ್ರತಿಯೊಬ್ಬರೂ ಸಹಕರಿಸಬೇಕು ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ತಿಳಿಸಿದರು.

ತಾಲೂಕಿನ ಚಿಕ್ಕಾಯರಹಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ನೂತನ ಕಟ್ಟಡ ಉದ್ಘಾಟನಾ ಸಮಾರಂಭದಲ್ಲಿ ಪಶು ಆಹಾರ ಮಳಿಗೆ ಉದ್ಘಾಟಿಸಿ ಮಾತನಾಡಿದ ಅವರು, ಕೃಷಿ ಪ್ರಧಾನ ಜಿಲ್ಲೆ ಮಂಡ್ಯದಲ್ಲಿ ಹೈನುಗಾರಿಕೆ ಪ್ರಮುಖ ಪಾತ್ರ ವಹಿಸುತ್ತಿದೆ. ಲಕ್ಷಾಂತರ ರೈತರು ಕೃಷಿಯೊಟ್ಟಿಗೆ ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡು ಆರ್ಥಿಕವಾಗಿ ಸದೃಢರಾಗುತ್ತಿದ್ದಾರೆ. ಸಾವಿರಾರು ರೈತ ಕುಟುಂಬಗಳ ಕುಟುಂಬ ನಿರ್ವಹಣೆಗೆ ಹೈನುಗಾರಿಕೆ ಸಹಕಾರಿಯಾಗಿದೆ. ಇಂತಹ ಸಹಕಾರ ಸಂಘಗಳು ಅಭಿವೃದ್ಧಿ ಹೊಂದರೆ ಮಾತ್ರ ರೈತರ ಅಭಿವೃದ್ಧಿ ಸಾಧ್ಯವಾಗುತ್ತದೆ. ಹಾಗಾಗಿ ಡೇರಿಯಲ್ಲಿ ಪಾರದರ್ಶಕವಾಗಿ ಆಡಳಿತ ನಡೆಸಿ ಸಂಘವನ್ನು ಅಭಿವೃದ್ಧಿಯತ್ತ ಕೊಂಡೊಯ್ಯಬೇಕಾಗಿದೆ. ಇಲ್ಲಿ ಯಾವುದೇ ಅವ್ಯವಹಾರಕ್ಕೂ ಆಸ್ಪದ ನೀಡದೆ ಸಂಘದ ಶ್ರೇಯೋಭಿವೃದ್ಧಿಗೆ ಪ್ರತಿಯೊಬ್ಬರೂ ಶ್ರಮಿಸಬೇಕು. ಚಿಕ್ಕಾಯರಹಳ್ಳಿ ಸಹಕಾರ ಸಂಘ ಮಾದರಿಯಾಗಿ ಕೆಲಸ ಮಾಡಿ ಇಂದು ಸಂಘದ ಸ್ವಂತ ಕಟ್ಟಡ ನಿರ್ಮಿಸಿಕೊಂಡಿದೆ. ಸಂಘ ಇದೇ ರೀತಿ ಅಭಿವೃದ್ಧಿ ಹೊಂದಿ ಜಿಲ್ಲೆಗೆ ಮಾದರಿ ಸಂಘವಾಗಲೆಂದು ಹಾರೈಸಿದರು.

> ಹೈನುಗಾರಿಕೆಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಸಾಕಷ್ಟು ಆರ್ಥಿಕ ಸಹಕಾರ ನೀಡುತ್ತಿದ್ದು, ರೈತರು ಸದ್ಬಳಕೆ ಮಾಡಿಕೊಂಡು ಹೆಚ್ಚಿನ ಮಟ್ಟದಲ್ಲಿ ಹೈನುಗಾರಿಕೆಯಲ್ಲಿ ತೊಡಗಿಸಿಕೊಳ್ಳಬೇಕು. ಮುಂದಿನ ದಿನಗಳಲ್ಲಿ ಸಂಘಕ್ಕೆ ಒಕ್ಕೂಟದಿಂದ ದೊರೆಯುವ ಎಲ್ಲಾ ಸೌಲಭ್ಯ ದೊರಕಿಸಿಕೊಡುವ ಕೆಲಸ ಮಾಡುತ್ತೇನೆ.
>
> – ಸಿ.ಶಿವಕುಮಾರ್, ಮನ್‌ಮುಲ್ ನಿರ್ದೇಶಕ.

ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಎನ್.ಎಸ್. ಇಂದ್ರೇಶ್, ಮನ್‌ಮುಲ್ ಉಪವ್ಯವಸ್ಥಾಪಕ ಆರ್.ಪ್ರಸಾದ್ ಮಾತನಾಡಿದರು. ಅಧ್ಯಕ್ಷತೆಯನ್ನು ಡೇರಿ ಅಧ್ಯಕ್ಷೆ ನಮಿತಾ ವಹಿಸಿದ್ದರು. ಡೇರಿ ಉಪಾಧ್ಯಕ್ಷೆ ಸಿ.ಟಿ.ರತ್ನಮ್ಮ, ನಿರ್ದೇಶಕರಾದ ಮಹದೇವಮ್ಮ, ಗೌರಮ್ಮ, ಪ್ರಭಾವತಿ, ಭಾಗ್ಯ, ಸುಶೀಲಮ್ಮ, ಶೋಭ, ಮಹದೇವಮ್ಮ, ರಾಜಮ್ಮ, ಮಾರ್ಗ ವಿಸ್ತರಣಾಧಿಕಾರಿ ಉಷಾ, ಕಾರ್ಯದರ್ಶಿ ರುದ್ರಾಂಬಿಕೆ, ಸಂಧ್ಯಾ, ಮುಖಂಡರಾದ ರಾಜೇಂದ್ರ, ರಘು, ವಿರೂಪಾಕ್ಷ, ಗೋವಿಂದಯ್ಯ, ಪ್ರಭುದೇವ, ರಜಿನಿ, ನಿರಂಜನ್, ಚಂದ್ರಶೇಖರ್, ಆನಂದ್ ಸೇರಿದಂತೆ ಹಲವರಿದ್ದರು.

ಅವಧಿ ವಿಸ್ತರಣೆ

ಮಂಡ್ಯ, ನ.25– ಕ್ರಿಶ್ಚಿಯನ್ ಸಮುದಾಯ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳಲ್ಲಿ ಸಾಲ ಸೌಲಭ್ಯ ಪಡೆಯಲು ಅರ್ಜಿ ಸಲ್ಲಿಸುವ ದಿನಾಂಕವನ್ನು ಡಿ.3ವರೆಗೆ ವಿಸ್ತರಿಸಲಾಗಿದೆ.

ಅರಿವು ಸಾಲ, ವಿದೇಶಿ ವಿವಿಯಲ್ಲಿ ಉನ್ನತ ಶಿಕ್ಷಣಕ್ಕಾಗಿ ಸಾಲ, ಸ್ವಾವಲಂಬಿ ಸಾರಥಿ, ಶ್ರಮಶಕ್ತಿ ಸಾಲ, ಶ್ರಮಶಕ್ತಿ ವಿಶೇಷ ಮಹಿಳಾ ಯೋಜನೆ, ವೃತ್ತಿ ಪ್ರೋತ್ಸಾಹ ಸಾಲ, ನೇರ ಸಾಲ, ವ್ಯಾಪಾರ/ಉದ್ಯಮಗಳಿಗೆ ನೇರ ಸಾಲ, ಅಲ್ಪಸಂಖ್ಯಾತರ ಸಮುದಾಯದ ಮಹಿಳಾ ಸ್ವ-ಸಹಾಯ ಗುಂಪುಗಳಿಗೆ ಸಹಾಯಧನ ಯೋಜನೆಗಳಿಗೆ ಅರ್ಜಿ ಸಲ್ಲಿಸಬಹುದಾಗಿದೆ.

ಆಸಕ್ತ ಕ್ರಿಶ್ಚಿಯನ್ ಸಮುದಾಯದವರು https://kccdconline.karnataka.gov.in ಆನ್‌ಲೈನ್ ತಂತ್ರಾಂಶ ಮೂಲಕ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ಜಿಲ್ಲಾ ವ್ಯವಸ್ಥಾಪಕರ ಕಚೇರಿ, ಚಿಕ್ಕಮಂಡ್ಯ ಕೆರೆಅಂಗಳದಲ್ಲಿನ ಜಿಲ್ಲಾ ಕರ್ನಾಟಕ ಕ್ರಿಶ್ಚಿಯನ್ ಸಮುದಾಯ ಅಭಿವೃದ್ಧಿ ನಿಗಮ (ನಿ) ಅಥವಾ ದೂ.ಸಂ: 08232-220186/ 8277799990 ಸಂಪರ್ಕಿಸಬಹುದಾಗಿದೆ.

ಡಿ.5ರಿಂದ 3 ದಿನ ಕೃಷಿ ಮೇಳ: ಚಲುವರಾಯಸ್ವಾಮಿ



ಸಚಿವ ಎನ್.ಚಲುವರಾಯಸ್ವಾಮಿ ಕೃಷಿ ಮೇಳದ ಪೋಸ್ಟರ್ ಬಿಡುಗಡೆಗೊಳಿಸಿದರು.

ಮಂಡ್ಯ, ನ.25– ಮಂಡ್ಯ ಕೃಷಿ ವಿಶ್ವವಿದ್ಯಾನಿಲಯದ 5 ಜಿಲ್ಲೆಗಳ ಹಾಗೂ ರಾಜ್ಯದ 3 ವಲಯಗಳಿಗೆ ಅನುಗುಣವಾಗಿ ವಿ.ಸಿ.ಫಾರಂ ಆವರಣದಲ್ಲಿ ಇದೇ ಮೊದಲ ಬಾರಿಗೆ ಡಿ.5ರಿಂದ 3 ದಿನಗಳ ಕಾಲ ಕೃಷಿ ಮೇಳ ಆಯೋಜಿಸಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ಬೆಂಗಳೂರಿನ ಜಿಕೆವಿಕೆ ಕೃಷಿ ವಿವಿಯಲ್ಲಿ ನಡೆದ ಕೃಷಿ ಮೇಳದಲ್ಲಿ 50 ಲಕ್ಷಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು. ಮಂಡ್ಯ ದಲ್ಲಿ 5 ರಿಂದ 6 ಲಕ್ಷ ಮಂದಿ ಭಾಗವಹಿಸುವ ನಿರೀಕ್ಷೆಯಿದೆ ಎಂದರು.

ಜಿಕೆವಿಕೆ, ಶಿವಮೊಗ್ಗ, ಧಾರವಾಡ, ರಾಯಚೂರು ಜಿಲ್ಲೆಗಳ ಕೃಷಿ ವಿವಿಯಲ್ಲಿ ಕೃಷಿ ಮೇಳ ಮಾಡಲಾಗಿದೆ. ಜಿಕೆವಿಕೆ ಕೃಷಿ ಮೇಳದಲ್ಲಿ 750 ಮಳಿಗೆ ಹಾಕಲಾಗಿತ್ತು. ಇದೀಗ ಮಂಡ್ಯದಲ್ಲಿ 350 ಮಳಿಗೆ ಹಾಕಲಾಗುವುದು. ರೈತರಿಗೆ ಒಂದೇ ಕಡೆ ತಾಂತ್ರಿಕ, ಹೊಸತಳಿ ಸೇರಿದಂತೆ ಎಲ್ಲಾ ರೀತಿಯ ಮಾಹಿತಿ ನೀಡಲಾಗುವುದು ಎಂದರು.

ಮಂಡ್ಯದಲ್ಲಿ ವಿಶ್ವವಿದ್ಯಾಲಯ ಪ್ರಾರಂಭವಾದ ಒಂದೇ ವರ್ಷದಲ್ಲಿ ಮಾನ್ಯತೆ, ಅಭಿವೃದ್ಧಿಯಾಗಿರುವ ಉದಾಹರಣೆ ಇಲ್ಲ. ಹೀಗಾಗಿ ಮೊದಲ ವರ್ಷದಲ್ಲೇ ಮೂಲ ಸೌಕರ್ಯಗಳಿಗೆ 100 ಕೋಟಿ ಒದಗಿಸಿ ಕೊಟ್ಟಿದೆ. ನಬಾರ್ಡ್ ಮೂಲಕ 70 ಕೋಟಿ ಮಂಜೂರಾತಿಗೆ ಕಳುಹಿಸಲಾಗಿದೆ. ಆರ್ಥಿಕ ಇಲಾಖೆಯಿಂದ 20 ಕೋಟಿ ಮಂಜೂರಾಗಿ, ಸಂಪುಟ ಸಭೆಯಲ್ಲಿ ಅನುಮೋದನೆ ಪಡೆದಿದೆ ಎಂದು ಮಾಹಿತಿ ನೀಡಿದರು.

ಕೃಷಿ ಮೇಳದ ಮೂಲಕ ಎಕ್ಸಲೆನ್ಸ್ ಫಾರ್ ರೈಸ್ ರಿಸರ್ಚ್ ಇನ್ ಕರ್ನಾಟಕ ಕೇಂದ್ರ ಸ್ಥಾಪಿಸಲಾಗುವುದು. ಉತ್ತಮ ಪೋಷಕಾಂಶ ಭರಿತ, ಕಡಿಮೆ ನೀರಿನಲ್ಲಿ ಬೆಳೆಯುವ, ರೋಗ ಮತ್ತು ಕೀಟಭಾದೆ ನಿರೋಧಕ ಹಾಗೂ ಅಧಿಕ ಇಳುವರಿ ಭತ್ತದ ತಳಿ ಅಭಿವೃದ್ಧಿ ಪಡಿಸಲು ಉದ್ದೇಶಿಸಲಾಗಿದೆ. ಇದಕ್ಕಾಗಿ ಫಿಲಿಫೈನ್ಸ್‌ನ ಅಂತರಾಷ್ಟ್ರೀಯ ಭತ್ತದ ಸಂಶೋಧನಾ ಕೇಂದ್ರದ ಜೊತೆ ಒಪ್ಪಂದ ಮಾಡಿಕೊಂಡು ಅಲ್ಲಿ ಅಭಿವೃದ್ಧಿ ಪಡಿಸಿದ ತಳಿಗಳನ್ನು ತಂದು ಪ್ರಾತ್ಯಕ್ಷಿಕೆ ನೀಡುವ ಉದ್ದೇಶ ಹೊಂದಲಾಗಿದೆ ಎಂದರು.

ಮೇಳದಲ್ಲಿ ನವೀನ ಕೃಷಿ ಯಂತ್ರಗಳ ಪ್ರದರ್ಶನ, ವಸ್ತು ಪ್ರದರ್ಶನ, ಮೀನು ಕೃಷಿ, ಪಶು ಸಂಗೋಪನೆ, ಸಸ್ಯ ಕೃಷಿ, ದೇಸಿ ಮತ್ತು ವಿದೇಶಿ ತಳಿಗಳ ಮಾಹಿತಿ, ರೇಷ್ಮೆ ಕೃಷಿ, ಸಾವಯವ ಕೃಷಿ ಮತ್ತು ನೈಸರ್ಗಿಕ ಕೃಷಿ ಪ್ರಾತ್ಯಕ್ಷಿಕೆ, ಬಹುಬೆಳೆ ಪದ್ಧತಿ, ಸಮುದಾಯ ಕೃಷಿ, ಗುತ್ತಿಗೆ ಆಧಾರದ ಕೃಷಿ, ಜೈವಿಕ ಕೃಷಿ, ನೀರಾವರಿ ಪದ್ಧತಿ, ಕಾಫಿ ಮತ್ತು ಸಾಂಬಾರ ಬೆಳೆಗಳ ತಂತ್ರಜ್ಞಾನಗಳು, ಕಬ್ಬು ಬೆಳೆಯಲ್ಲಿ ತರಗು ಮುಚ್ಚಿ ಪ್ರಾತ್ಯಕ್ಷಿಕೆ ಮತ್ತು ಮಾಹಿತಿ ನೀಡಲಾಗುವುದು. ವಿಸಿ ಫಾರಂನ 50 ಎಕರೆ ಪ್ರದೇಶದಲ್ಲಿ ಬೆಳೆಗಳ ನೇರ ಪ್ರಾತ್ಯಕ್ಷಿಕೆ ನೀಡಲಾಗುವುದೆಂದರು.

ಕೃಷಿಯಲ್ಲಿ ಕೃತಕ ಬುದ್ಧಿಮತೆ, ಕೃಷಿ ಪ್ರವಾಸೋದ್ಯಮ, ರೈತ-ವಿಜ್ಞಾನಿಗಳ ಸಂವಾದ, ಚರ್ಚಾಗೋಷ್ಠಿಗಳು, ತಜ್ಞರಿಂದ ಸಲಹಾ ಸೇವೆಗಳು ನೀಡಲಾಗುವುದು. ಇದೇ ವೇಳೆ 5 ಜಿಲ್ಲೆಗಳ 10 ಪ್ರಗತಿಪರ ರೈತ/ ರೈತ ಮಹಿಳೆ ಪ್ರಶಸ್ತಿ ಮತ್ತು 55 ಜನ ಯುವ ರೈತ/ ರೈತ ಮಹಿಳೆಯರಿಗೆ ತಾಲೂಕು ಮಟ್ಟದ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದರು.

ಕೃಷಿ ಮೇಳಕ್ಕೆ ಆಗಮಿಸುವ ರೈತರು, ಸಾರ್ವಜನಿಕರಿಗೆ ಮಂಡ್ಯದಿಂದ ವಾಹನ, ಕುಡಿಯುವ ನೀರು, ರಿಯಾಯಿತಿ ದರದಲ್ಲಿ ಸಾಂಪ್ರದಾಯಕ ಪದ್ಧತಿ ಆಹಾರ ವ್ಯವಸ್ಥೆ. ರೈತ ಮತ್ತು ಸಾರ್ವಜನಿಕರಿಗೆ ವೈಜ್ಞಾನಿಕ ಮಾಹಿತಿ ನೀಡಲು ಸ್ವಯಂ ಸೇವಕರ ನಿಯೋಜಿಸಲಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ರೈತರು, ವಿದ್ಯಾರ್ಥಿಗಳು, ಕೃಷಿ ಕಾರ್ಮಿಕರು, ಸಾರ್ವಜನಿಕರು, ಉದ್ದಿಮೆದಾರರು ಹಾಗೂ ಇತರರರು ಭಾಗವಹಿಸುವಂತೆ ಮನವಿ ಮಾಡಿದರು. ಗೋಷ್ಠಿಯಲ್ಲಿ ಮಂಡ್ಯ ಕೃಷಿ ವಿವಿಯ ವಿಶೇಷಾಧಿಕಾರಿ ಹರಿಣಿ ಕುಮಾರ್, ಮೈಶುಗರ್ ಅಧ್ಯಕ್ಷ ಸಿ.ಡಿ. ಗಂಗಾಧರ್, ಅಶೋಕ್ ಇತರರಿದ್ದರು.

ನಗರಸಭೆ ಅಧಿಕಾರಿ ಮನೆ ಮೇಲೆ ಲೋಕಾಯುಕ್ತ ದಾಳಿ



ಮಂಡ್ಯ, ನ.25– ಭ್ರಷ್ಟಾಚಾರ ಆರೋಪದ ಮೇಲೆ ಮಂಡ್ಯ ನಗರಸಭೆ ಸಮುದಾಯ ಸಂಘಟನಾ ಅಧಿಕಾರಿ ಪುಟ್ಟಸ್ವಾಮಿ ಎಂಬುವರ ಮನೆ, ಕಚೇರಿ, ಫಾರಂ ಹೌಸ್ ಸೇರಿದಂತೆ 5 ಕಡೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ಅಧಿಕಾರಿ ಪುಟ್ಟಸ್ವಾಮಿ ವಿರುದ್ಧ ಸಾಕಷ್ಟು ದೂರು ಬಂದ ಹಿನ್ನೆಲೆಯಲ್ಲಿ ದಾಳಿ ನಡೆಸಿದ್ದು, ಈ ಹಿಂದೆ ಪುಟ್ಟಸ್ವಾಮಿ ಚನ್ನಪಟ್ಟಣ, ಮದ್ದೂರು ಸೇರಿ ಹಲವು ಕಡೆ ಪುರಸಭೆ ಮುಖ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದರು.

ಮಂಡ್ಯ ತಾಲೂಕಿನ ತೂರೆಚಾಕನಹಳ್ಳಿ ಫಾರ್ಮ್ ಹೌಸ್ ಹಾಗೂ ಸಂಬಂಧಿಕರ ಮನೆ, ನಗರಸಭೆ ಕಚೇರಿ, ಮೈಸೂರಿನ ನಿವಾಸ ಹಾಗೂ ಖಾಸಗಿ ಕಚೇರಿ ಸೇರಿ 5 ಕಡೆ ಏಕಕಾಲದಲ್ಲಿ ದಾಳಿ ನಡೆಸಲಾಗಿದ್ದು, ಎಲ್ಲೆಡೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಲೋಕಾಯುಕ್ತ ಪೊಲೀಸ್ ಅಧಿಕಾರಿ ಬ್ಯಾಟರಾಯಗೌಡ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಲಾಗಿದೆ.

ಒಂದನೇ ಪುಟದಿಂದ

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸೈಬರ್ ಲ್ಯಾಬ್



ಮೈಸೂರಿನ ನಜರ್‌ಬಾದ್ ಪೊಲೀಸ್ ಠಾಣೆಗೆ ಮಂಗಳವಾರ ದಿಢೀರ್ ಭೇಟಿ ನೀಡಿದ ಗೃಹಸಚಿವ ಡಾ.ಪರಮೇಶ್ವರ್ ಅವರು ಅಲ್ಲಿನ ಪೊಲೀಸರ ಕಾರ್ಯವೈಖರಿ ಬಗ್ಗೆ ಪರಿಶೀಲನೆ ನಡೆಸಿದರು.

ಆಗ ಬ್ಯಾಂಕ್ ಖಾತೆ ನಿಷ್ಕ್ರಿಯಗೊಳಿಸಲಾಗುವುದು. ವಂಚನೆಗೊಳಗಾದ ಕೂಡಲೇ ದೂರು ಕೊಟ್ಟರೆ ಅದು ಅವರಿಗೆ ಗೋಲ್ಡನ್ ಟೈಮ್ ಆಗಿರುತ್ತದೆ. ಇಲ್ಲವೆಂದರೆ ಎಲ್ಲಾ ಹಣ ವಂಚಕರ ಕೈ ಸೇರುತ್ತದೆ ಎಂದು ಎಚ್ಚರಿಸಿದರು. ಪೊಲೀಸ್ ಇಲಾಖೆ ಸೈಬರ್ ಅಪರಾಧ ಕೃತ್ಯ ತಡೆಗಟ್ಟಲು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದೆ. ಇತ್ತೀಚೆಗೆ ಬೆಂಗಳೂರಿನಲ್ಲಿ ಕುಳಿತು ಅಮೆರಿಕಾದವರನ್ನು ಡಿಜಿಟಲ್ ಅರೆಸ್ಟ್ ಮಾಡುತ್ತಿದ್ದ ಪ್ರಕರಣವನ್ನು ಬಯಲಿಗೆ ಎಳೆದಿದ್ದೇವೆ. ಇಂತಹ ಸಂದರ್ಭದಲ್ಲಿ ಪೊಲೀಸರ ಜೊತೆಗೆ ಸಾರ್ವಜನಿಕರು ಸಹಕರಿಸಬೇಕು ಎಂದು ಕಿವಿಮಾತು ಹೇಳಿದರು.

ಪಿಎಸ್‌ಐ ಗಳ ಅಕ್ರಮ ನೇಮಕಾತಿ ಹಿನ್ನೆಲೆಯಲ್ಲಿ ನೇಮಕಾತಿ ಸ್ಥಗಿತ ಮಾಡಲಾಗಿತ್ತು. ಆದರೆ ಈಗ ಅದನ್ನು ನಿವಾರಿಸಿ 900 ಪಿಎಸ್‌ಐ ಗಳನ್ನು ನೇಮಕಾತಿ ಮಾಡಿ ತರಬೇತಿಗೆ ಕಳುಹಿಸಲಾಗಿದೆ. ಎರಡು ತಿಂಗಳಲ್ಲಿ ಅವರು ತರಬೇತಿ ಪಡೆದು ಕರ್ತವ್ಯಕ್ಕೆ ಹಾಜರಾಗಲಿದ್ದಾರೆ. ಅಲ್ಲಿಯವರೆಗೆ ಎಲ್ಲವನ್ನು ನಿಭಾಯಿಸಿಕೊಂಡು ಹೋಗಬೇಕು ಎಂದು ತಿಳಿಸಿದರು.

ಪೊಲೀಸ್ ಇಲಾಖೆಯ ವರ್ಗಾವಣೆಯಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂಬ ಬಿಜೆಪಿ ಆರೋಪಕ್ಕೆ ಆಕ್ರೋಶ ವ್ಯಕ್ತಪಡಿಸಿದ ಡಾ.ಪರಮೇಶ್ವರ್, ಒಂದು ವರ್ಷಕ್ಕೆ ವರ್ಗಾವಣೆ ಮಾಡುವ ನಿಯಮವಿತ್ತು. ಆದರೆ ಈಗ ಅದನ್ನು ಸಡಿಲಿಸಿ ಎರಡು ವರ್ಷಕ್ಕೆ ಹೆಚ್ಚಳ ಮಾಡಲಾಗಿದೆ. ಈ ಮೂಲಕ ಸ್ವಲ್ಪ ಮಟ್ಟಿಗೆ ಸುಧಾರಣೆ ತರಲಾಗಿದೆ ಎಂದು ಸ್ಪಷ್ಟಪಡಿಸಿದರು.

ನಡೆದು ನನಗೆ ಸಿಎಂ ಸ್ಥಾನ ಕೊಡಿ

ನಾಯಕತ್ವ ವಿಚಾರದಲ್ಲಿ ಶಾಸಕರಲ್ಲೂ ಅಸಮಾಧಾನವಿದೆ, ಇದು ಸ್ಫೋಟಗೊಳ್ಳುವ ಮುನ್ನ ಒಳ್ಳೆಯ ತೀರ್ಮಾನ ಕೈಗೊಳ್ಳಿ, ನೀವು ಹಿರಿಯರು, ರಾಜ್ಯದ ಎಲ್ಲಾ ಬೆಳವಣಿಗೆಗಳು ನಿಮಗೆ ತಿಳಿದಿದೆ. ಪಕ್ಷಕ್ಕಾಗಿ ಕಳೆದ 40 ವರ್ಷಗಳಿಂದ ದುಡಿದಿದ್ದೇನೆ, ಪಕ್ಷವೂ ನನಗೆ ಸ್ಥಾನಮಾನ ನೀಡಿದೆ.

ಈಗ ನನಗೆ ಅವಕಾಶ ಒದಗಿ ಬಂದಿದೆ, ಇದನ್ನು ತಪ್ಪಿಸಲು ಸಿದ್ದರಾಮಯ್ಯ ಮತ್ತು ಅವರ ಬೆಂಬಲಿಗರು ತೆರೆಮರೆಯಲ್ಲಿ ಪ್ರಯತ್ನ ಮಾಡುತ್ತಿದ್ದಾರೆ. ನಿಮ್ಮ ಮೇಲೆ ಭಾರ ಹಾಕಿದ್ದೇನೆ, ನನಗೆ ದಕ್ಕಬೇಕಾದ ಅಧಿಕಾರ ಕೊಡಿಸಿ, ನಿಮಗೆ ತಿಳಿದಿರುವಂತೆ ಸಿದ್ದರಾಮಯ್ಯ ಜನತಾ ಪರಿವಾರ ದಿಂದ ಕಾಂಗ್ರೆಸ್‌ಗೆ ಬಂದು 20 ವರ್ಷ ಕಳೆಯುತ್ತಾ ಬಂದಿದೆ. ಅವರು ಬಂದ ದಿನದಿಂದ ಪಕ್ಷದ ಉನ್ನತ ಸ್ಥಾನಗಳಲ್ಲೇ ಇದ್ದಾರೆ, ಅವರಿಗಾಗಿ ನೀವು ಮತ್ತು ಡಾ.ಜಿ.ಪರಮೇಶ್ವರ್ ಅಧಿಕಾರದಿಂದ ವಂಚಿತರಾದಿರಿ, ನಿಮ್ಮ ಸಾಲಿಗೆ ನನ್ನನ್ನೂ ಸೇರಿಸುತ್ತೀರಾ.

ನಾನು ದುಡಿದಿದ್ದೇನೆ, ನನಗೆ ಎಷ್ಟು ಕೂಲಿ ಕೊಡಬೇಕೆಂದು ನಿಮಗೆ ಗೊತ್ತಿದೆ, ಅದನ್ನು ಕೊಡಿ ಎಂದು ಕೋರುತ್ತೇನೆ. ನನ್ನ ಭಾವನೆಯನ್ನೂ ರಾಹುಲ್‌ಜೀ ಅವರಿಗೂ ಮನವರಿಕೆ ಮಾಡಿಕೊಡಿ.

ಸೋನಿಯಾ ಗಾಂಧಿ ಹಾಗೂ ಪ್ರಿಯಾಂಕಾ ಗಾಂಧಿ ನನ್ನ ಪಕ್ಷ ನಿಷ್ಠೆ ಅರಿತು ನಿಮ್ಮ ಬಳಿ ಮಾತನಾಡಿದ್ದಾರೆ. ವಿಳಂಬ ಮಾಡದೆ ಅವಕಾಶ ಕೊಡಿ ಎಂದು ಮನವಿ ಮಾಡಿದ್ದಾರೆ ಎನ್ನಲಾಗಿದೆ.

ಹುಟ್ಟುಹಬ್ಬ ಆಚರಣೆ



ಮೈಸೂರಿನ ರಿಂಗ್ ರಸ್ತೆಯಲ್ಲಿರುವ ಹೋಟೆಲ್ ಎಂ ಪ್ರೋ ಪ್ಯಾಲೇಸ್‌ನಲ್ಲಿ ಮಂಗಳವಾರ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ ಹುಟ್ಟುಹಬ್ಬವನ್ನು ಅಭಿಮಾನಿಗಳು ಅದ್ದೂರಿಯಾಗಿ ಆಚರಿಸಿದರು.

ರಾಜ್ಯದ ಬಿಕ್ಕಟ್ಟು ಪರಿಹಾರ

ಕಳೆದ ಎರಡು ದಿನಗಳಿಂದ ಕರ್ನಾಟಕ ಕಾಂಗ್ರೆಸ್ ರಾಜಕೀಯಕ್ಕೆ ಸಂಬಂಧಿಸಿದಂತೆ ರಾಹುಲ್ ಗಾಂಧಿ ಸತತವಾಗಿ ಪಕ್ಷದ ಮುಖಂಡರ ಜೊತೆ ಚರ್ಚೆ ಮಾಡಿದ್ದಾರೆ.

ಎಐಸಿಸಿ ಮಾಜಿ ಪ್ರಧಾನ ಕಾರ್ಯದರ್ಶಿ ಹಾಗೂ ಪಕ್ಷದ ಹಿರಿಯ ನಾಯಕ ಬಿ.ಕೆ.ಹರಿಪ್ರಸಾದ್ ಅವರನ್ನು ನಿನ್ನೆ ದೆಹಲಿಗೆ ಕರೆಸಿಕೊಂಡು ಮಾತನಾಡಿದ್ದ ರಾಹುಲ್, ಇಂದು ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ಕರೆಸಿಕೊಂಡು ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ಚರ್ಚೆ ಮಾಡಿದ್ದಾರೆ.

ಪಕ್ಷ ಅಧಿಕಾರಕ್ಕೆ ಬಂದಾಗ ದೆಹಲಿಯಲ್ಲಿ ನಡೆದ ಮಾತುಕತೆಯಂತೆ ತಮಗೆ ಮುಖ್ಯಮಂತ್ರಿ ಸ್ಥಾನ ಹಸ್ತಾಂತರಿಸಬೇಕೆಂದು ಶಿವಕುಮಾರ್ ತೆರೆಮರೆಯಲ್ಲಿ ಬಿರುಸಿನ ಚಟುವಟಿಕೆ ನಡೆಸಿದ್ದಾರೆ. ಶಿವಕುಮಾರ್ ಬೆಂಬಲಕ್ಕೆ ಪಕ್ಷದ ಅಧಿನಾಯಕಿ ಸೋನಿಯಾ ಗಾಂಧಿ ಹಾಗೂ ಪ್ರಿಯಾಂಕಾ ಗಾಂಧಿ, ಅಲ್ಲದೆ, ರಾಜ್ಯ ಉಸ್ತುವಾರಿ ಸುರ್ಜೇವಾಲ ಇದ್ದಾರೆ. ಇದರ ಜೊತೆಗೆ ಕಾಂಗ್ರೆಸ್ ಶಾಸಕರ ದೊಡ್ಡ ಗುಂಪೊಂದು ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸ್ಥಾನ ನೀಡುವಂತೆ ವರಿಷ್ಠರ ಮೇಲೆ ಒತ್ತಡ ಹೇರುತ್ತಿರುವುದು ರಾಷ್ಟ್ರೀಯ ಸುದ್ದಿಯಾಗಿದೆ. ಈ ಗೊಂದಲ ನಿವಾರಣೆಗಾಗಿ ವರಿಷ್ಠರು ಶನಿವಾರ ಮಹತ್ವದ ಸಭೆ ನಡೆಸುತ್ತಿದ್ದಾರೆ.

ವರಿಷ್ಠರ ಮಧ್ಯ ಪ್ರವೇಶಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮನವಿ

ಐದಾರು ಜನರ ನಡುವೆ ನಡೆದ ಮಾತುಕತೆ ಬಹಿರಂಗಪಡಿಸಲಾಗದು: ಡಿ.ಕೆ.ಶಿವಕುಮಾರ್

ಬೆಂಗಳೂರು, ನ. 25(ಕೆಎಂಶಿ)– ಅಧಿಕಾರ ಹಸ್ತಾಂತರ ಗೊಂದಲ ನಿವಾರಿಸಲು ಕಾಂಗ್ರೆಸ್ ವರಿಷ್ಠರು ಮಧ್ಯಪ್ರವೇಶಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಮನವಿ ಮಾಡಿದ್ದಾರೆ.

ಮತ್ತೊಂದೆಡೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸುದ್ದಿಗಾರರೊಂದಿಗೆ ಮಾತನಾಡಿ, ಎರಡೂವರೆ ವರ್ಷ ಆಡಳಿತದ ನಂತರ ಏನಾಗಬೇಕು ಎಂಬುದರ ಬಗ್ಗೆ ದೆಹಲಿಯಲ್ಲಿ ಐದಾರು ಮಂದಿ ನಡುವೆ ನಡೆದ ಮಾತುಕತೆ ಬಹಿರಂಗಪಡಿಸಲು ಸಾಧ್ಯವಿಲ್ಲ ಎಂದಿದ್ದಾರೆ. ಸುದ್ದಿಗಾರರೊಂದಿಗೆ ಮುಂದುವರೆದು ಮಾತನಾಡಿದ ಮುಖ್ಯಮಂತ್ರಿ ಅವರು, ಪಕ್ಷದ ಕೆಲವು ಶಾಸಕರು ದೆಹಲಿಗೆ ತೆರಳಿ ವರಿಷ್ಠರ ಮುಂದೆ ತಮ್ಮ ಅಭಿಪ್ರಾಯಗಳನ್ನು ಹೇಳಿಕೊಳ್ಳುತ್ತಿದ್ದಾರೆ.

ಶಾಸಕರಿಗೆ ಅವರ ಅಭಿಪ್ರಾಯ ಮಂಡಿಸಲು ಸ್ವಾತಂತ್ರ್ಯ ಇದೆ, ವರಿಷ್ಠರು ಏನು ಹೇಳುತ್ತಾರೋ ನೋಡೋಣ ಎಂದರು.

ಅಂತಿಮವಾಗಿ ಈ ಎಲ್ಲಾ ಗೊಂದಲಗಳಿಗೆ ಮುಕ್ತಾಯ ಹಾಡಲು ವರಿಷ್ಠರು ತ್ವರಿತವಾಗಿ ತೀರ್ಮಾನ ಕೈಗೊಳ್ಳುವಂತೆ ಮನವಿ ಮಾಡಿದರು. ಇಂತಹ ಸನ್ನಿವೇಶದಲ್ಲಿ ಪಕ್ಷದ ಅಧಿನಾಯಕ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡುವ ಇರಾದೆ ಸದ್ಯಕ್ಕಿಲ್ಲ. ಸಂಪುಟ ವಿಸ್ತರಣೆ ಇಲ್ಲವೇ ಪುನರ್ ರಚನೆಗೆ ವರಿಷ್ಠರು ಏನು ತೀರ್ಮಾನ ಕೈಗೊಳ್ಳುತ್ತಾರೋ ಅದರಂತೆ ನಡೆದುಕೊಳ್ಳುತ್ತೇನೆ. ಎಲ್ಲವನ್ನೂ ದೆಹಲಿ ನಾಯಕರೇ ನಿರ್ಧರಿಸಬೇಕು ಎಂದರು. ಕನಕಪುರದ ಟಿಎಪಿಸಿಎಂಎಸ್ ಚುನಾವಣೆಯಲ್ಲಿ ಮತದಾನ ಮಾಡುವುದಕ್ಕೂ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಶಿವಕುಮಾರ್, ಕೆಲವು ಶಾಸಕರು ದೆಹಲಿಗೆ ತೆರಳಿ ವರಿಷ್ಠರನ್ನು ಭೇಟಿ ಮಾಡುತ್ತಿರುವ ವಿಚಾರ ನನಗೆ ತಿಳಿದಿಲ್ಲ.

ನನ್ನನ್ನು ಮುಖ್ಯಮಂತ್ರಿ ಮಾಡಬೇಕೆಂದು ಯಾರನ್ನೂ ಕೇಳುತ್ತಿಲ್ಲ, ಯಾವ ಶಾಸಕರನ್ನೂ ದೆಹಲಿಗೆ ಕಳುಹಿಸಿಲ್ಲ, ಅಷ್ಟೇ ಅಲ್ಲ, ಯಾರ ಜೊತೆಯೂ ಚರ್ಚೆಯೂ ಮಾಡಿಲ್ಲ.

ಪಕ್ಷದ ಶಾಸಕರಿಗೆ ಸ್ವಾತಂತ್ರ್ಯವಿದೆ, ಅವರು ತಮ್ಮ ಅಭಿಪ್ರಾಯ ಮತ್ತು ನಿಲುವುಗಳನ್ನು ವರಿಷ್ಠರ ಮುಂದೆ ಹೇಳಿಕೊಳ್ಳಬಹುದು. ನಾಯಕನ ಆಯ್ಕೆ ಮತ್ತು ಅಧಿಕಾರ ಹಸ್ತಾಂತರ ವಿಷಯದ ಬಗ್ಗೆ ಪರೋಕ್ಷವಾಗಿ ಮಾತನಾಡಿದ ಶಿವಕುಮಾರ್, ಅದು ನಾಲ್ಕು ಗೋಡೆ ಮಧ್ಯೆ ನಮ್ಮ ನಾಯಕರು ಮಾತನಾಡಿದ ವಿಚಾರ ಅದನ್ನು ಬಹಿರಂಗಪಡಿಸಲು ಸಾಧ್ಯವಿಲ್ಲ ಎಂದರು.

ನನ್ನ ಆತ್ಮಸಾಕ್ಷಿಯಂತೆ ನಡೆದುಕೊಳ್ಳುತ್ತೇನೆ, ಪಕ್ಷಕ್ಕೆ ಮುಜುಗರ ತರುವ ಕೆಲಸ ಮಾಡುವುದಿಲ್ಲ. ಯಾವುದೇ ಕಾರಣಕ್ಕೂ ಪಕ್ಷವನ್ನು ದುರ್ಬಲಗೊಳಿಸಲು ಅವಕಾಶ ನೀಡುವುದಿಲ್ಲ ಎನ್ನುವ ಮೂಲಕ ಅಧಿಕಾರ ಹಸ್ತಾಂತರ ಮಾತುಕತೆ ನಡೆದಿದೆ ಎಂಬುದನ್ನು ಪರೋಕ್ಷವಾಗಿ ತಿಳಿಸಿದರು. ಸಿದ್ದರಾಮಯ್ಯ ನಮ್ಮ ನಾಯಕರು, ಏಳೂವರೆ ವರ್ಷ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದಾರೆ, ಎರಡು ಬಾರಿ ಪ್ರತಿಪಕ್ಷ ನಾಯಕರೂ ಆಗಿದ್ದಾರೆ. ಮುಂದಿನ ಮುಂಗಡಪತ್ರವನ್ನೂ ಮಂಡಿಸುವುದಾಗಿ ಹೇಳಿದ್ದಾರೆ, ಬಹಳ ಸಂತೋಷ. ಅವರು ದುಡಿದಿದ್ದಾರೆ, ಪಕ್ಷ ಕಟ್ಟಿದ್ದಾರೆ ಮುಂದಿನ 2028ರ ಚುನಾವಣೆ ನಮ್ಮ ಗುರಿ. ಅದನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುವುದಾಗಿ ತಿಳಿಸಿದ್ದಲ್ಲದೆ, ಪಕ್ಷ ಸಿದ್ದರಾಮಯ್ಯ ಅವರಿಗೆ ಏನೆಲ್ಲಾ ಅಧಿಕಾರ ನೀಡಿದೆ ಎಂಬುದನ್ನು ಜನರ ಮುಂದೆ ಇದೇ ವೇಳೆ ಹೇಳಿದರು.

ರಾಮಮಂದಿರ ನಿರ್ಮಾಣ ಪೂರ್ಣ

ಕೋವಿದಾರ ಮರವು ಅಯೋಧ್ಯೆಯ ಪ್ರಾಚೀನ ಸಂಪ್ರದಾಯಗಳನ್ನು ಪ್ರತಿನಿಧಿಸುತ್ತದೆ. ಧ್ವಜಾರೋಹಣ ಸಮಾರಂಭಕ್ಕೂ ಮುನ್ನ, ಪ್ರಧಾನಿ ಮೋದಿಯವರು ಮಹರ್ಷಿ ವಾಲ್ಮೀಕಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ದೇವಾಲಯ ಸಂಕೀರ್ಣದವರೆಗೆ ರೋಡ್ ಶೋ ನಡೆಸಿದರು.

ಭಾರೀ ಭದ್ರತಾ ನಿಯೋಜನೆಯ ನಡುವೆ ಮೋದಿ ಅವರ ಬೆಂಗಾವಲು ಪಡೆ ಹಾದು ಹೋಗುವಾಗ ಮಹಿಳೆಯರು ಮತ್ತು ಯುವಕರು ಸೇರಿದಂತೆ ಹೆಚ್ಚಿನ ಸಂಖ್ಯೆಯ ನಿವಾಸಿಗಳು ಮತ್ತು ಭಕ್ತರು ಮಾರ್ಗದುದ್ದಕ್ಕೂ ಸಾಲುಗಟ್ಟಿ ನಿಂತು ಹೂವಿನ ಮಳೆಯನ್ನೇ ಸುರಿಸಿದರು. ಹಲವರು ತ್ರಿವರ್ಣ ಧ್ವಜವನ್ನು ಬೀಸಿದರೆ, ಇತರರು ಕಮಲದ ಲಾಂಛನವಿರುವ ಬಿಜೆಪಿ ಧ್ವಜಗಳನ್ನು ಹಿಡಿದು ನಿಂತಿರುವುದು ಕಂಡು ಬಂದಿತು

ಮೋದಿಯವರು ಅಯೋಧ್ಯೆಗೆ ಆಗಮಿಸಿದ ವೇಳೆ ರಾಜ್ಯಪಾಲೆ ಆನಂದಿಬೆನ್ ಪಟೇಲ್ ಮತ್ತು ಮುಖ್ಯಮಂತ್ರಿ ಆದಿತ್ಯನಾಥ್ ಔಪಚಾರಿಕವಾಗಿ ಸ್ವಾಗತಿಸಿದರು.

ಮುಖ್ಯ ಕಾರ್ಯಕ್ರಮಕ್ಕೆ ಹೋಗುವ ಮೊದಲು, ಪ್ರಧಾನಿ ಮೋದಿಯವರು ರಾಮ ಜನ್ಮಭೂಮಿ ಮಂದಿರ ಸಂಕೀರ್ಣದೊಳಗಿನ ಸಪ್ತ ಮಂದಿರದಲ್ಲಿ ಪ್ರಾರ್ಥನೆ ಸಲ್ಲಿಸಿದರು.

ಗಾಯ ಈಗ ಮಾಯುತ್ತಿದೆ: ಪ್ರಧಾನಿ ಮೋದಿ

ಸತ್ಯ ಮತ್ತು ಸದಾಚಾರದ ವಿಜಯವನ್ನು ಸಂಕೇತಿಸುತ್ತದೆ ಎಂದು ತಿಳಿಸಿದರು. ಧ್ವಜದಲ್ಲಿರುವ ಕೇಸರಿ ಬಣ್ಣ, ಸೂರ್ಯವಂಶದ ಚಿಹ್ನೆ, 'ಓಂ' ಪದ ಮತ್ತು ಕೋವಿದಾರ ಮರವು ರಾಮ ರಾಜ್ಯದ ವೈಭವವನ್ನು ಅನಾವರಣಗೊಳಿಸುತ್ತದೆ. ಈ ಧ್ವಜವು ಒಂದು ಸಂಕಲ್ಪ, ಯಶಸ್ಸು, ಸೃಷ್ಟಿಗಾಗಿ ನಡೆದ ಹೋರಾಟದ ಕಥೆ, 100 ವರ್ಷಗಳ ಹೋರಾಟದ ಭೌತಿಕ ರೂಪ. ಮುಂಬರುವ ಸಾವಿರಾರು ಶತಮಾನಗಳವರೆಗೆ, ಈ ಧ್ವಜವು ಭಗವಾನ್ ರಾಮನ ಮೌಲ್ಯಗಳನ್ನು ಪೋಷಿಸುತ್ತದೆ ಎಂದರು.

ಅಯೋಧ್ಯೆ ಮತ್ತೊಂದು ಐತಿಹಾಸಿಕ ಮೈಲಿಗಲ್ಲಿಗೆ ಸಾಕ್ಷಿಯಾಗುತ್ತಿದೆ. ಇಡೀ ದೇಶ ಮತ್ತು ಜಗತ್ತು ರಾಮನ ಜಪದಲ್ಲಿ ಮುಳುಗಿದೆ. ಅಂತಿಮವಾಗಿ ಸತ್ಯವು ಸುಳ್ಳಿನ ಮೇಲೆ ವಿಜಯ ಸಾಧಿಸುತ್ತದೆ ಎಂಬುದಕ್ಕೆ ಈ ಧ್ವಜ ಸಾಕ್ಷಿಯಾಗಿದೆ. ದೇವಾಲಯ ನಿರ್ಮಾಣಕ್ಕೆ ಕೊಡುಗೆ ನೀಡಿದ ಎಲ್ಲರಿಗೂ ಅಭಿನಂದಿಸುತ್ತೇನೆಂದು ಹೇಳಿದರು.

ನಮ್ಮ ರಾಮನು ತಾರತಮ್ಯ ಮಾಡುವುದಿಲ್ಲ ಮತ್ತು ನಾವು ಕೂಡ ಅದೇ ಮನೋಭಾವದಿಂದ ಮುಂದುವರಿಯುತ್ತಿದ್ದೇವೆ. 2047 ರ ಹೊತ್ತಿಗೆ ನಾವು ಭಾರತದ ಸ್ವಾತಂತ್ರ್ಯದ 100 ವರ್ಷಗಳನ್ನು ಪೂರ್ಣಗೊಳಿಸುವಾಗ, ನಾವು ಅಭಿವೃದ್ಧಿ ಹೊಂದಿದ ಭಾರತವಾಗುವುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ತಿಳಿಸಿದರು. ರಾಮ ಮಂದಿರಕ್ಕೆ ಬಂದಾಗ ಪ್ರತಿಯೊಬ್ಬ ನಾಗರಿಕನೂ ಸಪ್ತ ಮಂಟಪಕ್ಕೆ ಭೇಟಿ ನೀಡಬೇಕೆಂದು ನಾನು ಒತ್ತಾಯಿಸುತ್ತೇನೆ. ಈ ಮಂಟಪಗಳು ನಂಬಿಕೆ, ಸ್ನೇಹ, ಕರ್ತವ್ಯ ಮತ್ತು ಸಾಮಾಜಿಕ ಸಾಮರಸ್ಯದ ಮೌಲ್ಯಗಳನ್ನು ಬಲಪಡಿಸುತ್ತವೆ. ನಮ್ಮ ರಾಮನು ಭಾವನೆಗಳ ಮೂಲಕ ಒಂದಾಗುತ್ತಾನೆ, ವಿಭಜನೆಯಲ್ಲ, ಅವನಿಗೆ ಮುಖ್ಯವಾದುದು ಭಕ್ತಿ, ವಂಶಾವಳಿಯಲ್ಲ.

ಕೆಲವು ದಿನಗಳ ಹಿಂದೆ, ಮುಂದಿನ 10 ವರ್ಷಗಳಲ್ಲಿ ಭಾರತವನ್ನು ಗುಲಾಮಗಿರಿಯ ಮನಸ್ಥಿತಿಯಿಂದ ಮುಕ್ತಗೊಳಿಸುವುದು ನಮ್ಮ ಗುರಿ ಎಂದು ನಾನು ಹೇಳಿದ್ದೆ. ನಾವು ಸ್ವಾತಂತ್ರ್ಯವನ್ನು ಗಳಿಸಿದ್ದೇವೆ. ಆದರೆ, ನಾವು ಕೀಳರಿಮೆಯಿಂದ ನಮ್ಮನ್ನು ಮುಕ್ತಗೊಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ವಿದೇಶಿ ಶ್ರೇಷ್ಠ ಮತ್ತು ನಮ್ಮದು ಕೀಳು ಎಂದು ನಾವು ನಂಬಲು ಪ್ರಾರಂಭಿಸಿದೆವು. ನಮ್ಮ ಸಂವಿಧಾನವು ವಿದೇಶಿ ಸಂವಿಧಾನಗಳಿಂದ ಪ್ರೇರಿತವಾಗಿದೆ ಎಂದು ಹೇಳಲಾಗುತ್ತಿತ್ತು, ಆದರೆ, ಸತ್ಯವೆಂದರೆ ಭಾರತ ಪ್ರಜಾಪ್ರಭುತ್ವದ ತಾಯಿ. ಪ್ರಜಾಪ್ರಭುತ್ವ ನಮ್ಮ ಡಿಎನ್‌ಎಯಲ್ಲಿದೆ ಎಂದು ತಿಳಿಸಿದರು.

ಹಣ ಗುಳುಂ ಪ್ರಕರಣ: ಸಿಬಿಐ ತನಿಖೆ

ನಡೆಯುತ್ತಿದ್ದ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ಈ ವಿಷಯ ಪ್ರಕಟಿಸಿದರು. ಸರಗೂರು ಅಂಚೆ ಕಚೇರಿಯಲ್ಲಿ ನಡೆದಿರುವ ಹಣ ಗುಳುಂ ಪ್ರಕರಣದ ಸಂಬಂಧ ಈಗಾಗಲೇ ಸಿಬಿಐಗೆ ಪತ್ರ ಬರೆಯಲಾಗಿದೆ. ಸಿಬಿಐ ಅಧಿಕಾರಿಗಳು ತನಿಖೆ ನಡೆಸಲಿದ್ದಾರೆ ಎಂದ ಅವರು ಪ್ರತಿಭಟನಾ ಸ್ಥಳಕ್ಕೆ ನಮ್ಮ ಜಿಲ್ಲಾ ಅಂಚೆ ಕಚೇರಿಯ ಅಧೀಕ್ಷಕರಾದ ಹರೀಶ್ ಅವರು ಬರಬೇಕಾಗಿತ್ತು. ಆದರೆ ಅವರು ಕೆಲಸದ ಮೇಲೆ ಕೋಲಾರಕ್ಕೆ ಹೋಗಿರುವುದರಿಂದ ನಾವು ಬರಬೇಕಾಯಿತು. ನಿಮ್ಮ ನೋವು ನಮಗೆ ಗೊತ್ತಿದೆ ಎಂದರು. ಹಣ ದುರುಪಯೋಗ ಆಗಿರುವ ಸಂಬಂಧ ಸರಗೂರಿನ ಸಹಾಯಕ ಪೋಸ್ಟ್ ಮಾಸ್ಟರ್ ಬಿ.ಎಸ್.ದೀಪಕ್, ಪೋಸ್ಟ್‌ಮ್ಯಾನ್ ಕಾರಯ್ಯ, ಶಶಿಕಲಾ, ತೇಜಾ, ಕೆ.ಎಸ್.ಪುಷ್ಪಲತಾ, ಎಸ್.ವೀಣಾ, ಚೈತ್ರಾ ಅವರುಗಳನ್ನು ಈಗಾಗಲೇ ಅಮಾನತು ಮಾಡಲಾಗಿದೆ. ಮೇಲ್ನೋಟಕ್ಕೆ 75 ಮಂದಿ ಖಾತೆದಾರರಿಗೆ ಅನ್ಯಾಯವಾಗಿದೆ. ಅವರಲ್ಲಿ 4 ಮಂದಿಗೆ ಹಣ ವಾಪಸ್ ನೀಡಲಾಗಿದೆ ಎಂದರು.

ಬುಧವಾರ (ನ.26) ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ಅಂಚೆ ಇಲಾಖೆಯ ಸಭೆ ನಡೆಯಲಿದೆ. ಅಲ್ಲಿ ಸರಗೂರಿನ ಘಟನೆಯ ಬಗ್ಗೆ ಚರ್ಚೆ ಆಗಲಿದೆ. ಇಲ್ಲಿಯ ವರೆಗೂ ನಮಗೆ ನೀವು ಸಹಕಾರ ನೀಡಿದ್ದೀರಿ. ನಾಳೆವರೆಗೂ ಸಹಕರಿಸಿ, ಗುರುವಾರ ಸರಗೂರು ಅಂಚೆ ಕಚೇರಿಗೆ ತಮ್ಮ ಇಲಾಖೆಯ ಅಧೀಕ್ಷಕರು ಸೇರಿದಂತೆ ಅಧಿಕಾರಿಗಳನ್ನು ಕರೆದುಕೊಂಡು ಬಂದು ನಿಮಗಾಗಿರುವ ಅನ್ಯಾಯವನ್ನು ಸರಿಪಡಿಸುತ್ತೇವೆ ಎಂದು ಭರವಸೆ ನೀಡಿದರು. ಇದಕ್ಕೆ ಒಪ್ಪಿದ ಅಂಚೆ ಖಾತೆದಾರರು ಪ್ರತಿಭಟನೆಯನ್ನು ಕೈ ಬಿಟ್ಟು ಹಿಂತಿರುಗಿದರು.

ಮೈಸೂರು ಮಿತ್ರ

ಬುಧವಾರ 26 ನವೆಂಬರ್ 2025

ವಿವೇಕಾನಂದನಗರದ ಸಾರ್ವಜನಿಕ ಗ್ರಂಥಾಲಯದಲ್ಲಿ ಗ್ರಂಥಾಲಯ ಸಪ್ತಾಹ

ವೃಕ್ಷಮಾತೆ ಸಾಲುಮರದ ತಿಮ್ಮಕ್ಕರಿಗೆ ಶ್ರದ್ಧಾಂಜಲಿ



ಮೈಸೂರಿನ ವಿವೇಕಾನಂದನಗರ ಸಾರ್ವಜನಿಕ ಗ್ರಂಥಾಲಯದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸುತ್ತಿರುವುದು.

ಮೈಸೂರು,ನ.25–ಮೈಸೂರಿನ ವಿವೇಕಾನಂದನಗರ ಸಾರ್ವಜನಿಕ ಗ್ರಂಥಾಲಯದಲ್ಲಿ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ ದಿನವನ್ನು ಇತ್ತೀಚೆಗೆ ಆಚರಿಸಲಾಯಿತು.

ಗ್ರಂಥಾಲಯ ಪಿತಾಮಹ ಡಾ.ಎಸ್.ಆರ್. ರಂಗನಾಥನ್ ಅವರ ಜನ್ಮದಿನದ ಅಂಗವಾಗಿ ನಡೆದ ಸಪ್ತಾಹ ಕಾರ್ಯಕ್ರಮವನ್ನು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿ, ದಿವಂಗತರಾದ ವೃಕ್ಷಮಾತೆ ಸಾಲುಮರದ ತಿಮ್ಮಕ್ಕರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಸಾಹಿತಿ ಜಿ.ಹೆಚ್. ಸಂಕಪ್ಪ ಮಾತನಾಡಿ, ಗ್ರಂಥಾಲಯ ಪವಿತ್ರ ದೇವಸ್ಥಾನವಿದ್ದಂತೆ. ಸರ್ವಧರ್ಮೀಯರೂ ಆರಾಧಿಸುವ ಸರಸ್ವತಿ ದೇಗುಲ. ಇಲ್ಲಿಗೆ ಯಾವ ವಯೋಮಾನದವರು ಬಂದರೂ ಅವರು ವಿದ್ಯಾರ್ಥಿಗಳಾಗಿರುತ್ತಾರೆ. ಪುಸ್ತಕಗಳು ಮೌನವಾಗಿ ಗುರುಗಳಂತೆ ಜ್ಞಾನವನ್ನು ಧಾರೆ ಎರೆಯುತ್ತವೆ. ಪುಸ್ತಕ ಪ್ರೇಮ ಇಲ್ಲದವರೇ ನಿಜವಾದ ಬಡವರು. ಹಾಗಾಗಿ ಪ್ರತಿಯೊಂದು ಮನೆಯಲ್ಲೂ ಸಣ್ಣ ಗ್ರಂಥಾಲಯಗಳಾಗಬೇಕು. ಮಕ್ಕಳಲ್ಲಿ ಓದುವ ಹಂಬಲ ಬೆಳೆಸಬೇಕು ಎಂದು ಕಿವಿಮಾತು ಹೇಳಿದರು.

ಪರಿಸರ ಪ್ರೇಮಿ ಶಂಕರ್ ಲಕ್ಕಿಮಾರ್ ಮಾತನಾಡಿ, ಭಾಷೆ ಮತ್ತು ಸಾಹಿತ್ಯ ಅಭಿವೃದ್ಧಿಯಲ್ಲಿ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಸೇವೆ ಅತ್ಯಂತ ಮಹತ್ವದ್ದಾಗಿದೆ. ಮಕ್ಕಳಾದಿಯಾಗಿ ಎಲ್ಲಾ ವಯೋಮಾನದವರೂ ನಿತ್ಯ ಗ್ರಂಥಾಲಯದೊಂದಿಗೆ ಒಡನಾಟ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಚಿಂತಕ ಪಿ.ಸುಬ್ಬರಾಯ ಅವರು ಮಾತನಾಡಿ, ಗ್ರಂಥಾಲಯ ಸೇವೆಯನ್ನು ಸರ್ವರಿಗೂ ತಲುಪಿಸುವ ನಿಟ್ಟಿನಲ್ಲಿ ಮೂಲ ಸೌಕರ್ಯ ಸೇರಿದಂತೆ ಅಗತ್ಯ ವ್ಯವಸ್ಥೆಗೆ ಕ್ರಮ ವಹಿಸಬೇಕಿದೆ ಎಂದು ಅಭಿಪ್ರಾಯಿಸಿದರು. ಸಾಹಿತಿಗಳಾದ ಎನ್.ಕೆ.ಚಂದ್ರಪ್ಪ ಹಾಗೂ ಉದಯಶಂಕರ್ ಮಾತನಾಡಿದರು.

ಇದೇ ವೇಳೆ ಇಲಾಖೆ ವತಿಯಿಂದ ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಗ್ರಂಥಾಲಯ ಮೇಲ್ವಿಚಾರಕಿ ಲಕ್ಷ್ಮೀದೇವಿ, ರೇಣುಕಾಪ್ರಸಾದ್, ಗೋವಿಂದ್, ಲಕ್ಷ್ಮೀ, ಶೋಭಾ, ಕುಮಾರಿ ಚಂದನ ಮತ್ತಿತರರು ಪಾಲ್ಗೊಂಡಿದ್ದರು.

ಕನ್ನಡ ರಾಜ್ಯೋತ್ಸವ...



ಮೈಸೂರಿನ ವಿಜಯನಗರ 2ನೇ ಹಂತ ನಾಗರಿಕರ ಹಿತರಕ್ಷಣಾ ಸಮಿತಿ ವತಿಯಿಂದ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಈ ವೇಳೆ ಶಾಸಕ ಕೆ.ಹರೀಶ್‌ಗೌಡ, ವಿಧಾನ ಪರಿಷತ್ ಸದಸ್ಯ ಕೆ.ವಿವೇಕಾನಂದ, ಡಾ.ಸಿ.ನಾಗಣ್ಣ, ಎಂ.ಯು.ಸುಬ್ಬಯ್ಯ ಇತರರಿದ್ದರು.

ಇಂದು ಮಂಡಿಮೊಹಲ್ಲಾದಲ್ಲಿ ಕನ್ನಡ ರಾಜ್ಯೋತ್ಸವ

ಮೈಸೂರು,ನ.25(ಜಿಎ)–ಮೈಸೂರಿನ ಮಂಡಿ ಮೊಹಲ್ಲಾದ ಎಂ.ಬಿ.ಅನಂತಸ್ವಾಮಿ ಸಾಂಸ್ಕೃತಿಕ ಮತ್ತು ಸೇವಾ ಟ್ರಸ್ಟ್ ವತಿಯಿಂದ ನ.26ರಂದು ಸಂಜೆ 6 ಗಂಟೆಗೆ ಮಂಡಿ ಮೊಹಲ್ಲಾ ಚೌಡೇಶ್ವರಿ ದೇವಸ್ಥಾನದ ಹಿಂಭಾಗ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ನಿರ್ದೇಶಕಿ ಭುವನೇಶ್ವರಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 4 ಗಂಟೆಗೆ ಟ್ರಸ್ಟ್‌ನ ಅಧ್ಯಕ್ಷ ಎ.ಶಾಂತರಾಜು ಕನ್ನಡ ಧ್ವಜಾರೋಹಣ ನೆರವೇರಿಸಲಿದ್ದಾರೆ. ನಂತರ ಭುವನೇಶ್ವರಿ ದೇವಿಗೆ ಪುಷ್ಪಾರ್ಚನೆ ನೆರವೇರಿಸಲಾಗುತ್ತದೆ. ಸಂಜೆ ವೇದಿಕೆಯಲ್ಲಿ ಸುಗಮ ಸಂಗೀತ, ಕನ್ನಡ ಚಿತ್ರಗೀತೆಗಳ ಕೊರೊಕೆ ಗಾಯನ ಕಾರ್ಯಕ್ರಮವನ್ನು ಖ್ಯಾತ ಗಾಯಕ, ಗಾಯಕಿಯರು ಪ್ರಸ್ತುತ ಪಡಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಅಧ್ಯಕ್ಷ ಎ.ಕಾಂತರಾಜು, ಕಾರ್ಯದರ್ಶಿ ಚಂದ್ರು, ಡಾ.ಆರ್.ರೇಖಾ, ಗುರುರಾಜ್, ಜಯಲಕ್ಷ್ಮಿ ನಾಯ್ಡು, ಜ್ಯೋತಿ ಉಪಸ್ಥಿತರಿದ್ದರು.

ಕ್ರೀಡಾ ವಿಜೇತರು...



ಮೈಸೂರಿನ ಡಿ.ಎ.ವಿ ಪಬ್ಲಿಕ್ ಶಾಲೆ ಆಯೋಜಿಸಿದ್ದ 2025–26ನೇ ಸಾಲಿನ ವಾರ್ಷಿಕ ಕ್ರೀಡಾ ಕೂಟದ ರನ್ನಿಂಗ್ ರೇಸ್‌ನಲ್ಲಿ 1ನೇ ತರಗತಿ 'ಸಿ' ವಿಭಾಗದ ತನ್ವೀಶ್ ಗೌಡ–ಪ್ರಥಮ, ಕೆ.ಆರ್ಯನ್–ದ್ವಿತೀಯ, ಮತ್ತು ವಿಲೋಕ್ ಸುಜಯ್ ಅರಸ್–ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ. ಈ ವೇಳೆ ಡಾ.ಶೇಖರ್, ಸಂಸ್ಥೆ ಅಧ್ಯಕ್ಷ ಎನ್.ಸಚ್ಚಿದಾನಂದಮೂರ್ತಿ, ಕಾರ್ಯದರ್ಶಿ ಆನಂದ್, ಕಾಲೇಜಿನ ಟ್ರಸ್ಟಿ ಹಾಗೂ ಶಾಲೆ ಸಿಇಓ ಎಂ.ಎ.ಜಯಶ್ರೀ, ಎಸ್.ವಿ.ಎಂ ಕಾಲೇಜಿನ ಪ್ರಾಂಶುಪಾಲ ಸಾಗರ್ ಚಕ್ರವರ್ತಿ, ಉಪಪ್ರಾಂಶುಪಾಲ ಹರ್ಷ, ಶಾಲೆ ಪ್ರಾಂಶುಪಾಲ ರಾದ ಕಾವ್ಯಶ್ರೀ ಬಸಪ್ಪ, ಉಪಪ್ರಾಂಶುಪಾಲರಾದ ಕಾವ್ಯ ಟಿ.ಎಂ. ಉಪಸ್ಥಿತರಿದ್ದರು.

ದಲಿತ ವಿರೋಧಿ ನೀತಿ; ಆರ್‌ಎಸ್‌ಎಸ್ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ದಸಂಸ ಪ್ರತಿಭಟನೆ

ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ಇಲ್ಲ–ಸಲ್ಲದ ಆರೋಪಕ್ಕೆ ಖಂಡನೆ



ಆರ್‌ಎಸ್‌ಎಸ್ ಸಂಘಟನೆ ದಲಿತ ವಿರೋಧಿ ನೀತಿ ಅನುಸರಿಸುತ್ತಿದೆ ಎಂದು ಆರೋಪಿಸಿ ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು,ನ.25(ಎಂಟಿವೈ)– ದಲಿತ ವಿರೋಧಿ ನೀತಿ ಅನುಸರಿಸುತ್ತಿರುವ ಆರ್‌ಎಸ್‌ಎಸ್ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ನೂತನ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಿದ ದಸಂಸ ಕಾರ್ಯಕರ್ತರು ಸಂವಿಧಾನವನ್ನು ಗೌರವಿಸದ, 50 ವರ್ಷಗಳ ಕಾಲ ತನ್ನ ಕಚೇರಿ ಮೇಲೆ ರಾಷ್ಟ್ರಧ್ವಜ ಹಾರಿಸಲು ನಿರಾಕರಿಸಿದ, ಸ್ವತಂತ್ರ ಹೋರಾಟದಲ್ಲಿ ಭಾಗವಹಿಸದ, ಇದುವರೆಗೂ ನೋಂದಣಿ ಮಾಡಿಕೊಳ್ಳದೆ ದೇಶದ ಕಾನೂನಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿರುವ ಆರ್‌ಎಸ್‌ಎಸ್ ಸಂಘಟನೆ ವಿರುದ್ಧ ಕ್ರಮ ಕೈಗೊಳ್ಳಬೇಕು. ಅಲ್ಲದೆ, ಆ ಸಂಘಟನೆಯನ್ನು ಸಂವಿಧಾನದ ಚೌಕಟ್ಟಿನ ಅಡಿಯಲ್ಲಿ ಕಾರ್ಯನಿರ್ವಹಿಸುವಂತೆ ಮಾಡಬೇಕು. ಈ ಕುರಿತು ಹೇಳಿಕೆ ನೀಡಿರುವ ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ಕೆಲವು ಕೋಮುವಾದಿ ದುಷ್ಟಶಕ್ತಿಗಳು ಸಾಮಾಜಿಕ ಜಾಲತಾಣಗಳಲ್ಲಿ ಅವಾಚ್ಯ ಶಬ್ದಗಳಿಂದ ನಿಂದಿಸುತ್ತ, ಜೀವ ಬೆದರಿಕೆ ಹಾಕುತ್ತಿವೆ. ಪ್ರಿಯಾಂಕ್ ಖರ್ಗೆ ಅವರ ರಾಜಕೀಯ ಏಳ್ಗೆ ಸಹಿಸದ ಮನುವಾದಿಗಳು ದಲಿತ ಸಮುದಾಯಕ್ಕೆ ಸೇರಿದ ಮಲ್ಲಿಕಾರ್ಜುನ ಖರ್ಗೆ ಅವರನ್ನು ಉದ್ದೇಶಪೂರ್ವಕವಾಗಿ ಅವಮಾನಿಸುತ್ತಿದ್ದಾರೆ ಎಂದು ದೂರಿದರು.

ರಾಷ್ಟ್ರ ವಿರೋಧಿ: ಮನುವಾದಿ ಆರ್‌ಎಸ್‌ಎಸ್ ಸಂಘಟನೆಯು ದಲಿತ ವಿರೋಧಿ ನಿಲುವು ಹೊಂದಿದ್ದು, ಸರ್ಕಾರ ಇದರ ವಿರುದ್ಧ ಕ್ರಮ ಕೈಗೊಳ್ಳಬೇಕು. ರಾಷ್ಟ್ರಗೀತೆಯನ್ನು ಬ್ರಿಟಿಷ್ ಅಧಿಕಾರಿಯನ್ನು ಸ್ವಾಗತಿಸಲು ಬರೆಯಲಾಗಿತ್ತು ಎಂಬ ಬಿಜೆಪಿ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿಕೆ ರಾಷ್ಟ್ರ ವಿರೋಧಿಯಾದುದು. ಇವರನ್ನು ಕೂಡಲೇ ಬಂಧಿಸಬೇಕು ಎಂದು ಒತ್ತಾಯಿಸಿದರು.

ಕೇಂದ್ರದಲ್ಲಿ ಮನುವಾದಿಗಳು ಅಧಿಕಾರಕ್ಕೆ ಬಂದ ತರುವಾಯ ದಿನೇ ದಿನೇ ದಲಿತ ಸಮುದಾಯದ ಮೇಲಿನ ಕೊಲೆ, ಸುಲಿಗೆ, ದೌರ್ಜನ್ಯ, ಅತ್ಯಾಚಾರಗಳು ಉಲ್ಬಣಿಸುತ್ತಿವೆ. ದಲಿತ ಸಮುದಾಯವನ್ನು ಸಾಮಾಜಿಕ, ರಾಜಕೀಯ, ಶೈಕ್ಷಣಿಕವಾಗಿ ವ್ಯವಸ್ಥಿತವಾಗಿ ಸದೆಬಡಿಯಲಾಗುತ್ತಿದೆ. ಸುಪ್ರಿಂ ಕೋರ್ಟಿನ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಮೇಲೆ ಮನುವಾದಿ ವಕೀಲನೊಬ್ಬ ಶೂ ಎಸೆಯುವ ಮೂಲಕ ದೇಶದ್ರೋಹಿ ಕೃತ್ಯ ಎಸಗಿದ್ದಾನೆ. ಇದು ಒಂದು ರೀತಿಯಲ್ಲಿ ಭಾರತದ ಸಂವಿಧಾನ, ಪ್ರಜಾಪ್ರಭುತ್ವದ ಮೇಲೆ ನೇರ ದಾಳಿಯಾಗಿದೆ. ದಲಿತರು ಉನ್ನತ ಹುದ್ದೆಯಲ್ಲಿರುವುದನ್ನು ಮನುವಾದಿಗಳು ಸಹಿಸುವುದಿಲ್ಲ ಎಂಬುದನ್ನು ಈ ಘಟನೆ ಸಾಬೀತು ಪಡಿಸುತ್ತದೆ. ಕೋಮುವಾದಿ ಮನಸ್ಥಿತಿಯ ವಕೀಲನೊಬ್ಬ ಸಾರ್ವಜನಿಕವಾಗಿ ಡಾ.ಅಂಬೇಡ್ಕರ್ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸುತ್ತ, ಅವರು ಸಂವಿಧಾನವನ್ನೇ ಬರೆದಿಲ್ಲ ಎಂದು ಮನುವಾದವನ್ನು ಎತ್ತಿ ತೋರಿಸಿ, ದಲಿತ ವಿರೋಧಿ ನೀತಿ ಪ್ರದರ್ಶಿಸಿದ್ದಾರೆ ಎಂದು ಕಿಡಿಕಾರಿದರು.

ಪ್ರತಿಭಟನೆಯಲ್ಲಿ ರಾಜ್ಯ ದಲಿತ ಸಂಘರ್ಷ ಸಮಿತಿ ಸಂಚಾಲಕ ಕೊಳಗಟ್ಟೆ ಕೃಷ್ಣ ಮಲ್ಲೇಶ್, ಸುರೇಶ್ ಯರಗನಹಳ್ಳಿ, ಶಂಕರಪುರ ಸುರೇಶ್ ಸೇರಿದಂತೆ ಹಲವರು ಇದ್ದರು.

ಮಗುವಿನ ಮೇಲೆ ಲೈಂಗಿಕ ದೌರ್ಜನ್ಯ ಖಂಡಿಸಿ ಪ್ರತಿಭಟನೆ

ಮೈಸೂರು,ನ.25(ಎಂಟಿವೈ)– ಮಹಾರಾಷ್ಟ್ರದ ನಾಗಪುರದಲ್ಲಿ ಮೂರು ವರ್ಷದ ಮಗುವಿನ ಮೇಲೆ ಲೈಂಗಿಕ ದೌರ್ಜನ್ಯವೆಸಗಿ ಕೊಲೆ ಮಾಡಿದ ಆರೋಪಿಗೆ ತಕ್ಕ ಶಿಕ್ಷೆ ವಿಧಿಸಬೇಕು ಎಂದು ಒತ್ತಾಯಿಸಿ ಗಂಧದಗುಡಿ ಫೌಂಡೇಷನ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿ, ಮಗುವಿನ ಮೇಲೆ ಹೇಯ ಕೃತ್ಯವೆಸಗಿದ ಆರೋಪಿಗೆ ಕಠಿಣ ಶಿಕ್ಷೆ ವಿಧಿಸಬೇಕು. ಅಲ್ಲದೆ, ಮೃತ ಮಗುವಿನ ಪೋಷಕರಿಗೆ ಅಲ್ಲಿನ ಸರ್ಕಾರ ಭದ್ರತೆ ಒದಗಿಸಿ ಅಗತ್ಯ ನೆರವು ನೀಡಬೇಕು. ಇತ್ತೀಚಿನ ದಿನಗಳಲ್ಲಿ ಚಿಕ್ಕ ಮಕ್ಕಳು ಹಾಗೂ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ಪ್ರಕರಣ ಹೆಚ್ಚಾಗುತ್ತಿದ್ದು, ಕಾಮುಕರಿಗೆ ತಕ್ಕ ಶಿಕ್ಷೆ ವಿಧಿಸಿ ಇಂತಹ ಘಟನೆಗಳು ಮರುಕಳಿಸದಂತೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಗಂಧದಗುಡಿ ಫೌಂಡೇಷನ್ ರಾಜ್ಯಾಧ್ಯಕ್ಷ ಆರ್ಯನ್ ಗಂಧದಗುಡಿ, ಉಪಾಧ್ಯಕ್ಷ ಮನೋಹರ್ ಗೌಡ, ಪದಾಧಿಕಾರಿಗಳಾದ ಮೋಹನ್‌ರಾಜ್, ವಿನೋದ್ ವಿಲಿಯಂ, ಕಿರಣ್ ಶೆಟ್ಟಿ ಸೇರಿದಂತೆ ಹಲವರು ಭಾಗವಹಿಸಿದ್ದರು.

ನ.30, ಸ್ವದೇಶಿ ದಿನಾಚರಣೆ

ಮೈಸೂರು, ನ. 25– ಮೈಸೂರಿನ ಆಜಾದಿ ಬಚಾವೋ ಆಂದೋಲನದ ವತಿಯಿಂದ ನ.30ರಂದು ಮಧ್ಯಾಹ್ನ 3ರಿಂದ ಸಂಜೆ 6.30 ರವರೆಗೆ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಡಾ. ಎಪಿಜೆ ಅಬ್ದುಲ್ ಕಲಾಂ ಸಭಾಂಗಣದಲ್ಲಿ ಸ್ವದೇಶಿ ದಿನಾಚರಣೆ ಹಮ್ಮಿಕೊಳ್ಳಲಾಗಿದೆ.

ಮಧ್ಯಾಹ್ನ 3ರಿಂದ 4ರವರೆಗೆ ರಾಜೀವ್ ದೀಕ್ಷಿತರ ಸಾಕ್ಷ್ಯ ಚಿತ್ರ, ಸಂಜೆ 4ರಿಂದ 6.30ರವರೆಗೆ ಭಾರತ ದೇಶದ ವರ್ತಮಾನ ಸಮಸ್ಯೆಗಳು ಮತ್ತು ಪರಿಹಾರ ಕುರಿತು ಖ್ಯಾತ ರಾಜಕೀಯ ವ್ಯಾಖ್ಯಾನಕಾರರಾದ ಪುಷ್ಪೇಂದ್ರ ಕುಲಶ್ರೇಷ್ಠ ಅವರಿಂದ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಪ್ರಶಸ್ತಿ, ಸ್ಥಾನಮಾನಗಳಿಗಾಗಿಯೇ ಬರವಣಿಗೆ ಸ್ಪರ್ಧೆ ಸಾಹಿತ್ಯ ಲೋಕದ ಕಳವಳಕಾರಿ ಬೆಳವಣಿಗೆ

ನಿವೃತ್ತ ಪ್ರಾಧ್ಯಾಪಕ ಶ್ರೀಪಾದ ಹೆಗಡೆ ಆತಂಕ



ಮೈಸೂರಿನ ಕೆಹೆಚ್‌ಬಿ ಕಾಲೋನಿಯ ವಿ–ಕೇರ್ ಸಭಾಂಗಣದಲ್ಲಿ ವಿ–ಕೇರ್ ತಿಂಗಳ ಪುಸ್ತಕ ಓದು ಕಾರ್ಯಕ್ರಮ ನಡೆಯಿತು.

ಮೈಸೂರು, ನ.25(ಬಿಎಲ್‌ಯು)– ಪ್ರಶಸ್ತಿ ಹಾಗೂ ಸ್ಥಾನಮಾನಗಳಿಗಾಗಿ ಬರವಣಿಗೆಯ ಸ್ಪರ್ಧೆಯಲ್ಲಿ ತೊಡಗಿಕೊಳ್ಳುವುದು ಸಾಹಿತ್ಯ ಲೋಕದ ಕಳವಳಕಾರಿ ಬೆಳವಣಿಗೆ ಎಂದು ನಿವೃತ್ತ ಪ್ರಾಧ್ಯಾಪಕ ಶ್ರೀಪಾದ ಹೆಗಡೆ ಆತಂಕ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಕೆಹೆಚ್‌ಬಿ ಕಾಲೋನಿಯ ವಿ–ಕೇರ್ ಸಭಾಂಗಣದಲ್ಲಿ ವಿ–ಕೇರ್ ತಿಂಗಳ ಪುಸ್ತಕ ಓದು ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರಶಸ್ತಿ, ಸ್ಥಾನಮಾನಗಳಿಗೆ ಪುಸ್ತಕ ಬರೆಯುವುದಾಗಲಿ, ಸ್ಪರ್ಧೆಯಲ್ಲಿ ಭಾಗಿಯಾಗುವುದಾಗಲಿ, ಮಾಡಬಾರದು ಎಂದು ಸಲಹೆ ನೀಡಿದರು.

ಬದುಕು ಹಿರಿದಾಗಿ ಇದ್ದಷ್ಟು ಸಾಹಿತ್ಯ ಕೃತಿಗಳು ಹಿರಿದಾಗುತ್ತವೆ. ಬರಹಗಾರರ ಬದುಕು ಹಾಗೂ ಅವರ ಕೃತಿಗಳು ಹಿರಿದಾಗುತ್ತವೆ. ಶ್ರೇಷ್ಠ ಲೇಖಕರ ಬದುಕನ್ನು ಅವಲೋಕಿಸಿದಾಗ ಇದು ತಿಳಿಯುತ್ತದೆ. ಮಕ್ಕಳ ಸಾಹಿತ್ಯ ಕೃತಿಯಲ್ಲಿ ತೊಡಗಿಕೊಂಡಿದ್ದ ಪಂಜೆ ಮಂಗೇಶರಾಯರು, ಎನ್.ಕಣ್ಣಯ್ಯ, ವಿ.ಸಿ.ಸೀತಾರಾಮಯ್ಯ, ಡಿ.ವಿ.ಜಿ, ಜಿ.ಪಿ.ರಾಜರತ್ನಂ, ಬೇಂದ್ರೆ, ಶಿವರಾಮ ಕಾರಂತ, ಕುವೆಂಪುರಂತಹ ಪ್ರಾತಃ ಸ್ಮರಣೀಯರಿಂದ ಇದು ಸಾಕಾರಗೊಳ್ಳುತ್ತದೆ ಎಂದು ಅಭಿಪ್ರಾಯಪಟ್ಟರು.

ವಿ–ಕೇರ್ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷೆ ಡಾ.ಕುಮುದಿನಿ ಅಚ್ಚಿ, ತಿಂಗಳು ಪುಸ್ತಕ ಓದು ಮತ್ತು ವಾರಂತ್ಯದ ಮಕ್ಕಳ ಕೂಟ ಕಾರ್ಯಕ್ರಮಗಳು ನಮ್ಮ ಸುತ್ತಮುತ್ತಲ ಮಕ್ಕಳ ವಿಕಾಸ ಬೆಳವಣಿಗೆಗೆ ಪೂರಕವಾಗಿದೆ ಎಂದರು. ಒಡನಾಡಿ ಸೇವಾ ಸಂಸ್ಥೆಯ ಸಂಸ್ಥಾಪಕ ಸ್ಟ್ಯಾನ್ಲಿ, ಪತ್ರಕರ್ತ ಅಯ್ಯಪ್ಪ ಹೂಗಾರ್, ವಿ–ಕೇರ್ ಸದಸ್ಯ ಪೃಥ್ವಿರಾಜ್, ಡಾ.ಸಾರಿಕಾ ಪ್ರಸಾದ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಹೋರಾಟಗಾರ ಬೆಳ್ಳಾಳೆ ಬೆಟ್ಟೇಗೌಡ, ಉಪನ್ಯಾಸಕ ಪ್ರಶಾಂತ್, ಮೂಡಿಗೆರೆ ಗೋಪಾಲ, ವಿ–ಕೇರ್ ಮಕ್ಕಳ ತರಬೇತುದಾರ ಪ್ರಸನ್ನ, ಚಂದನಾ ಕಾರ್ಯಕ್ರಮದಲ್ಲಿದ್ದರು.

ಸರ್ಕಾರಿ ಆಡಳಿತ ವ್ಯವಸ್ಥೆಯಲ್ಲಿ ಹುದ್ದೆಗಳ ಪರಿಕಲ್ಪನೆ ಬದಲಾಗುತ್ತಿದೆ

ಪಿಯುಸಿ ಸಾಧಕರಿಗೆ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಅಭಿಮತ



ಶ್ರೀ ಸತ್ಯಸಾಯಿಬಾಬಾ ಅವರ ಜನ್ಮ ಶತಮಾನೋತ್ಸವದ ಅಂಗವಾಗಿ ನೂತನ ವಸತಿನಿಲಯ ಕಟ್ಟಡ ಹಾಗೂ 2024–25ನೇ ಸಾಲಿನ ದ್ವಿತೀಯ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಎಡಿಸಿ ಡಾ.ಪಿ.ಶಿವರಾಜು ಸನ್ಮಾನಿಸಿದರು.

ಮೈಸೂರು,ನ.25(ಎಸ್‌ಪಿಎನ್)–ಪ್ರಸ್ತುತ ಕಾಲಘಟ್ಟಕ್ಕೆ ಸರ್ಕಾರಿ ಆಡಳಿತ ವ್ಯವಸ್ಥೆಯಲ್ಲಿ ಹುದ್ದೆಗಳ ಪರಿಕಲ್ಪನೆ ಬದಲಾಗುತ್ತಿದೆ. ಭವಿಷ್ಯದಲ್ಲಿ ಸಿಬ್ಬಂದಿ ಸಂಖ್ಯೆ ವಿರಳವಾಗಿ, ಆಡಳಿತ ನಡೆಸಲು ಅಧಿಕಾರಿಗಳ ಅವಶ್ಯಕತೆಯಿದೆ ಎಂದು ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಅಭಿಪ್ರಾಯಪಟ್ಟರು.

ಮೈಸೂರು ಜಯಲಕ್ಷ್ಮೀಪುರಂ ಶ್ರೀ ಸತ್ಯಸಾಯಿ ಬಾಬಾ ಶಾಲೆ ಮತ್ತು ಕಾಲೇಜು ಆವರಣದಲ್ಲಿ ಏರ್ಪಡಿಸಿದ್ದ ಶ್ರೀ ಸತ್ಯಸಾಯಿ ಬಾಬಾ ಅವರ ಜನ್ಮ ಶತಮಾನೋತ್ಸವದ ಅಂಗವಾಗಿ ನೂತನ ವಸತಿನಿಲಯ ಕಟ್ಟಡ ಉದ್ಘಾಟನೆ ಹಾಗೂ 2024–25ನೇ ಸಾಲಿನ ದ್ವಿತೀಯ ಪಿಯುಸಿ ಸಾಧಕರಿಗೆ ಪ್ರತಿಭಾ ಪುರಸ್ಕಾರ ವಿತರಿಸಿ ಅವರು, ಮಾತನಾಡಿದರು.

ಪ್ರತಿಭಾವಂತ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಸ್ಪರ್ಧೆಯಲ್ಲಿ ತೊಡಗಿಸಿಕೊಂಡು, ಭವಿಷ್ಯದಲ್ಲಿ ಸಮಾಜದಲ್ಲಿ ಒಳ್ಳೆಯ ಅಧಿಕಾರಿಗಳಾಗಿ ಹೊರಹೊಮ್ಮಬೇಕು. ವಿದ್ಯಾರ್ಥಿಗಳಿಗೆ ಎಲ್ಲವನ್ನು ಸಾಧಿಸುವ ಶಕ್ತಿ, ಸಾಮರ್ಥ್ಯವಿದೆ. ನಿಮ್ಮೊಳಗಿನ ಪ್ರತಿಭೆಯನ್ನು ಕಂಡುಕೊಂಡು ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಸಾಧನೆಯಲ್ಲಿ ಸೋತಾಗ ಸಾವಿರ ಕಾರಣ ಕೊಡಬಹುದು. ಆದರೆ, ಸೋಲಿಗೆ ನೀವೇ ಕಾರಣ. ಗೆದ್ದಾಗ ಸಾವಿರ ಜನ ಬೆನ್ನ ಹಿಂದೆ ಬರುತ್ತಾರೆ. ಹಾಗಾಗಿ ನಿಮ್ಮ ಕನಸ್ಸಿನ ಸಾಕಾರಕ್ಕೆ ನೀವೇ ಹೊಣೆಗಾರರು. ಹಾಗಾಗಿ ಅಧಿಕಾರಿಗಳಾಗಲು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೇರ್ಗಡೆ ಹೊಂದಬೇಕು. ನಿಮ್ಮ ಭವಿಷ್ಯ, ನಿಮ್ಮ ಬದುಕು ಸುಧಾರಿಸಲು ಸಾಧನೆ ಮಾರ್ಗವನ್ನು ಆಯ್ಕೆ ಮಾಡಿಕೊಂಡಾಗ ಮಾತ್ರ ಸಾಧ್ಯ ಎಂದರು.

ದಯೆ, ಪ್ರೀತಿ, ಕರುಣೆ, ಮಮತೆ ಇಂತಹ ವಿಚಾರಗಳನ್ನು ಮೈಗೂಡಿಸಿಕೊಂಡರೆ ಮನುಷ್ಯ ದೇವರಾಗಲು ಸಾಧ್ಯ ಎಂಬುದನ್ನು ಹಲವು ಮಹಾನೀಯರು ನಿರೂಪಿಸಿದ್ದು, ಈ ಮೂಲಕ ಭಾರತ ವಿಶ್ವಗುರುವಾಗಿ ಮುನ್ನಡೆಯಲು ಸಾಧ್ಯವಾಗಿದೆ. ಮನುಷ್ಯನಾಗಿ ಹುಟ್ಟಿ ಸ್ವಾರ್ಥದ ಬದುಕು ನಡೆಸುವುದಿಲ್ಲ. ಅದರಿಂದಾಚೆಗೆ ಸಾಧನೆ ಮಾಡಿ, ಸಮಾಜಕ್ಕೆ ಕೊಡುಗೆ ನೀಡಬೇಕು ಎಂದರು.

2024–25ನೇ ಸಾಲಿನ ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಾದ ಕೆ.ಹೇಮಶ್ರೀ, ಡಿ.ಆರ್. ಸಂಜನಾ, ಎಚ್.ಎಸ್.ಶ್ರೀಶಾಂತ್, ಎಸ್.ಜಾಹ್ನವಿ, ಎಸ್.ಕೆ.ನಿಶಾಂತ್ ಮರಡಿ, ವೈಭವ್ ಗಜಾನನ್ ಆಚಾರಿ, ಎಂ.ಮೃದಳಾ, ಪಿ.ಎಂ.ನಿಶಾಂತ್, ರಚನಾ, ಬಿ.ಸಂಜನ, ಟಿ.ಎಸ್.ಕೀರ್ತನಾ, ಎಸ್.ಲಿಖಿತೇಶ್, ಸಿ.ಜೆ.ವಿಜ್ಞೇಶ್, ಎನ್.ಮಹದೇವ ಪ್ರಸಾದ್, ಅಭಿಲಾಷ್, ಎಸ್.ದೀಪ್ತಿ, ಎಸ್.ಡಿ.ನಿಖಿಲ್ ರಾಜ್, ಎನ್.ಶರಣ್ಯ, ಪಿ.ಧನುಷ್, ಎಸ್.ಸಾಯಿ ತರುಣ್, ಪಿ.ಯಶವಂತ್, ನೇಹಲ್ ಎಸ್.ಗೌಡ, ಎಂ.ಪಿ.ಗಿರೀಶ್, ಎಸ್.ಶ್ರೇಯಸ್, ಎಸ್.ವಿ.ಭರತ್, ವೈಷ್ಣವಿ ಪ್ರಸಾದ್, ಎಂ.ಅಮೃತ, ಲಿತ್ಯಾತ್ ಆರ್.ಪ್ರಸಾದ್, ಕೆ.ಎಸ್.ಸಮ್ವಿತ್, ಎಂ.ಆರ್.ಪ್ರಿಯಾಂಕ, ಎ.ಎಸ್.ಭುವನೇಶ್, ಆರ್.ಗನಶ್ಯಾಮ್, ಬಿ.ಐ.ಸ್ಕಂದ, ಡಿ.ಜೆಜಿತಿನ್, ಎಸ್.ಚಿದಾನಂದ, ಪಿ.ಕುಶಾಲ್‌ಗೌಡ, ಕೆ.ಕುಶಾಲ್‌ಕುಮಾರ್, ಸಾಯಿಶ್ರೇಯ, ಎಂ.ಅನನ್ಯ, ಸಮರ್ಥ್ ಎಸ್.ಪಟೇಲ್, ಎಂ.ಪಿ.ಗಿರೀಶ್, ಜೆ.ಪಿ. ಸ್ಫೂರ್ತಿ ಅವರನ್ನು ಸನ್ಮಾನಿಸಲಾಯಿತು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಬೆಂಗಳೂರು ಪಿಂಟೆಲಿಕ್ಸ್ ಸಿಇಒ ಡಾ.ಶೈಲೇಂದ್ರ ಮೃತ್ಯುಂಜಯಪ್ಪ, ಶ್ರೀ ಸತ್ಯಸಾಯಿ ಬಾಬಾ ಮಹಿಳಾ ಮತ್ತು ಮಕ್ಕಳ ಕೂಟ ಟ್ರಸ್ಟ್‌ನ ಚೇರ್ಮನ್ ಡಾ.ಎಂ.ಎನ್.ಸುಂದರೇಶನ್, ಟ್ರಸ್ಟಿ ಸುಧಾ ಮೃತ್ಯುಂಜಯಪ್ಪ, ಪ್ರಾಂಶುಪಾಲ ತ್ರಿಮೂರ್ತಿ ಮತ್ತಿತರರಿದ್ದರು.

ದೇಶ - ವಿದೇಶ

ಬಾಗಿಲು ಮುಚ್ಚಿದ ಬದರಿನಾಥ ದೇಗುಲ: ಚಾರ್‌ಧಾಮ್ ಯಾತ್ರೆ ಮುಕ್ತಾಯ



ಗೋಪೇಶ್ವರ: ಚಳಿಗಾಲ ಆರಂಭವಾದ ಕಾರಣ ಉತ್ತರಾಖಂಡದ ಬದರಿನಾಥ ದೇಗುಲದ ಬಾಗಿಲನ್ನು ಮುಚ್ಚಲಾಗಿದೆ. ಈ ಮೂಲಕ ಈ ವರ್ಷದ ಚಾರ್ ಧಾಮ್ ಯಾತ್ರೆ ಮಂಗಳವಾರ ಮುಕ್ತಾಯವಾಗಿದೆ. ವಿಶೇಷ ಪೂಜೆ ಬಳಿಕ ಬದರಿನಾಥ ದೇಗುಲವನ್ನು ಮಧ್ಯಾಹ್ನ 2.56ಕ್ಕೆ ಮುಚ್ಚಲಾಗಿದೆ ಎಂದು ಬದರಿನಾಥ–ಕೇದಾರನಾಥ ದೇಗುಲ ಸಮಿತಿ ಹೇಳಿದೆ. ಈ ವೇಳೆ ಚಳಿಯ ವಾತಾವರಣದ ನಡುವೆಯೂ ದೇಶ–ವಿದೇಶಗಳಿಂದ ಬಂದಿದ್ದ ಭಕ್ತರು ಹಾಜರಿದ್ದರು. ದೇವಾಲಯವನ್ನು ಹಳದಿ ಮತ್ತು ಕೇಸರಿ ಬಣ್ಣದ ಚೆಂಡುಹೂವಿನಿಂದ ಅಲಂಕರಿಸಲಾಗಿತ್ತು. ದೇಗುಲದ ಎದುರು ಬೆಳಿಗ್ಗೆಯಿಂದಲೇ ಜಾನಪದ ನೃತ್ಯ, ಭಜನೆ, ಕೀರ್ತನೆಗಳು ನಡೆಯುತ್ತಿದ್ದವು. ಕೇದಾರನಾಥ, ಯಮುನೋತ್ರಿ, ಗಂಗೋತ್ರಿ ಧಾಮಗಳು ಕಳೆದ ತಿಂಗಳು ಬಾಗಿಲು ಮುಚ್ಚಿತ್ತು. ಈಗ ಬದರಿನಾಥ ದೇಗುಲದ ಬಾಗಿಲು ಮುಚ್ಚುವ ಮೂಲಕ ಚಾರ್‌ಧಾಮ್‌ಯಾತ್ರೆ ಮುಕ್ತಾಯಗೊಂಡಿದೆ. ಪ್ರತಿ ವರ್ಷ ತೀವ್ರ ಚಳಿ ಮತ್ತು ಭಾರಿ ಹಿಮಪಾತವಾಗುವ ಕಾರಣ ಪ್ರತಿ ವರ್ಷ ಅಕ್ಟೋಬರ್–ನವೆಂಬರ್‌ನಲ್ಲಿ ಹಿಮಾಲಯದಲ್ಲಿರುವ ಈ ದೇಗುಲಗಳ ಬಾಗಿಲನ್ನು ಮುಚ್ಚಲಾಗುತ್ತದೆ.

ಅಫ್ಘಾನಿಸ್ತಾನ ಮೇಲೆ ಪಾಕ್ ವಾಯುದಾಳಿ: 9 ಮಕ್ಕಳು ಸೇರಿ 10 ಮಂದಿ ಸಾವು



ಕಾಬೂಲ್: ಅಫ್ಘಾನಿಸ್ತಾನದ ಖೋಸ್ಟ್ ಪ್ರದೇಶದಲ್ಲಿ ನಾಗರಿಕರ ಮನೆಯನ್ನು ಗುರಿಯಾಗಿಸಿಕೊಂಡು ಪಾಕಿಸ್ತಾನ ತಡರಾತ್ರಿ ನಡೆಸಿದ ವಾಯುದಾಳಿಯಲ್ಲಿ 9 ಮಕ್ಕಳು ಮೃತಪಟ್ಟಿದ್ದಾರೆ ಎಂದು ತಾಲಿಬಾನ್ ತಿಳಿಸಿದೆ. ಖೋಸ್ಟ್‌ನ ಗುರ್ಬುಜ್ ಜಿಲ್ಲೆಯ ಮುಘಲ್‌ಗೈ ಪ್ರದೇಶದಲ್ಲಿ ಪಾಕಿಸ್ತಾನದ ಪಡೆಗಳು ನಿನ್ನೆ ರಾತ್ರಿ ಮನೆಯೊಂದರ ಮೇಲೆ ಬಾಂಬ್ ದಾಳಿ ನಡೆಸಿವೆ. ದಾಳಿಯಲ್ಲಿ 9 ಮಕ್ಕಳು ಮತ್ತು ಒಬ್ಬ ಮಹಿಳೆ ಮೃತಪಟ್ಟಿದ್ದಾರೆ. ಕುನಾರ್ ಮತ್ತು ಪಕ್ತಿಕಾ ಪ್ರಾಂತ್ಯಗಳಲ್ಲಿಯೂ ಪಾಕಿಸ್ತಾನದ ಪಡೆಗಳು ದಾಳಿ ನಡೆಸಿದೆ. ನಾಲ್ವರು ನಾಗರಿಕರು ಗಾಯಗೊಂಡಿದ್ದಾರೆ ಎಂದು ಅಫ್ಘಾನಿಸ್ತಾನದ ತಾಲಿಬಾನ್ ಸರಕಾರದ ವಕ್ತಾರ ಜಬಿಹುಲ್ಲಾ ಮುಜಾಹಿದ್ ಹೇಳಿದ್ದಾರೆ.

ನಿನ್ನೆ ರಾತ್ರಿ ಸುಮಾರು 12 ಗಂಟೆಯ ಸುಮಾರಿಗೆ ಪಾಕಿಸ್ತಾನದ ಆಕ್ರಮಣಕಾರಿ ಪಡೆಗಳು ಖೋಸ್ಟ್ ಪ್ರಾಂತ್ಯದ ಗೆರ್ಬಾಜ್ ಜಿಲ್ಲೆಯ ಮುಘಲ್‌ಗೈ ಪ್ರದೇಶದಲ್ಲಿ ಖಾಜಿ ಮಿರ್ ಅವರ ಪುತ್ರ ವಿಲಾಯತ್ ಖಾನ್ ಅವರ ನಿವಾಸದ ಮೇಲೆ ಬಾಂಬ್ ದಾಳಿ ನಡೆಸಿದೆ. ಈ ವೇಳೆ 9 ಮಕ್ಕಳು ಮತ್ತು ಒಬ್ಬ ಮಹಿಳೆ ಮೃತಪಟ್ಟಿದ್ದಾರೆ ಮತ್ತು ಮನೆ ಧ್ವಂಸಗೊಂಡಿದೆ ಎಂದು ಜಬಿಹುಲ್ಲಾ ಮುಜಾಹಿದ್ ಎಕ್ಸ್‌ನಲ್ಲಿನ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಅಂತರರಾಷ್ಟ್ರೀಯ ಗಡಿ ದಾಟಿದ ಪಾಕ್ ಪ್ರೇಮಿಗಳ ಬಂಧನ

ಕಛ್: ಅಕ್ರಮವಾಗಿ ಇಲ್ಲಿನ ಅಂತರರಾಷ್ಟ್ರೀಯ ಗಡಿ ದಾಟಿದ ಪಾಕಿಸ್ತಾನದ ಯುವಕ–ಯುವತಿಯನ್ನು ಗಡಿ ಭದ್ರತಾ ಪಡೆಯ ಯೋಧರು ಬಂಧಿಸಿದ್ದಾರೆ.

ಪೊಪಟ್(24) ಮತ್ತು ಗೌರಿ(20) ಬಂಧಿತರು. ಅಂತರರಾಷ್ಟ್ರೀಯ ಗಡಿಯಿಂದ 8 ಕಿ.ಮೀ. ದೂರದಲ್ಲಿ ಪಾಕಿಸ್ತಾನದೊಳಗಿನ ಗ್ರಾಮದ ನಿವಾಸಿಗಳು. ಕುಟುಂಬದವರು ಮದುವೆಗೆ ವಿರೋಧ ವ್ಯಕ್ತಪಡಿಸಿದ ಕಾರಣ ಮನೆಬಿಟ್ಟು ಬಂದ ಈ ಪ್ರೇಮಿಗಳು ಭಾನುವಾರ ಕಾಲ್ನಡಿಗೆಯಲ್ಲೇ 8 ಕಿ.ಮೀ. ಕ್ರಮಿಸಿ ಅಂತರರಾಷ್ಟ್ರೀಯ ಗಡಿ ದಾಟಿದ್ದಾರೆ ಎಂದು ಬಾಲಸರ್ ಪೊಲೀಸ್ ಠಾಣೆ ಅಧಿಕಾರಿ ತಿಳಿಸಿದ್ದಾರೆ. ಗಡಿಯಲ್ಲಿ ಗಸ್ತು ತಿರುಗುತ್ತಿದ್ದ ಬಿಎಸ್‌ಎಫ್ ಸಿಬ್ಬಂದಿ(ಕಂಬ ಸಂಖ್ಯೆ 1016 ಬಳಿ) ಇವರನ್ನು ಬಂಧಿಸಿದ್ದಾರೆ. ಕುಟುಂಬದವರು ನಮ್ಮ ಮದುವೆಗೆ ವಿರೋಧಿಸಿದ್ದರಿಂದ, ಮನೆ ಬಿಟ್ಟು ಬಂದಿದ್ದೇವೆ ಎಂದು ಪ್ರೇಮಿಗಳು ವಿಚಾರಣೆ ವೇಳೆ ತಿಳಿಸಿರುವುದಾಗಿ ಅಧಿಕಾರಿ ಹೇಳಿದರು. ಪ್ರಕರಣಕ್ಕೆ ಸಂಬಂಧಿಸಿದಂತೆ ಈವರೆಗೂ ಎಫ್‌ಐಆರ್ ದಾಖಲಿಸಿಲ್ಲ. ಸಂಬಂಧಿಸಿದ ಸಂಸ್ಥೆಗಳು ಈ ಕುರಿತು ಹೆಚ್ಚಿನ ತನಿಖೆ ನಡೆಸಲಿವೆ ಎಂದು ಪೊಲೀಸರು ತಿಳಿಸಿದರು. ಪೊಲೀಸ್ ಮೂಲಗಳ ಪ್ರಕಾರ, ಎರಡು ತಿಂಗಳಲ್ಲಿ ಇದು ಎರಡನೇ ಘಟನೆಯಾಗಿದೆ. ಇದಕ್ಕೂ ಮೊದಲು ಅಕ್ಟೋಬರ್ 8ರಂದು ಇದೇ ರೀತಿ ಗಡಿಯಲ್ಲಿ ಇಬ್ಬರನ್ನು ಬಂಧಿಸಲಾಗಿತ್ತು.

ಜ್ವಾಲಾಮುಖಿ ಸ್ಫೋಟ: ವಿಮಾನ ಸಂಚಾರ ವ್ಯತ್ಯಯ



ಅಡಿಸ್ ಅಬಾಬಾ: ಇಥಿಯೋಪಿಯಾದಲ್ಲಿರುವ ಹೈಲಿ ಗುಬ್ಬಿ ಜ್ವಾಲಾಮುಖಿ ಸುಮಾರು 12,000 ವರ್ಷಗಳಲ್ಲಿ ಮೊದಲ ಬಾರಿಗೆ ಸ್ಫೋಟಗೊಂಡಿದ್ದು ವಿಶ್ವಾದ್ಯಂತ ವಿಮಾನ ಸಂಚಾರದಲ್ಲಿ ವ್ಯತ್ಯಯವಾಗಿದೆ.

ಇಥಿಯೋಪಿಯಾದ ಈಶಾನ್ಯ ಪ್ರದೇಶದಲ್ಲಿರುವ ಜ್ವಾಲಾಮುಖಿಯಿಂದ ಸ್ಫೋಟಗೊಂಡ ಹೊಗೆ 14 ಕಿ.ಮೀ ಎತ್ತರದವರೆಗೆ ಚಿಮ್ಮಿದ್ದರಿಂದ ವಿಮಾನಗಳ ಹಾರಾಟಕ್ಕೆ ಸಮಸ್ಯೆಯಾಗಿದೆ. ಆರಂಭದಲ್ಲಿ ಗಂಧಕಗಳಿರುವ ಬೂದಿ ಯೆಮೆನ್ ಮತ್ತು ಓಮನ್ ಕಡೆಗೆ ಸಾಗಿತು. ನಂತರ ಕೆಂಪು ಸಮುದ್ರದಾದ್ಯಂತ ದಟ್ಟವಾದ ಮೋಡ ಆವರಿಸಿದ್ದು ಅರಬ್ಬಿ ಸಮುದ್ರದ ಮೇಲೆ ಹೋಗಿದೆ. ಹವಾಮಾನ ಮುನ್ಸೂಚನೆಯ ಪ್ರಕಾರ ರಾಜಸ್ಥಾನ ಮತ್ತು ಹರಿಯಾಣದ ಕೆಲವು ಭಾಗಗಳನ್ನು ರಾತ್ರಿ ಬೂದಿ ಮೋಡ ತಲುಪಿ ದೆಹಲಿ ಕಡೆ ಸಾಗುವ ಸಾಧ್ಯತೆಯಿದೆ. ಈಗಾಗಲೇ ಅಕಾಸಾ ಏರ್, ಇಂಡಿಗೊ ಮತ್ತು ಕೆಎಲ್‌ಎಂ ಸೇರಿದಂತೆ ಹಲವು ಕಂಪನಿಗಳು ಕೆಲ ವಿಮಾನಗಳ ಹಾರಾಟ ರದ್ದು ಮಾಡಿವೆ. ಎಂಜಿನ್ ಕಾರ್ಯಕ್ಷಮತೆಯ ವೈಪರೀತ್ಯಗಳು ಅಥವಾ ಕ್ಯಾಬಿನ್ ಹೊಗೆ ಅಥವಾ ವಾಸನೆ ಸೇರಿದಂತೆ ಯಾವುದೇ ಶಂಕಿತ ಬೂದಿ ಎದುರಾದಾಗ ತಕ್ಷಣ ವರದಿ ಮಾಡುವಂತೆ ವಿಮಾನಯಾನ ಸಂಸ್ಥೆಗಳಿಗೆ ಸೂಚಿಸಲಾಗಿದೆ.

ನೌಕಾಪಡೆ ಕಾರ್ಯಾಚರಣೆ: ತಿರುವನಂತಪುರ ವಿಮಾನ ನಿಲ್ದಾಣ ನ.27ರಿಂದ ಡಿ.3ರವರೆಗೆ ಬಂದ್



ತಿರುವನಂತಪುರ: ನವೆಂಬರ್ 27ರಿಂದ ಡಿಸೆಂಬರ್ 3ರವರೆಗೆ ನೌಕಾಪಡೆ ಕಾರ್ಯಾಚರಣೆ ಪ್ರದರ್ಶನ ನಡೆಯಲಿದ್ದು, ತಿರುವನಂತಪುರ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಿಮಾನಗಳ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ನವೆಂಬರ್ 27ರಿಂದ ಡಿ.3ರವರೆಗೆ ಸಂಜೆ 4ರಿಂದ ಸಂಜೆ 06:15ರವರೆಗೆ ಎಲ್ಲಾ ವಿಮಾನಗಳ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಗುತ್ತದೆ. ಪ್ರಯಾಣಿಕರು ತಮ್ಮ ವಿಮಾನದ ಸಮಯವನ್ನು ಪರಿಶೀಲಿಸಲು ಮತ್ತು ಸಹಕರಿಸಲು ಕೋರಲಾಗಿದೆ ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು ಪ್ರಕಟಣೆಯಲ್ಲಿ ಹೇಳಿದ್ದಾರೆ. ಭಾರತೀಯ ನೌಕಾಪಡೆಯು ಡಿಸೆಂಬರ್ 4ರಂದು ತಿರುವನಂತಪುರದ ಶಂಗುಮುಗಂ ಬೀಚ್‌ನಲ್ಲಿ ಅದ್ಭುತ ಕಾರ್ಯಾಚರಣೆ ಪ್ರದರ್ಶನದೊಂದಿಗೆ 2025ರ ನೌಕಾಪಡೆಯ ದಿನವನ್ನು ಆಚರಿಸಲಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

ಪಿಕ್‌ಅಪ್ ವಾಹನ ಉರುಳಿ ಮೂವರು ಕಾರ್ಮಿಕರಿಗೆ ಗಾಯ


ಟಯರ್ ಸ್ಫೋಟಗೊಂಡು ರಸ್ತೆ ಮಧ್ಯೆ ಉರುಳಿ ಬಿದ್ದಿರುವ ಪಿಕಪ್ ವಾಹನ

ಮಡಿಕೇರಿ, ನ.25– ಸೋಮವಾರ ಪೇಟೆ ತಾಲೂಕಿನ ನಗರೂರು ಎಸ್ಟೇಟ್‌ಗೆ ಸೇರಿದ ಪಿಕ್‌ಅಪ್ ವಾಹನ ರಾಜ್ಯ ಹೆದ್ದಾರಿಯಲ್ಲಿ ಪಲ್ಟಿಯಾದ ಘಟನೆ ನಡೆದಿದೆ.

ಸೋಮವಾರಪೇಟೆ ಪಟ್ಟಣದಿಂದ ನಗರೂರು ಕಡೆಗೆ ಪಿಕ್‌ಅಪ್ ವಾಹನ ಬರುತ್ತಿದ್ದಾಗ ವಾಹನದ ಟಯರ್ ಸ್ಫೋಟಗೊಂಡಿದೆ. ಆಗ ಚಾಲಕನ ನಿಯಂತ್ರಣ ಕಳೆದುಕೊಂಡು ರಸ್ತೆ ಮಧ್ಯೆ ಮಗುಚಿ ಬಿದ್ದಿದೆ. 5 ಮಂದಿ ಕಾರ್ಮಿಕರು ವಾಹನದಲ್ಲಿದ್ದು, ಅವರಲ್ಲಿ ಇಬ್ಬರು ವಾಹನದ ಕೆಳಗೆ ಸಿಲುಕಿದ್ದರೂ ಅದೃಷ್ಟವಶಾತ್ ಸಣ್ಣಪುಟ್ಟ ಗಾಯಗಳಾಗಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ವಾಹನ ಚಾಲಕ ರವಿ ಎಂಬುವರ ಸೊಂಟಕ್ಕೆ ತೀವ್ರವಾದ ಗಾಯಗಳಾಗಿದ್ದು, ಬಾಬು ಹಾಗೂ ಇನ್ನೋರ್ವ ಅಸ್ಸಾಂ ಮೂಲದ ಕಾರ್ಮಿಕನ ಕಾಲಿಗೆ ಗಂಭೀರ ಗಾಯವಾಗಿದೆ. ಗಾಯಾಳುಗಳನ್ನು ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಅಪಘಾತದ ಸಂದರ್ಭ ಹೆದ್ದಾರಿಯಲ್ಲಿ ಭಾರಿ ವಾಹನಗಳು ಸಂಚರಿಸುತ್ತಿರಲಿಲ್ಲ. ಇದರಿಂದ ದೊಡ್ಡ ಅನಾಹುತ ತಪ್ಪಿದಂತಾಗಿದೆ. ಸೋಮವಾರಪೇಟೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಲೋಕೋಪಯೋಗಿ ಇಂಜಿನಿಯರ್ ಮನೆ, ಕಚೇರಿ ಮೇಲೆ ಲೋಕಾಯುಕ್ತ ದಾಳಿ

ಮನೆ, ನಿವೇಶನ, ಚಿನ್ನಾಭರಣ, ವಾಹನ ಮುಟ್ಟುಗೋಲು



ಲೋಕಾಯುಕ್ತ ಪೊಲೀಸರು ಡಿ.ಎಂ.ಗಿರೀಶ್ ಮನೆಯಲ್ಲಿ ಮುಟ್ಟುಗೋಲು ಹಾಕಿಕೊಂಡಿರುವ ಪದಾರ್ಥಗಳು ಮತ್ತು ಕಚೇರಿ

ಮಡಿಕೇರಿ,ನ.25– ನಿಗದಿತ ಆದಾಯ ಮೀರಿದ ಆಸ್ತಿ ಗಳಿಕೆ ಆರೋಪದ ಮೇರೆಗೆ ಮೈಸೂರು ಮತ್ತು ಕೊಡಗು ಲೋಕಾಯುಕ್ತ ಅಧಿಕಾರಿಗಳು ಜಿಲ್ಲಾ ಲೋಕೋಪಯೋಗಿ ಇಲಾಖೆ ಸಹಾಯಕ ಕಾರ್ಯಪಾಲಕ ಅಭಿಯಂತರ ಡಿ.ಎಂ.ಗಿರೀಶ್ ಅವರ ಕಚೇರಿ ಮತ್ತು ಮನೆ ಮೇಲೆ ದಾಳಿ ನಡೆಸಿ ಪರಿಶೀಲನೆ ನಡೆಸಿದರು.

ಲೋಕಾಯುಕ್ತ ಡಿವೈಎಸ್‌ಪಿ. ದಿನಕರ್ ಶೆಟ್ಟಿ ಮಾರ್ಗದರ್ಶನದಲ್ಲಿ ಲೋಕಾಯುಕ್ತ ನಿರೀಕ್ಷಕಿ ವೀಣಾ ನಾಯಕ್ ಮತ್ತು ಸಿಬ್ಬಂದಿ ಲೋಕೋಪಯೋಗಿ ಇಲಾಖೆ ಕಚೇರಿ, ಎಇಇ ಗಿರೀಶ್ ಅವರ ಸರಕಾರಿ ನಿವಾಸ ಮತ್ತು ಮೈಸೂರು ನಿವಾಸದಲ್ಲಿ ಶೋಧ ಕಾರ್ಯ ನಡೆಸಿದರು. ಬೆಳಗ್ಗಿನಿಂದ ಸಂಜೆವರೆಗೆ ಮೂರು ಕಡೆಗಳಲ್ಲಿ ಶೋಧ ನಡೆಸಿದ ಅಧಿಕಾರಿಗಳು ಕೆಲವು ದಾಖಲೆಗಳನ್ನು ವಶಕ್ಕೆ ಪಡೆದಿದ್ದಾರೆ ಎಂದು ತಿಳಿದು ಬಂದಿದೆ


ಸ್ವತ್ತುಗಳ ವಿವರ: ಲೋಕಾಯುಕ್ತ ಶೋಧ ಕಾರ್ಯಾಚರಣೆ ಸಂದರ್ಭ ಡಿ.ಎಂ. ಗಿರೀಶ್ ಅವರ ಸ್ಥಿರ ಆಸ್ತಿ 1 ಕೋಟಿ 89 ಲಕ್ಷದ 94 ಸಾವಿರ ರೂ. ಮೌಲ್ಯದ 4 ನಿವೇಶನ, 1 ವಾಸದ ಮನೆ, 5 ಲಕ್ಷದ 53 ಸಾವಿರದ 715 ರೂ. ನಗದು, 1 ಕೋಟಿ 81 ಲಕ್ಷ 92 ಸಾವಿರದ 690 ರೂ. ಮೌಲ್ಯದ ಚಿನ್ನಾಭರಣ, 9 ಲಕ್ಷ ರೂ. ಮೌಲ್ಯದ ವಾಹನ, 40 ಲಕ್ಷ ರೂ. ಮೌಲ್ಯದ ಗೃಹೋಪಯೋಗಿ ಮತ್ತು ಇತರೆ ವಸ್ತುಗಳು ಸೇರಿದಂತೆ ಒಟ್ಟು 4 ಕೋಟಿ 26 ಲಕ್ಷದ 48 ಸಾವಿರದ 405 ರೂ. ಮೌಲ್ಯದ ಆಸ್ತಿ ಇರುವುದು ಪತ್ತೆಯಾಗಿದೆ. ಈ ಕುರಿತು ಕೊಡಗು ಲೋಕಾಯುಕ್ತ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಲೋಕಾಯುಕ್ತ ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಇಂದು ಓಂಕಾರೇಶ್ವರ ದೇವಾಲಯದಲ್ಲಿ ಶ್ರೀ ಸುಬ್ರಹ್ಮಣ್ಯ ಷಷ್ಠಿ

ಮಡಿಕೇರಿ, ನ.25– ನಗರದ ಶ್ರೀ ಓಂಕಾರೇಶ್ವರ ದೇವಾಲಯದಲ್ಲಿ ನ.26 ರಂದು 'ಶ್ರೀ ಸುಬ್ರಹ್ಮಣ್ಯ ಷಷ್ಠಿ' ಹಬ್ಬದ ಪ್ರಯುಕ್ತ ವಿಶೇಷ ಪೂಜೆ ನಡೆಯಲಿದ್ದು, ಮಧ್ಯಾಹ್ನ 12.30 ಗಂಟೆಗೆ ಮಹಾಪೂಜೆ ನಂತರ ದೇವಾಲಯದ ಆವರಣದಲ್ಲಿ ಸಾರ್ವಜನಿಕ ಅನ್ನದಾನ ಕಾರ್ಯಕ್ರಮ ನಡೆಯಲಿದೆ. ಸಾರ್ವಜನಿಕ ಭಕ್ತಾದಿಗಳು ದೇವಾಲಯದಲ್ಲಿ ಜರುಗುವ ಪೂಜೆಯಲ್ಲಿ ಪಾಲ್ಗೊಂಡು ಅನ್ನ ಪ್ರಸಾದವನ್ನು ಸ್ವೀಕರಿಸಿ, ದೇವರ ಕೃಪೆಗೆ ಪಾತ್ರರಾಗುವಂತೆ ದೇವಾಲಯದ ವತಿಯಿಂದ ಕೋರಲಾಗಿದೆ.

ಹೋಗಿದ್ದು ವಾಯುವಿಹಾರಕ್ಕೆ; ಸೇರಿದ್ದು ಮಸಣಕೆ

ಗೋಣಿಕೊಪ್ಪ, ನ.25–ವಾಯುವಿಹಾರಕ್ಕೆ ತೆರಳುತ್ತಿದ್ದ ವ್ಯಕ್ತಿಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಅಸು ನೀಗಿರುವ ಘಟನೆ ಕಿರುಗೂರು ಗ್ರಾಮದಲ್ಲಿ ನಡೆದಿದೆ



ಪೊನ್ನಂಪೇಟೆ ತಾಲೂಕಿನ ಕಿರುಗೂರು ಗ್ರಾಮದ ಕಾಯಮಾಡ ಡಾಲಿ ಮಾಚಯ್ಯ (85) ಮೃತ ವ್ಯಕ್ತಿ. ನಿನ್ನೆ ಸಂಜೆ 5:45ರ ಸಮಯದಲ್ಲಿ ಗ್ರಾಮದ ಮುಖ್ಯ ರಸ್ತೆಯಲ್ಲಿ ವಾಯು ವಿಹಾರಕ್ಕೆ ಹೋಗುತ್ತಿದ್ದಾಗ ಈ ಘಟನೆ ಸಂಭವಿಸಿದೆ.

ಪಾದಚಾರಿ ರಸ್ತೆಯ ಮಧ್ಯದಲ್ಲಿ ಬಿದ್ದಿದ್ದುವುದನ್ನು ಗಮನಿಸಿದ ಗ್ರಾಮಸ್ಥರು ಕೂಡಲೇ ಕುಟುಂಬಸ್ಥರಿಗೆ ಮಾಹಿತಿ ನೀಡಿ ಗೋಣಿಕೊಪ್ಪ ಸಮುದಾಯ ಆರೋಗ್ಯ ಕೇಂದ್ರಕ್ಕೆ ರವಾನಿಸುವ ವೇಳೆ ಮಾರ್ಗ ಮಧ್ಯೆ ಸಾವನ್ನಪ್ಪಿದ್ದಾರೆ. ಗೋಣಿಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರೇಮ ನಿಧನ



ಮಡಿಕೇರಿ: ಆದಿ ದ್ರಾವಿಡ ಸಮಾಜ ಸೇವಾ ಸಂಘದ ರಾಜ್ಯಾಧ್ಯಕ್ಷ, ಮಾದಾಪುರದ ಹೆಚ್.ಎಂ. ಸೋಮಪ್ಪ ಅವರ ಪತ್ನಿ ಕೆ.ಕೆ. ಪ್ರೇಮ(54) ನಿನ್ನೆ ರಾತ್ರಿ ನಿಧನರಾದರು. ಮೃತರು ಪತಿ, ಪುತ್ರ, ಪುತ್ರಿಯನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನೆರವೇರಿದೆ

ರಸ್ತೆ ದುಸ್ಥಿತಿ ವಿರೋಧಿಸಿ ಮಂಡಲ ಬಿಜೆಪಿ ಪ್ರತಿಭಟನೆ


ಲೋಕೋಪಯೋಗಿ ಕಚೇರಿಯ ಮುಖ್ಯ ಇಂಜಿನಿಯರ್‌ಗೆ ಮಂಡಲ ಬಿಜೆಪಿ ಪ್ರಮುಖರು ಮನವಿ ಸಲ್ಲಿಸಿದರು.

ವಿರಾಜಪೇಟೆ, ನ.25– ಕೊಡಗಿನ ರಸ್ತೆ ದುಸ್ಥಿತಿ ಬಗ್ಗೆ ಸರಕಾರದ ಗಮನ ಸೆಳೆಯುವ ನಿಟ್ಟಿನಲ್ಲಿ ಮಂಡಲ ಬಿಜೆಪಿ ವತಿಯಿಂದ ವಿರಾಜಪೇಟೆ ಲೋಕೋಪಯೋಗಿ ಕಚೇರಿಯ ಮುಂದೆ ಪ್ರತಿಭಟನೆ ನಡೆಯಿತು.

ಇಲಾಖೆಯ ಮುಂಭಾಗದಲ್ಲಿ ಜಮಾವಣೆಗೊಂಡ ಬಿಜೆಪಿ ಕಾರ್ಯಕರ್ತರು, ಸರಕಾರದ ವಿರುದ್ಧ ಘೋಷಣೆ ಕೂಗಿ ಪ್ರತಿಭಟನೆ ನಡೆಸಿ, ಕಾಂಗ್ರೆಸ್ ಸರಕಾರದ ವೈಫಲ್ಯತೆ ಬಗ್ಗೆ ರಸ್ತೆ ಅಭಿವೃದ್ಧಿ ವಿಚಾರದಲ್ಲಿ ಶಾಸಕರ ನಿರ್ಲಕ್ಷ್ಯದ ಬಗ್ಗೆ ಬಿಜೆಪಿ ಪ್ರಮುಖರು ತೀವ್ರ ವಾಗ್ದಾಳಿ ನಡೆಸಿದರು.

ಮಾಜಿ ಶಾಸಕ ಕೆ.ಜಿ.ಬೋಪಯ್ಯ, ಮಾತನಾಡಿ, ಬಿಜೆಪಿ ಪಕ್ಷ ಅಧಿಕಾರದಲ್ಲಿದ್ದ ಸಂದರ್ಭದಲ್ಲಿ ಇಂತಹ ಪರಿಸ್ಥಿತಿ ನಿರ್ಮಾಣವಾಗಿರಲಿಲ್ಲ. ಇದೀಗ ಸರ್ಕಾರ ಅಧಿಕಾರಕ್ಕೆ ಬಂದು ಎರಡೂವರೆ ವರ್ಷ ಪೂರೈಸಿದ್ದರೂ ರಸ್ತೆ ಅಭಿವೃದ್ಧಿ ಕಾರ್ಯ ಇನ್ನೂ ಆಗದಿರುವುದು ಆಡಳಿತ ವ್ಯವಸ್ಥೆಗೆ ಹಿಡಿದ ಕೈಗನ್ನಡಿಯಾಗಿದೆ. ಕೊಡಗು ಜಿಲ್ಲೆ, ವಿರಾಜಪೇಟೆ, ಪೊನ್ನಂಪೇಟೆ ತಾಲೂಕಿನ ಮುಖ್ಯ ರಸ್ತೆಗಳು ತೀವ್ರ ಹದಗೆಟ್ಟಿದ್ದು ರಸ್ತೆ ಸಂಚಾರಕ್ಕೆ ತೊಂದರೆ ಉಂಟಾಗುತ್ತಿದೆ. ಮಳೆ ಬಿಡುವು ನೀಡಿದ ನಂತರ ಎಲ್ಲೆಡೆ ರಸ್ತೆ ದುರಸ್ತಿ ಕಾರ್ಯ ಕೈಗೊಳ್ಳುವುದಾಗಿ ಶಾಸಕರು ಹೇಳಿಕೆ ನೀಡಿದ್ದರು. ರಸ್ತೆ ಅಭಿವೃದ್ಧಿ ಮಾಡದೆ ಕುರ್ಚಿಗೆ ಕಿತ್ತಾಟ ನಡೆಸುತ್ತಿದ್ದಾರೆ ಎಂದು ವ್ಯಂಗ್ಯವಾಡಿದರು.

ಬಿಜೆಪಿ ಜಿಲ್ಲಾ ಅಧ್ಯಕ್ಷ ರವಿ ಕಾಳಪ್ಪ ಮಾತನಾಡಿ, ಇದೀಗ ಮಳೆ ಬಿಡುವು ನೀಡಿ ಹಲವು ದಿನಗಳು ಕಳೆದಿವೆ. ಮುಖ್ಯ ರಸ್ತೆಯ ದುರಸ್ತಿ ಕಾರ್ಯ ಇನ್ನೂ ಕೈಗೆತ್ತಿಕೊಂಡಿಲ್ಲ. ಜನರ ಆಶೋತ್ತರಗಳನ್ನು ಈಡೇರಿಸುವಲ್ಲಿ ಕಾಂಗ್ರೆಸ್ ಸರ್ಕಾರ ವಿಫಲವಾಗಿದೆ. ಕಳೆದ ಎರಡೂವರೆ ವರ್ಷದಿಂದ ರಸ್ತೆ ನಿರ್ವಹಣೆ ಇಲ್ಲದೆ ಇಂದು ರಸ್ತೆ ಹದಗೆಟ್ಟ ಕಾರಣ ಕೇವಲ ಪ್ರಚಾರ ಕಾಂಗ್ರೆಸ್ ಸೀಮಿತವಾಗಿದೆ. ಎಂದರು. ಮಾಜಿ ಜಿಲ್ಲಾಧ್ಯಕ್ಷ ರಾಬೀನ್ ದೇವಯ್ಯ, ಮಂಡಲ ಅಧ್ಯಕ್ಷ ಮಾಚಿಮಂಡ ಸುವಿನ್ ಗಣಪತಿ, ವಕ್ತಾರ ಚೆಪ್ಪುಡೀರ ರಾಕೇಶ್ ದೇವಯ್ಯ ಸೇರಿದಂತೆ ಹಲವರು ಮಾತನಾಡಿದರು.

ಮನವಿ ಸ್ವೀಕರಿಸಿದ ಇಲಾಖೆಯ ಮುಖ್ಯ ಅಭಿಯಂತರ ಸತೀಶ್ ಮಾತನಾಡಿ ಡಿಸೆಂಬರ್ ಅಂತ್ಯಕ್ಕೆ, ರಸ್ತೆ ಕಾಮಗಾರಿ ಪೂರ್ಣಗೊಳ್ಳುತ್ತದೆ. ಮಳೆಯಿಂದಾಗಿ ಸಮಸ್ಯೆಯಾಗಿದೆ ಎಂದರು. ಇದರಿಂದ ಆಕ್ರೋಶಿತಗೊಂಡ ಬಿಜೆಪಿಗರು ಸರಿಯಾದ ಮಾಹಿತಿ ನೀಡಿ, ಅಧಿಕಾರಿಗಳು ಸಮರ್ಪಕವಾಗಿ ಕೆಲಸ ನಿರ್ವಹಿಸಿ, ಕೈಗೊಂಬೆಗಳಂತೆ ವರ್ತಿಸಬೇಡಿ, ಜನರ ಆಶೋತ್ತರಗಳಿಗೆ ಸ್ಪಂದಿಸುವ ಕೆಲಸಮಾಡಿ ಎಂದರಲ್ಲದೆ ರಸ್ತೆ ಕಾಮಗಾರಿ ನಡೆಯದೇ ಇದ್ದಲ್ಲಿ ಮುಂದಿನ ದಿನಗಳಲ್ಲಿ ತೀವ್ರವಾಗಿ ಪ್ರತಿಭಟನೆ ನಡೆಸುವ ಎಚ್ಚರಿಕೆ ನೀಡಿದರು.

ಜಿಲ್ಲಾ ಬಿಜೆಪಿ ಉಪಾಧ್ಯಕ್ಷಗುಮ್ಮಟ್ಟೀರ ಕಿಲನ್ ಗಣಪತಿ, ಜಿಲ್ಲಾ ಪ್ರದಾನ ಕಾರ್ಯದರ್ಶಿ ನೆಲ್ಲಿರ ಚಲನ್ ಕುಮಾರ್, ತಾಲೂಕು ಪ್ರಧಾನ ಕಾರ್ಯದರ್ಶಿ ಕುಟ್ಟಂಡ ಅಜಿತ್ ಕರುಂಬಯ್ಯ, ಪಕ್ಷದ ಪ್ರಮುಖರಾದ ರೀನಾ ಪ್ರಕಾಶ್, ಕಾಂತಿ ಸತೀಶ್, ಯಮುನಾ ಚಂಗಪ್ಪ, ಮಾಜಿ ಜಿಲ್ಲಾಧ್ಯಕ್ಷ ರಾಬೀನ್ ದೇವಯ್ಯ, ನಗರ ಅಧ್ಯಕ್ಷ ಅನಿಲ್ ಮಂದಣ್ಣ ಪ್ರಮುಖರಾದ ಕೂತಂಡ ಸಚಿನ್ ಕುಟ್ಟಯ್ಯ, ಶಶಿ ಸುಬ್ರಮಣಿ, ಮಾಚಿಮಂಡ ರವೀಂದ್ರ, ಅನಿತಾ ಪೂವಯ್ಯ, ಜೂನಾ, ಅನಿತಾ ಜಿಲ್ಲಾ ಖಜಾಂಚಿ ಸಂಪತ್, ಅಮ್ಮುಣಿಚಂಡ ರಂಜು ಸೇರಿದಂತೆ ಇತರರಿದ್ದರು.

ಹೊನಲು ಬೆಳಕಿನ ವಾಲಿಬಾಲ್: ಟೌನ್ ಟೈಗರ್ ತಂಡಕ್ಕೆ ಪ್ರಶಸ್ತಿ


ಡೆಕ್ಕನ್ ಯೂತ್ ಕ್ಲಬ್ ಆಯೋಜಿಸಲಾಗಿದ್ದ ಹೊನಲು ಬೆಳಕಿನ ವಾಲಿಬಾಲ್ ಪಂದ್ಯಾಟದಲ್ಲಿ ಟೌನ್ ಟೈಗರ್ ತಂಡ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು.

ನಾಪೋಕ್ಲು, ನ.25– ಇಲ್ಲಿನ ಡೆಕ್ಕನ್ ಯೂತ್ ಕ್ಲಬ್ ಆಯೋಜಿಸಿದ್ದ ಹೊನಲು ಬೆಳಕಿನ ವಾಲಿಬಾಲ್ ಪಂದ್ಯಾಟದಲ್ಲಿ ಟೌನ್ ಟೈಗರ್ ತಂಡ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು.

ವಿಜೇತ ಟೌನ್ ಟೈಗರ್ ತಂಡಕ್ಕೆ ನಗದು ಹಾಗೂ ಆಕರ್ಷಕ ಟ್ರೋಫಿಯನ್ನು, ದ್ವಿತೀಯ ಸ್ಥಾನ ಪಡೆದ ತಂಡಕ್ಕೆ ನಗದು ಹಾಗೂ ಟ್ರೋಫಿಯನ್ನು ವಿತರಿಸಲಾಯಿತು. ಡೆಕ್ಕನ್ ಯೂತ್ ಕ್ಲಬ್ ಅಧ್ಯಕ್ಷ ಜೈನುಲ್ ಆಬಿದ್ ಅಧ್ಯಕ್ಷತೆಯಲ್ಲಿ ಇಲ್ಲಿನ ಕೆಪಿಎಸ್ ಶಾಲಾ ಆಟದ ಮೈದಾನದಲ್ಲಿ ಆಯೋಜಿಸಿದ್ದ ಜಿಲ್ಲಾ ಮಟ್ಟದ ವಾಲಿಬಾಲ್ ಪಂದ್ಯಾಟ ಕಾರ್ಯಕ್ರಮದಲ್ಲಿ ವೇದಿಕೆಯಲ್ಲಿದ್ದ ಗಣ್ಯರು ನಗದು ಹಾಗೂ ಟ್ರೋಫಿಯನ್ನು ವಿತರಿಸಿ ಶುಭ ಹಾರೈಸಿದರು. ಇದಕ್ಕೂ ಮೊದಲು ಗಣ್ಯರು ಕ್ರೀಡಾಪಟುಗಳನ್ನು ಪರಿಚಯಿಸಿಕೊಂಡು, ಬಳಿಕ ಚೆಂಡನ್ನು ಸರ್ವಿಸ್ ಮಾಡುವುದರ ಮೂಲಕ ಕ್ರೀಡಾಕೂಟಕ್ಕೆ ಚಾಲನೆಯನ್ನು ನೀಡಲಾಯಿತು

ಹೊದ್ದೂರು ಗ್ರಾಮ ಪಂಚಾಯಿತಿ ಅಧ್ಯಕ್ಷ ಹಂಸಕೊಟ್ಟ ಮುಡಿ, ವಿಎಸ್‌ಎಸ್‌ಎನ್ ನಿರ್ದೇಶಕ ಅರೆಯಡ ರತ್ನ ಪೆಮ್ಮಯ್ಯ, ಪಂಚಾಯಿತಿ ಮಾಜಿ ಅಧ್ಯಕ್ಷ ಕೆ ಎ ಇಸ್ಮಾಯಿಲ್, ಯುನೆಸ್ ಪಿಎಂ. ರಶೀದ್ ಪಿ. ಎಂ. ಅರಫತ್, ಸಿರಾಜುದ್ದೀನ್ ಚೆರಿಯಪರಂಬು, ಆದಿಲ್, ಅಹ್ಮದ್, ಸಿ. ಎಚ್ ಹಾರೀಸ್, ಆಸ್ಕರ್, ಆಸಿಫ್, ರಶೀದ್ ಪಿ.ಎಂ, ಮಹಮ್ಮದ್ ಅಲಿ, ಅಹಮದ್ ಸಿ ಎಚ್, ಉಪ ಅಧ್ಯಕ್ಷ ಸಂಶು ಕಾರೆಕ್ಕಾಡ್, ಕ್ಲಬ್ ನ ಪದಾಧಿಕಾರಿಗಳು ಹಾಗೂ ಸದಸ್ಯರು, ಕ್ರೀಡಾ ಪ್ರೇಮಿಗಳು ಪಾಲ್ಗೊಂಡಿದ್ದರು.

ಕುರ್ಚಿಗಾಗಿ ಕಸರತ್ತು ವಿರೋಧಿಸಿ ರಾಜ್ಯಾದ್ಯಂತ ಪ್ರತಿಭಟನೆ


ಬಿಜೆಪಿ ರಾಜ್ಯ ಸಹ ಸಂಯೋಜಕ ಎನ್.ವಿ.ಫಣೀಶ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಚಾಮರಾಜನಗರ, ನ.25– ರೈತರ ಸಮಸ್ಯೆಗಳಿಗೆ ಸ್ಪಂದಿಸದೆ ಕುರ್ಚಿಗಾಗಿ ಕಸರತ್ತು ನಡೆಸುತ್ತಿರುವ ರಾಜ್ಯ ಸರ್ಕಾರದ ಧೋರಣೆ ಖಂಡಿಸಿ ಬಿಜೆಪಿ ರಾಜ್ಯಘಟಕದ ವತಿಯಿಂದ ಈ ತಿಂಗಳಾಂತ್ಯದಲ್ಲಿ ವಿಧಾನಸಭೆ ಕ್ಷೇತ್ರವಾರು ಜನಪರ ನೋಟ–ರೈತಪರ ಹೋರಾಟ ಶೀರ್ಷಿಕೆಯಡಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯಬಿಜೆಪಿ ಸಹ ಸಂಯೋಜಕ ಎನ್.ವಿ. ಫಣೀಶ್ ಹೇಳಿದರು.

ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಅತಿವೃಷ್ಟಿಯಿಂದ ಬೆಳೆ ಕಳೆದುಕೊಂಡಿರುವ ರೈತರಿಗೆ ಸೂಕ್ತ ಪರಿಹಾರ ವಿತರಿಸಿಲ್ಲ. ಮೆಕ್ಕೆ ಜೋಳ ಮಾರಾಟ ಮಾಡಲು ರೈತರಿಗೆ ಖರೀದಿ ಕೇಂದ್ರ ತೆಗೆದಿಲ್ಲ. ಬೆಳೆ ಹಾನಿಗೆ ಪರಿಹಾರ ವಿತರಣೆ ಮಾಡುವುದಾಗಿ ಘೋಷಣೆ ಮಾಡಿದ ಸರ್ಕಾರ ಒಂದೂವರೆ ತಿಂಗಳಾದರೂ ಇನ್ನು ವಿತರಿಸಿಲ್ಲ. ರಾಜ್ಯದಲ್ಲಿ ಇಷ್ಟೆಲ್ಲ ಸಮಸ್ಯೆಗಳಿದ್ದರೂ ರಾಜ್ಯ ಸರ್ಕಾರ ಅಧಿಕಾರ ಉಳಿಸಿಕೊಳ್ಳಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹೆಚ್ಚಿನ ಗಮನಹರಿಸುತ್ತಿದ್ದಾರೆ. ರಾಜ್ಯ ಸರ್ಕಾರವನ್ನು ಎಚ್ಚರಿಸಲು ಬಿಜೆಪಿ ರೈತರೊಡಗೂಡಿ ಹೋರಾಟಕ್ಕೆ ಸಜ್ಜಾಗಿದೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ರಾಜ್ಯಾದ್ಯಂತ ನ. 28, 29 ರಂದು ಎಲ್ಲ ತಾಲೂಕು ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಲಾಗುವುದು. ಡಿ. 2 ರಂದು ಚಾಮರಾಜನಗರ ಜಿಲ್ಲಾ ಕೇಂದ್ರದಲ್ಲಿ ಪ್ರತಿಭಟನೆ ನಡೆಯಲಿದೆ ಎಂದರು.


ಲೀಟರ್ ಹಾಲಿಗೆ ಈಗ ಕೊಡುತ್ತಿರುವ 5 ರೂ. ಪ್ರೋತ್ಸಾಹ ಧನದ ಜತೆಗೆ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಣೆ ಮಾಡಿರುವಂತೆ 2 ರೂ.ಸೇರಿ ಒಟ್ಟು 7 ರೂ.ನೀಡಬೇಕು, ಬಾಕಿ ಉಳಿದಿರುವ, ಪ್ರೋತ್ಸಾಹಧನ 620 ಕೋಟಿ ರೂ.ಗಳನ್ನು ತಕ್ಷಣವೇ ಬಿಡುಗಡೆ ಮಾಡಬೇಕು, ಕಿಸಾನ್ ಸಮ್ಮಾನ್ ಯೋಜನೆಯಡಿ ಪ್ರತಿವರ್ಷ ರಾಜ್ಯಸರ್ಕಾರದಿಂದ ರೈತರಿಗೆ ನೀಡುತ್ತಿದ್ದ 4ಸಾವಿರ ರೂ.ಗಳನ್ನು ಪಾವತಿಮಾಡುವ ಯೋಜನೆ ಪುನರ್ ಆರಂಭಿಸಬೇಕು, ರಾಜ್ಯದ ಎಲ್ಲ ಜಿಲ್ಲೆಗಳ ಕಬ್ಬು ಬೆಳೆಗಾರರು ಬೆಳೆಯುವ ಪ್ರತಿಟನ್‌ಗೆ 3300 ರೂ.ನಿಗದಿ ಮಾಡಬೇಕು ಎಂದು ಅವರು ಒತ್ತಾಯಿಸಿದರು.

ಗುಂಡ್ಲುಪೇಟೆ ಮಾಜಿಶಾಸಕ, ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನಕುಮಾರ್ ಮಾತನಾಡಿ, ಜಿಲ್ಲೆಯಲ್ಲಿ ಶೇ 52ರಷ್ಟು ಅರಣ್ಯಪ್ರದೇಶವಿದ್ದು, ಕಾಡಂಚಿನ ಗ್ರಾಮಗಳಲ್ಲಿನ ಜಮೀನುಗಳಿಗೆ ಕಾಡುಪ್ರಾಣಿಗಳು ಲಗ್ಗೆಇಟ್ಟು, ಜನ–ಜಾನುವಾರುಗಳನ್ನು ಬಲಿತೆಗೆದುಕೊಳ್ಳುತ್ತಿವೆ. ಆನೆಗಳ ಕಾಟದಿಂದ ಬೆಳೆ ಕೈಸೇರುತ್ತಿಲ್ಲ, ಇದರ ನಡುವೆ ಸಕಾಲಕ್ಕೆ ಮಳೆಬೆಳೆಯಾಗದೇ ರೈತ ಸಂಕಷ್ಟಕ್ಕೆ ಸಿಲುಕಿದ್ದಾನೆ. ಕೆರೆಗಳಿಗೆ ನೀರು ತುಂಬಿಸುವಂತೆ ಆಗ್ರಹಿಸಿ ಗುಂಡ್ಲುಪೇಟೆ ಭಾಗದ ರೈತರು 35ದಿನಗಳ ರೈತರು ಗುಂಡ್ಲುಪೇಟೆಯಲ್ಲಿ ಅಹೋರಾತ್ರಿ ಧರಣಿ ನಡೆಸಿದ್ದರು, ಅಷ್ಟು ದಿನಗಳ ಅವಧಿಯಲ್ಲಿ ಸಂಸದರು, ಶಾಸಕರು, ಜಿಲ್ಲಾ ಉಸ್ತುವಾರಿ ಸಚಿವರು ಅಹವಾಲು ಆಲಿಸಲು ಬರಲಿಲ್ಲ. 35ದಿನಗಳ ನಂತರ ಜಿಲ್ಲಾಮಟ್ಟದ ಇಲಾಖಾಧಿಕಾರಿಗಳ ಜತೆ ಸ್ಥಳಕ್ಕೆ ಜಿಲ್ಲಾ ಉಸ್ತು ವಾರಿ ಸಚಿವರು, ಶಾಸಕರು, ಏನೋ ಒಂದು ಭರವಸೆ ನೀಡಿ, ಪ್ರತಿಭಟನೆ ಕೈಬಿಡುವಂತೆ ಮನವಿ ಮಾಡಿದ್ದಾರೆ. ಅವರ ಭರವಸೆಗೆ ಪ್ರತಿಭಟನೆ ಕೈಬಿಟ್ಟಿದ್ದಾರೆ. ಇದೇನಾ ಸರ್ಕಾರ ಕ್ಕಿರುವ ರೈತರ ಬಗೆಗಿನ ಕಾಳಜಿ ಎಂದು ಕಿಡಿಕಾರಿದರು.

ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಜಿಪಂ ಮಾಜಿ ಸದಸ್ಯ ಸಿ.ಎನ್.ಬಾಲರಾಜು, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಪಿ.ವೃಷಬೇಂದ್ರಪ್ಪ, ಮೂಡ್ನಾಕೂಡು ಪ್ರಕಾಶ್, ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ಬೇಡರಪುರ ಬಸವಣ್ಣ, ಮಾಧ್ಯಮ್ ಸಹ ಪ್ರಮುಖ್ ರಾಮಸಮುದ್ರ ಶಿವಣ್ಣ ಹಾಜರಿದ್ದರು.

ಜಿನಕನಹಳ್ಳಿಯಲ್ಲಿ ಮನೆಗಳ್ಳತನ, 8 ಲಕ್ಷ ನಗದು ಸೇರಿ ಚಿನ್ನಾಭರಣ ಬೆಳ್ಳಿ ಪದಾರ್ಥ ಕಳವು

ಕ್ರೈಂ ಬಾಕ್ಸ್


ತಾಲೂಕಿನ ಜಿನಕನಹಳ್ಳಿಯಲ್ಲಿ ಮನೆಯಲ್ಲಿದ್ದ ನಗದು, ಚಿನ್ನಾಭರಣ, ಬೆಳ್ಳಿ ಪದಾರ್ಥಗಳನ್ನು ದುಷ್ಕರ್ಮಿಗಳು ದೋಚಿರುವುದು

ಕೊಳ್ಳೇಗಾಲ, ನ.25(ಎನ್‌ಎನ್)– ಮನೆಯ ಮಾಲೀಕರು ಹೊರಗಡೆ ಹೋಗುವುದನ್ನೇ ಹೊಂಚು ಹಾಕಿ ಕಾಯುತ್ತಿದ್ದವರು ಮನೆ ಬೀಗ ಮೀಟಿ ನಗದು, ಚಿನ್ನಾಭರಣ ಹಾಗೂ ಬೆಳ್ಳಿ ಪದಾರ್ಥಗಳು ಕಳ್ಳತನ ಮಾಡಿರುವ ಘಟನೆ ತಾಲೂಕಿನ ಜಿನಕನಹಳ್ಳಿ ಗ್ರಾಮದಲ್ಲಿ ನಿನ್ನೆ ರಾತ್ರಿ ಜರುಗಿದೆ

ತಾಲೂಕಿನ ಜಿನಕನಹಳ್ಳಿ ಗ್ರಾಮದ ನಿವಾಸಿ ರಾಚೇಗೌಡ ರವರ ಮಗ ಗಾರೆ ಕೆಲಸ ಕಾರ್ಮಿಕ ಶಿವಣ್ಣ ಎಂಬುವರ ಮನೆಯಲ್ಲಿ ಕಳ್ಳತನ ನಡೆದಿದೆ. ಮನೆಯ ಬಾಗಿಲಿನ ಬೀಗ ಜಖಂ ಮಾಡಿ ದುಷ್ಕರ್ಮಿಗಳು ಒಳನುಗ್ಗಿ ಗೋದ್ರೇಜ್ ಬೀರುವಿನ ಲಾಕರ್ ಒಡೆದು ಒಳಗಿದ್ದ 8 ಲಕ್ಷ ನಗದು, 118 ಗ್ರಾಂ ಚಿನ್ನಾಭರಣ ಹಾಗೂ 750 ಗ್ರಾಂ ಬೆಳ್ಳಿ ಪದಾರ್ಥಗಳನ್ನು ಕದ್ದೊಯ್ದಿದ್ದಾರೆ.

ನ.22ರಂದು ಮನೆಗೆ ಬೀಗ ಹಾಕಿಕೊಂಡು ಪತ್ನಿ ರಾಜಮ್ಮ ಅವರನ್ನು ಸಂಬಂಧಿಕರ ಮನೆಯಲ್ಲಿ ಬಿಟ್ಟು ಶಬರಿಮಲೆ ದೇವಸ್ಥಾನಕ್ಕೆ ತೆರಳಿದ್ದರು. ನ.25ರಂದು ಸ್ಥಳೀಯರು ಮನೆ ಬೀಗ ಹೊಡೆದಿರುವುದನ್ನ ಗಮನಿಸಿ ಪೊಲೀಸರ ಗಮನಕ್ಕೆ ತಂದರು. ಪೊಲೀಸರು ಶಿವಣ್ಣನ ಪುತ್ರ ರಾಜೇಶನಿಗೆ ಕರೆ ಮಾಡಿ ಮನೆ ಬೀಗ ಹೊಡೆದಿರುವುದನ್ನ ತಿಳಿಸಿದರ ಮೇರೆಗೆ ರಾಜೇಶ್ ಮನೆಗೆ ಬಂದು ಪರಿಶೀಲಿಸಿದಾಗ ಚಿನ್ನಾಭರಣ, ಬೆಳ್ಳಿ ಪದಾರ್ಥಗಳನ್ನು ಕಳವು ಮಾಡಿರುವುದು ಗಮನಕ್ಕೆ ಬಂದಿದೆ.

ಅಪರಾಧ ವಿಭಾಗದ ಸಬ್ ಇನ್ಸ್‌ಪೆಕ್ಟರ್ ಚಲುವರಾಜು, ಮುಖ್ಯ ಪೇದೆ ವಿನೋದ್, ಸೋಮಶೇಖರ್ ತೆರಳಿ ಸ್ಥಳಕ್ಕೆ ಶ್ವಾನದಳ ಹಾಗೂ ಬೆರಳಚ್ಚು ತಜ್ಞರನ್ನು ಕರೆಯಿಸಿ ಮಹಜರ್ ನಡೆಸಿ ಅಪರಾಧಿಗಳ ಪತ್ತೆಗೆ ಮುಂದಿನ ಕ್ರಮಕೈಗೊಂಡಿದ್ದಾರೆ.

ಜಿಂಕೆ ಬೇಟೆ, ಪರಾರಿಯಾಗಿದ್ದ ಆರೋಪಿ ಸೆರೆ; ಬಂದೂಕು, ಮದ್ದಿನ ಪೌಡರ್ ವಶ



ಕೊಳ್ಳೇಗಾಲ, ನ.25(ಎನ್‌ಎನ್)– ಜಿಂಕೆಯನ್ನು ಬೇಟೆಯಾಡಿ ಕೊಂದು ಪರಾರಿಯಾಗಿದ್ದ ಆರೋಪಿಯೋರ್ವನನ್ನು ಸಿಐಡಿ ಅರಣ್ಯ ಸಂಚಾರಿದಳದ ಪೊಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ದೊಡ್ಡಿಂದುವಾಡಿಯ ಶಾಂತರಾಜು ಬಂಧಿತ ಆರೋಪಿ. ಈತ ನ.18ರಂದು ಮಂಗಳವಾರ ನಾಲ್ಕೈದು ಮಂದಿ ಯೊಂದಿಗೆ ವನ್ಯಜೀವಿ ಜಿಂಕೆ ಕೊಂದು ಮಾಂಸವನ್ನು ಪಾಲು ಮಾಡುತ್ತಿದ್ದ ವೇಳೆ ಅರಣ್ಯ ಸಂಚಾರಿದಳದ ಪೊಲೀಸರು ದಾಳಿ ನಡೆಸಿದಾಗ ಈತ ಪರಾರಿಯಾಗಿದ್ದ ಪರಾರಿಯಾಗಿದ್ದ ಆರೋಪಿಯನ್ನು ಬಂಧಿಸಿದ ಪಿಎಸ್ಐ ವಿಜಯ ರಾಜ್ ಮತ್ತು ತಂಡ ಬಂಧಿತ ನಿಂದ ಬೇಟೆಗಾಗಿ ಬಳಸುತ್ತಿದ್ದ ನಾಡ ಬಂದೂಕು, ಸೈಕಲ್ ಬಾಲ್ಸ್‌ಗಳನ್ನು ವಶಕ್ಕೆ ಪಡೆದಿದ್ದು, ಆರೋಪಿ ದೊಡ್ಡಿಂದು ವಾಡಿ ಸಮೀಪದ ಕೋಲ ದೇವನ ಬೆಟ್ಟದ ಬಳಿ ಬಂದೂಕು ಇನ್ನಿತರೆ ಪದಾರ್ಥ ಅವಿಸಿಟ್ಟಿದ್ದಾಗಿ ವಿಚಾರಣೆ ಸಮಯದಲ್ಲಿ ನೀಡಿರುವ ಹೇಳಿಕೆ ಯಲ್ಲಿ ತಿಳಿಸಿದ್ದಾನೆ ಬಂಧಿತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಮುಂದಿನ ಕ್ರಮ ಕೈಗೊಳ್ಳಲಾಗಿದೆ.

ಪಾಸ್ಕಲ್ ನಗರದ ಬಾವಿಯಲ್ಲಿ ಬಿದ್ದಿದ್ದ ಮೇಕೆ, ಹಾವು ರಕ್ಷಣೆ


ಬಾವಿಯಲ್ಲಿ ಬಿದ್ದಿದ್ದ ಹಾವೊಂದನ್ನು ಅಗ್ನಿ ಶಾಮಕ ಠಾಣಾಧಿಕಾರಿಗಳ ಸಹಕಾರದೊಂದಿಗೆ ಉರಗಪ್ರೇಮಿ ಬಾಬು ರಕ್ಷಿಸಿದರು

ಕೊಳ್ಳೇಗಾಲ, ನ.25(ಎನ್‌ಎನ್)– ಬಾವಿಯಲ್ಲಿ ಆಕಸ್ಮಿಕವಾಗಿ ಬಿದ್ದಿದ್ದ ಮೇಕೆ ಮತ್ತು ಹಾವೊಂದನ್ನು ಸುರಕ್ಷಿತವಾಗಿ ರಕ್ಷಿಸುವಲ್ಲಿ ಯಶಸ್ವಿಯಾಗಿದ್ದಾರೆ. ತಾಲೂಕಿನ ಜಾಗೇರಿಯ ಪಾಸ್ಕಲ್ ನಗರದ ನೀಲಮ್ಮ ಎಂಬವರ ಗದ್ದೆಯ ಬಾವಿಯಲ್ಲಿ ಒಂದು ಮೇಕೆ ಮತ್ತು ಬೃಹತ್ ಆಕಾರದ ಕೊಳಕುಮಂಡಲ ಹಾವು ಬಿದ್ದಿತ್ತು. ಈ ಬಗ್ಗೆ ಸುದ್ದಿ ತಿಳಿದು ಅಗ್ನಿಶಾಮಕ ದಳದ ಸಿಬ್ಬಂದಿ ಮತ್ತು ಸ್ನೇಕ್ ಬಾಬು ಸ್ಥಳಕ್ಕೆ ತೆರಳಿ, ಮೇಕೆ ಹಾಗೂ ಹಾವನ್ನು ಸುರಕ್ಷಿತವಾಗಿ ರಕ್ಷಿಸಿದರು. ಮೊದಲಿಗೆ ಅಗ್ನಿಶಾಮಕ ದಳದ ಅಧಿಕಾರಿಗಳ ಸಹಕಾರ ಪಡೆದು ಉರಗಪ್ರೇಮಿ ಬಾಬು ತಾವೇ ಬಾವಿಯಲ್ಲಿ ಹಗ್ಗಕಟ್ಟಿಕೊಂಡು ಇಳಿಯುವ ಮೂಲಕ ಮೊದಲು ಮೇಕೆಯನ್ನು ರಕ್ಷಿಸಿ ಮೇಲಕ್ಕೆ ತಂದರು.ಬಳಿಕ ಚೀಲವೊಂದರಲ್ಲಿ ಹಾವನ್ನು ಹಾಕಿಕೊಂಡು ಅರಣ್ಯಾಧಿಕಾರಿಗಳ ಸಹಕಾರದೊಂದಿಗೆ ಅದನ್ನು ಅರಣ್ಯ ಪ್ರದೇಶಕ್ಕೆ ಬಿಟ್ಟರು.

ಹನುಮ ಜಯಂತಿ: ಪೂರ್ವಭಾವಿ ಸಭೆ

ಗುಂಡ್ಲುಪೇಟೆ, ನ.25(ಸೋಮ್.ಜಿ)– ಇದೇ ಪ್ರಥಮ ಬಾರಿಗೆ ತಾಲೂಕಿನಲ್ಲಿ ಡಿ.27 ರಂದು ಅದ್ದೂರಿ ಹನುಮ ಜಯಂತಿ ಶೋಭಯಾತ್ರೆ ಕಾರ್ಯ ಕ್ರಮ ನಡೆಸಲು ಪಟ್ಟಣದ ವಿಜಯನಾರಾಯಣ ಸ್ವಾಮಿ ದೇವಸ್ಥಾನದಲ್ಲಿ ಪೂರ್ವಭಾವಿ ಸಭೆ ನಡೆಸಲಾಯಿತು.

ಹನುಮ ಜಯಂತಿ ಕಾರ್ಯಕ್ರಮಕ್ಕೆ ಪಕ್ಷಾತೀತವಾಗಿ, ಎಲ್ಲ ಸಮುದಾಯದವರನ್ನು ಒಗ್ಗೂಡಿಸಿಕೊಂಡು ನಡೆಸಬೇಕೆಂದು ತೀರ್ಮಾನಿಸಲಾಯಿತು. ಇದೇ ಶನಿವಾರದಂದು ತಾಲೂಕಿನ ಎಲ್ಲ ಸಮುದಾಯದ ಪ್ರಮುಖರನ್ನ ಪಕ್ಷಾತೀತವಾಗಿ ಕರೆದು ಮತ್ತೊಮ್ಮೆ ಸಭೆ ನಡೆಸಲು ನಿರ್ಧರಿಸಲಾಯಿತು. ಪ್ರತಿ ಗ್ರಾಮಗಳಿಗೆ ತೆರಳಿ ಎಲ್ಲರನ್ನ ಕಾರ್ಯಕ್ರಮಕ್ಕೆ ಆಹ್ವಾನಿಸಬೇಕು, ಅರ್ಥಪೂರ್ಣವಾದ ಹನುಮ ಮೂರ್ತಿಯ ಮೆರವಣಿಗೆ ನಡೆಸಬೇಕು. ಪಕ್ಷ ಭೇದ ಹಾಗೂ ಜಾತಿ ಭೇದಗಳನ್ನ ಬದಿಗಿಟ್ಟು ನಾವೆಲ್ಲರೂ ಹಿಂದೂ ಎಂಬ ಭಾವನೆಯಲ್ಲಿ ಕಾರ್ಯಕ್ರಮ ನಡೆಯಲಿ ಎಂದು ಎಲ್ಲರೂ ತಿಳಿಸಿದರು. ಇಂದಿನ ಪೂರ್ವಭಾವಿ ಸಭೆಯಲ್ಲಿ ನೂರಾರು ಹನುಮ ಭಕ್ತರು ಉಪಸ್ಥಿತರಿದ್ದರು.

ಡಿಕೆಶಿ ಮುಖ್ಯಮಂತ್ರಿಯಾಗಲೆಂದು 501 ಈಡುಗಾಯಿ ಸಮರ್ಪಣೆ

ಚಾಮರಾಜನಗರ, ನ.25–ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಲೆಂದು ಹಾರೈಸಿ ಯುವ ಕಾಂಗ್ರೆಸ್ ಹಾಗೂ ಡಿಕೆಶಿ ಅಭಿಮಾನಿಗಳು ಮಾದಪ್ಪನಿಗೆ ವಿಶೇಷ ಪೂಜೆ ಸಲ್ಲಿಸಿ 501 ಈಡುಗಾಯಿ ಒಡೆದು ಅರ್ಪಿಸಿದರು. ಹನೂರು ತಾಲೂಕಿನ ಮಲೆ ಮಹದೇಶ್ವರ ಬೆಟ್ಟದಲ್ಲಿ ಇಂದು ಡಿ.ಕೆ.ಶಿವಕುಮಾರ ಭಾವಚಿತ್ರ ಇಟ್ಟು ಅಭಿಷೇಕ ಮಾಡಿಸಿದ ನಂತರ ಯುವ ಕಾಂಗ್ರೆಸ್ ಅಭಿಮಾನಿಗಳು ದೇವಸ್ಥಾನದ ಮುಂಭಾಗದಲ್ಲಿ ಈಡುಗಾಯಿ ಒಡೆದರು. ಡಿ.ಕೆ.ಶಿವಕುಮಾರ್‌ಗೆ ಮುಖ್ಯಮಂತ್ರಿ ಕುರ್ಚಿ ದೊರೆಯಲೆಂದು ಮಹದೇಶ್ವರನಿಗೆ ವಿಶೇಷ ಅಭಿಷೇಕ ನೆರವೇರಿಸಿದರು.

ಉಭಯ ನಾಯಕರ ಕಾದಾಟದಿಂದ ಸರ್ಕಾರ ಅಸ್ಥಿರ: ಎನ್. ಮಹೇಶ್



ಕೊಳ್ಳೇಗಾಲ, ನ.25–ಕಾಂಗ್ರೆಸ್ ಪಕ್ಷ ಕಳೆದ ಚುನಾವಣೆಯಲ್ಲಿ 146 ಸ್ಥಾನಗಳಿಸಿ ಬಹುಮತದಿಂದ ಸರ್ಕಾರ ರಚಿಸಿದ್ದರೂ ಸಹ ಆಡಳಿತ ಪಕ್ಷದಲ್ಲೆ ಕುರ್ಚಿಗಾಗಿ ಕಾದಾಟ, ಶಾಸಕ ಖರೀದಿ ನಡೆಯುತ್ತಿರುವುದರಿಂದ ರಾಜ್ಯ ಸರ್ಕಾರ ಅಸ್ಥಿರವಾಗುವ ಸಾಧ್ಯತೆ ಹೆಚ್ಚಿದೆ ಎಂದು ಮಾಜಿ ಸಚಿವ ಎನ್. ಮಹೇಶ್ ಹೇಳಿದ್ದಾರೆ

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಅವರಿಬ್ಬರ ಬಣ ರಾಜಕೀಯ, ಅಧಿಕಾರಕ್ಕಾಗಿ ಕಿತ್ತಾಟದಿಂದಾಗಿ ರಾಜ್ಯ ಸರ್ಕಾರವೇ ಬಿದ್ದು ಹೋದರೂ ಅಚ್ಚರಿಪಡುವಂತಿಲ್ಲ, ಇಬ್ಬರು ನಾಯಕರು ಕುರ್ಚಿಗಾಗಿ ನಡೆಸುತ್ತಿರುವ ಬೆಳವಣಿಗೆಯನ್ನು ರಾಜ್ಯದ ಜನತೆ ವೀಕ್ಷಿಸುತ್ತಿದ್ದಾರೆ, ಅಧಿಕಾರಕ್ಕಾಗಿ ನಡೆಯುತ್ತಿರುವ ಈ ಬೆಳವಣಿಗೆ ನಿಜಕ್ಕೂ ದುರ್ದೈವದ ಸಂಗತಿ ಎಂದು ಸುದ್ದಿಗಾರರ ಬಳಿ ಕಿಡಿಕಾರಿದರು,

ಈ ವಿಚಾರದಲ್ಲಿ ವಾಸ್ತವ ಅರಿವಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ನಿಲುವು ಪ್ರಕಟಿಸಬೇಕಿತ್ತು, ಆದರೆ ಹೈಕಮಾಂಡ್‌ನತ್ತ ಬೊಟ್ಟು ಮಾಡಿರುವುದು ಇಂದಿಗೂ ಕಾಂಗ್ರೆಸ್ ರಾಹುಲ್ ಗಾಂಧಿ, ನೆಹರೂ ಕುಟುಂಬದ ಕೈನಲ್ಲೆ ಇದೆ ಎಂಬುದಕ್ಕೆ ಸಾಕ್ಷಿ ಯಾಗಿದ್ದು ಇದು ಸಂವಿಧಾನಕ್ಕೆ ಮಾಡಿದ ಅಪಚಾರ ಎಂದು ವ್ಯಂಗ್ಯವಾಡಿದರು

ನಿಜಕ್ಕೂ ಎರಡೂವರೆ ವರ್ಷಗಳ ಬಳಿಕ ಅಧಿಕಾರ ಹಂಚಿಕೆ ವಿಚಾರದಲ್ಲಿ ಒಪ್ಪಂದವಾಗಿದ್ದರೆ ಸಿದ್ದರಾಮಯ್ಯ ಅಧಿಕಾರ ಬಿಟ್ಟುಕೊಡಬೇಕಿತ್ತು, ನ.20ರಂದು ನಾಯಕತ್ವ ಬದಲಾವಣೆಯಾಗಬೇಕಿತ್ತು, ಇಲ್ಲವೇ ವಾಸ್ತವ ವಿಚಾರ ಜನತೆಗೆ ತಿಳಿಸುವ ಕೆಲಸ ಮಾಡಬೇಕು, ಅದು ಬಿಟ್ಟು ಇಬ್ಬರು ನಾಯಕರುಗಳು ತಮ್ಮ ಕುರ್ಚಿಗಾಗಿ, ಅಧಿಕಾರಕ್ಕಾಗಿ ಕಿತ್ತಾಟ ನಡೆಸುತ್ತಿರುವುದು, ಆಡಳಿತ ಪಕ್ಷದ ಶಾಸಕರನ್ನೆ ಖರೀದಿಗೆ ಮುಂದಾಗಿರುವುದು ನಿಜಕ್ಕೂ ದುರ್ದೈವದ ಸಂಗತಿ ಎಂದರು. ಬಿಜೆಪಿ ನಾಯಕ ಜನಧ್ವನಿ ವೆಂಕಟೇಶ್, ನಗರಸಭೆ ಮಾಜಿ ಸದಸ್ಯ ಕೆಕೆ ಮೂರ್ತಿ, ಸಿದ್ದಪ್ಪಾಜಿ ಇನ್ನಿತರರಿದ್ದರು

ಮೈಸೂರು ಮಿತ್ರ

ಮೈಸೂರು ಜೈಲಿಗೆ ನಗರ ಪೊಲೀಸರು ದಿಢೀರ್ ದಾಳಿ: ನಿಷೇಧಿತ ವಸ್ತುಗಳ ಜಪ್ತಿ



ಮೈಸೂರು ಕೇಂದ್ರಕಾರಾಗೃಹದಲ್ಲಿ ಮಂಗಳವಾರ ನಗರ ಪೊಲೀಸರು ಪರಿಶೀಲನೆ ನಡೆಸಿದರು.

ಮೈಸೂರು, ನ.25– ಮೈಸೂರು ಕೇಂದ್ರ ಕಾರಾಗೃಹದ ಮೇಲೆ ನಗರ ಪೊಲೀಸರು ಮಂಗಳವಾರ ಮುಂಜಾನೆ ದಿಢೀರ್ ದಾಳಿ ನಡೆಸಿ, ಹಲವು ನಿಷೇಧಿತ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ಡಿಸಿಪಿಗಳಾದ ಬಿಂದುಮಣಿ ಹಾಗೂ ಸುಂದರ್‌ರಾಜ್ ನೇತೃತ್ವದಲ್ಲಿ ನಾಲ್ವರು ಎಸಿಪಿ, ಎಂಟು ಮಂದಿ ಇನ್ಸ್‌ಪೆಕ್ಟರ್‌ಗಳು, 110 ಸಿಬ್ಬಂದಿ, ಎಎಸ್‌ಸಿ ಹಾಗೂ ಶ್ವಾನದಳವನ್ನೊಳಗೊಂಡ ತಂಡವು ಮುಂಜಾನೆ 5 ಗಂಟೆಗೆ ದಾಳಿ ನಡೆಸಿ ಬೆಳಗ್ಗೆ 7.45ರವರೆಗೂ ಇಂಚಿಂಚೂ ಶೋಧ ನಡೆಸಿತು. ಸೆಲ್‌ಗಳು, ಒಳ ಹಾಗೂ ಹೊರ ಆವರಣದಲ್ಲಿ ಪರಿಶೀಲನೆ ನಡೆಸಲಾಯಿತು.

ಪರಿಶೀಲನೆ ವೇಳೆ ಏರ್‌ಟೆಲ್ ಸಿಮ್ ಹೊಂದಿರುವ 1 ಕೀಪ್ಯಾಡ್ ಮೊಬೈಲ್, 1 ಗ್ರಾಂ ಗಾಂಜಾ, 4 ಗಾಂಜಾ ಸೇವಿಸುವ ಪೈಪ್‌ಗಳು, ಬೀಡಿ–ಸಿಗರೇಟ್ ಪೆಟ್ಟಿಗೆಗಳು ಹಾಗೂ 5 ಸಾವಿರ ನಗದು ಪತ್ತೆಯಾಗಿದೆ. ಈ ಸಂಬಂಧ ಮಂಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಿಡಿಎಸ್‌ಪಿ ವಿಷಯ ಕುರಿತು ತರಬೇತಿ ಕಾರ್ಯಕ್ರಮ

ಮೈಸೂರು, ನ.25– ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ವತಿಯಿಂದ BDSP (Businees Development Service Providers) ವಿಷಯದ ಕುರಿತು ತರಬೇತಿ ಕಾರ್ಯಕ್ರಮವನ್ನು ನವೆಂಬರ್ 29 ರಂದು Institute of Engineers, ಮೈಸೂರು ಸಭಾಂಗಣದಲ್ಲಿ ಪೂರ್ವಾಹ್ನ 10.30 ಕ್ಕೆ ಏರ್ಪಡಿಸಲಾಗಿದೆ.

ಸದರಿ ವಿಷಯವು ಸಣ್ಣ, ಅತೀಸಣ್ಣ ಹಾಗೂ ಮಧ್ಯಮ ವರ್ಗದ (ಎಂ.ಎಸ್.ಎಂ.ಇ) ಕೈಗಾರಿಕಾ ಘಟಕಗಳಿಗೆ ಬಹಳ ಉಪಯುಕ್ತವಾಗಿದೆ. ಆದ ಕಾರಣ, ಕೈಗಾರಿಕಾ ಘಟಕಗಳ ಉದ್ದಿಮೆದಾರರು ಈ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ತರಬೇತಿಯ ಪ್ರಯೋಜನವನ್ನು ಪಡೆಯಲು ಕೋರಲಾಗಿದೆ.


ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕೈಗಾರಿಕಾ ಕೇಂದ್ರ, ಸಿ.ಟಿ.ಐ ಕಟ್ಟಡ, ಸಯ್ಯಾಜಿರಾವ್ ರಸ್ತೆ, ಮೈಸೂರು ರವರ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ. ಫೋನ್ ನಂ: 0821–2520886 ನ್ನು ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಲಾಭದ ಆಸೆಗೆ ಆನ್‌ಲೈನ್ ಹೂಡಿಕೆ; 22.84 ಲಕ್ಷ ಪಂಗನಾಮ

ಮೈಸೂರು, ನ.25– ರಿಯಲ್ ಎಸ್ಟೇಟ್ ಉದ್ಯಮಕ್ಕೆ ಆನ್‌ಲೈನ್ ಮೂಲಕ 22.84 ಲಕ್ಷ ರೂ. ಹೂಡಿಕೆ ಮಾಡಿ ವ್ಯಕ್ತಿಯೊಬ್ಬರು ಮೋಸ ಹೋಗಿರುವ ಬಗ್ಗೆ ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಸವೇಶ್ವರನಗರ ನಿವಾಸಿಯೊಬ್ಬರು ಟೆಲಿಗ್ರಾಂ ಸಾಮಾಜಿಕ ಜಾಲತಾಣದಲ್ಲಿ ರಿಯಲ್ ಎಸ್ಟೇಟ್ ಉದ್ಯಮಕ್ಕೆ ಹೂಡಿಕೆ ಮಾಡುವ ಸಂದೇಶವನ್ನು ನಂಬಿ, ಲಿಂಕ್ ಕ್ಲಿಕ್ ಮಾಡಿದ್ದಾರೆ. ನಂತರ ವ್ಯಕ್ತಿಯೊಬ್ಬ ಹೂಡಿಕೆ ಬಗ್ಗೆ ವಿವರಿಸಿದ್ದಾನೆ. ಬಳಿಕ ಟೆಲಿಗ್ರಾಂ ಗ್ರೂಪ್‌ಗೆ ಸೇರಿಸಿದ್ದು, ಅದರಲ್ಲಿ ಹಲವರು ಅತೀ ಹೆಚ್ಚು ಲಾಭ ಬಂದಿದೆ ಎಂಬ ಸುಳ್ಳು ಸಂದೇಶ ಹಂಚಿಕೊಂಡಿದ್ದಾರೆ. ಇದನ್ನು ನಂಬಿ ಇವರೂ ಕೂಡ ವಿವಿಧ ಹಂತಗಳಲ್ಲಿ ಹಣ ಹೂಡಿದ್ದು, ವಿತ್‌ಡ್ರಾ ಮಾಡಿಕೊಳ್ಳಲು ಯತ್ನಿಸಿದಾಗ ಕೇವಲ 15 ಸಾವಿರ ರೂ. ಮಾತ್ರ ಬಂದಿದೆ. ನಂತರ ಪ್ರಕ್ರಿಯೆ ಮುಂದುವರೆಸಲು ಸಾಧ್ಯವಾಗದಿದ್ದಾಗ ವಂಚನೆಗೆ ಒಳಗಾಗಿರುವುದು ಮನವರಿಕೆ ಆಗಿದೆ.

ಹುಟ್ಟುಹಬ್ಬದ ಶುಭಾಶಯ



ವಿಶೇಷ ಮಕ್ಕಳ ಶಾಲೆಯಲ್ಲಿ ಭೋಜನ ವ್ಯವಸ್ಥೆ ಕಲ್ಪಿಸುವ ಮೂಲಕ ಅರ್ಥಪೂರ್ಣವಾಗಿ ಹುಟ್ಟುಹಬ್ಬ ಆಚರಿಸಿಕೊಂಡು ಮೈಸೂರು ನಗರ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿ ಎಂ.ಶ್ರೀನಿವಾಸ್‌ಕುಮಾರ್ ಅವರನ್ನು ಕಾಂಗ್ರೆಸ್ ಮುಖಂಡರು ಅಭಿನಂದಿಸಿದರು. ಈ ವೇಳೆ ಮಾಜಿ ಮೇಯರ್‌ಗಳಾದ ಮೋದಾಮಣಿ, ಟಿ.ಬಿ.ಚಿಕ್ಕಣ್ಣ, ವಿಕ್ರಾಂತ್ ಪಿ.ದೇವೇಗೌಡ, ವಿಶ್ವನಾಥ್, ಸುಧೀರ್, ಚಂದ್ರು ಮೋಹನ್, ಸಂತೋಷ್, ವೆಂಕಟಸುಬ್ಬಯ್ಯ, ಎನ್.ಮನೋಜ್ ಮತ್ತಿತರರು ಉಪಸ್ಥಿತರಿದ್ದರು.

— ಮೈಸೂರಲ್ಲಿ ಯುವ ಜನೋತ್ಸವ —

ನಾನಾ ಕಲಾ ಪ್ರಕಾರಗಳ ಪ್ರದರ್ಶಿಸಿ ಪ್ರತಿಭೆ ಮೆರೆದ ಯುವ ಸಮೂಹ



ಮೈಸೂರಿನ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಯುವಜನೋತ್ಸವ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಪ್ರದರ್ಶಿಸಿದ್ದ ವಿಜ್ಞಾನ ಮಾದರಿ ವಸ್ತುಪ್ರದರ್ಶನವನ್ನು ಪ್ರಾದೇಶಿಕ ಆಯುಕ್ತ ನಿತೀಶ್ ಕುಮಾರ್ ವೀಕ್ಷಿಸುತ್ತಿರುವುದು.

ಮೈಸೂರು,ನ.25(ಎಂಟಿವೈ)– ಮೈಸೂರಿನ ನಜರ್‌ಬಾದ್‌ನಲ್ಲಿ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ಯುವ ಜನೋತ್ಸವದಲ್ಲಿ ಜಿಲ್ಲೆಯ ವಿವಿಧೆಡೆಯಿಂದ ಆಗಮಿಸಿದ್ದ ಯುವಜನರು ವಿಜ್ಞಾನ ವಸ್ತುಪ್ರದರ್ಶನ ದಲ್ಲಿ ವಿವಿಧ ಕಲಾಪ್ರಕಾರಗಳನ್ನು ಪ್ರದರ್ಶಿಸಿ, ಗಮನ ಸೆಳೆದರು.

ಜಿಲ್ಲಾಡಳಿತ, ಜಿ.ಪಂ., ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ನೆಹರು ಯುವ ಕೇಂದ್ರ, ರಾಷ್ಟ್ರೀಯ ಸೇವಾ ಯೋಜನೆ, ಮೈಸೂರು ವಿವಿ, ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ರಾಜ್ಯ ವಿಜ್ಞಾನ ಮತ್ತು ಜ್ಞಾನ ಮಂಡಳಿ ಸಹಯೋಗದಲ್ಲಿ ನಡೆದ ಯುವಜನೋತ್ಸವ ಕಾರ್ಯಕ್ರಮದಲ್ಲಿ ಜಿಲ್ಲೆಯ ವಿವಿಧೆಡೆಯಿಂದ ಸಾವಿರಕ್ಕೂ ಹೆಚ್ಚು ಮಂದಿ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಪಾಲ್ಗೊಂಡು ತಮ್ಮಲ್ಲಿರುವ ಪ್ರತಿಭೆ ಪ್ರದರ್ಶಿಸಿದರು.

ಯುವ ಜನೋತ್ಸವದಲ್ಲಿ ಜಾನಪದ ಗೀತೆ, ಜಾನಪದ ನೃತ್ಯ, ಕಥೆ ಬರೆಯುವ, ಕವನ ಬರೆಯುವ, ಭಾಷಣ ಹಾಗೂ ಚಿತ್ರಕಲೆಯೊಂದಿಗೆ ವಿಜ್ಞಾನ ಮಾದರಿ ಪ್ರದರ್ಶನದ ಸ್ಪರ್ಧೆ ಏರ್ಪಡಿಸಲಾಗಿತ್ತು. ಅದರಲ್ಲೂ ಸಾಂಸ್ಕೃತಿಕ ಕಲಾ ಪ್ರದರ್ಶನದ ಸ್ಪರ್ಧೆಯಲ್ಲಿ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳ ತಂಡ ಕಂಸಾಳೆ, ಡೊಳ್ಳು ಕುಣಿತ, ಮಲೆ ಮಹದೇಶ್ವರರ ರಚಿತ ಗೀತೆಗಳಿಗೆ ನೃತ್ಯ, ಜಾನಪದ ಗೀತೆಗಳ ನೃತ್ಯ ಪ್ರದರ್ಶಿಸಿ ಗಮನ ಸೆಳೆದರು.

ವಿಜ್ಞಾನ ಮಾದರಿಗಳ ಪ್ರದರ್ಶನದಲ್ಲಿ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಆರೋಗ್ಯ, ಸಸ್ಯಶಾಸ್ತ್ರ, ಜೀವಶಾಸ್ತ್ರ ಸೇರಿದಂತೆ ವಿವಿಧ ಬಗೆಯ ಮಾದರಿ ಪ್ರದರ್ಶಿಸಿ, ವಿವರಣೆ ನೀಡಿ ಅವುಗಳ ಬಗ್ಗೆ ಜ್ಞಾನ ಪಸರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ತನ್ವೀರ್ ಸೇಠ್ ಮಾತನಾಡಿ, ವಿದ್ಯಾರ್ಥಿಗಳು ಪಠ್ಯದೊಂದಿಗೆ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ಯುವ ಸಮೂಹ ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆಯಲ್ಲಿ ಪಾಲ್ಗೊಳ್ಳುವುದರಿಂದ ವಿಕಾಸಗೊಳ್ಳಬಹುದು. ಈ ಹಿನ್ನೆಲೆಯಲ್ಲಿ ಶಾಲಾ–ಕಾಲೇಜು ಅವಧಿಯಲ್ಲಿಯೇ ಕ್ರೀಡೆ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಾಧನೆ ಮಾಡಲು ಮುಂದಾಗಬೇಕು ಎಂದು ಸಲಹೆ ನೀಡಿದರು.

ಇದಕ್ಕೂ ಮುನ್ನ ಯುವಜನೋತ್ಸವಕ್ಕೆ ಚಾಲನೆ ನೀಡಿದ ಪ್ರಾದೇಶಿಕ ಆಯುಕ್ತ ನಿತೀಶ್ ಕುಮಾರ್ ಮಾತನಾಡಿ, ಕಠಿಣ ಪರಿಶ್ರಮ, ಆಸಕ್ತಿ, ಕ್ರಿಯಾಶೀಲತೆ ಯಶಸ್ಸಿನ ಮಂತ್ರಗಳು. ವಿದ್ಯಾರ್ಥಿಗಳು ಇವುಗಳನ್ನು ಮೈಗೂಡಿಸಿಕೊಂಡರೆ ಸಾಧನೆಯ ಹಾದಿಯಲ್ಲಿ ಸಾಗಬಹುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ, ಎನ್‌ಎಸ್‌ಎಸ್ ಸಂಯೋಜಕ ಸುರೇಶ್, ಯುವ ಸಮನ್ವಯಾಧಿಕಾರಿ ಅಖಿಲ್, ರಾಷ್ಟ್ರೀಯ ಯುವ ಪ್ರಶಸ್ತಿ ವಿಜೇತ ಇಮ್ರಾನ್ ಬೇಗ್, ಮಹಾರಾಣಿ ವಿಜ್ಞಾನ ಕಾಲೇಜಿನ ಪ್ರಾಂಶುಪಾಲ ಡಾ.ಅಬ್ದುಲ್ ರೆಹಮಾನ್, ಪ್ರಾಧ್ಯಾಪಕ ಗೋವಿಂದರಾಜು ಇನ್ನಿತರರು ಪಾಲ್ಗೊಂಡಿದ್ದರು. ಪ್ರೊ.ಶಿವಲಿಂಗಯ್ಯ, ಶಿವಪ್ರಸಾದ, ಸೆಂಟ್ ಫಿಲೋಮಿನಾದ ಅಲ್ಫೋನ್ ಡಿಸೋಜಾ ತೀರ್ಪುಗಾರರಾಗಿ ಕಾರ್ಯನಿರ್ವಹಿಸಿದರು.

ತೃಪ್ತಿಕರವಾಗಿ ಕೆಲಸ ಮಾಡಿದರೆ ಯಶಸ್ಸು ಸಾಧ್ಯ



ತನ್ವೀರ್ ಸೇಠ್

ಮೈಸೂರು, ನ.25– ಯುವಜನತೆ ಈ ನಾಡಿನ ಕಲೆ, ಸಂಸ್ಕೃತಿ, ಕ್ರೀಡೆಯಲ್ಲಿ ನಿಮಗೆ ಯಾವುದರಲ್ಲಿ ಆಸಕ್ತಿ ಇದೆಯೋ ಅದರಲ್ಲಿ ಧೃಡ ನಿಲುವಿನಿಂದ ನಿಮ್ಮ ಆತ್ಮಕ್ಕೆ ತೃಪ್ತಿಕರವಾಗಿ ಕೆಲಸ ಮಾಡಿದರೆ ಯಶಸ್ಸು ಗಳಿಸಲು ಸಾಧ್ಯ ಎಂದು ಶಾಸಕ ತನ್ವೀರ್ ಸೇಠ್ ತಿಳಿಸಿದರು.

ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ ವತಿಯಿಂದ ಜಿಲ್ಲಾಮಟ್ಟದ ಯುವ ಜನೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಶೈಕ್ಷಣಿಕ ಬೆಳವಣಿಗೆ ಹಾಗೂ ವಿಜ್ಞಾನ ಕ್ಷೇತ್ರದಲ್ಲಿ ಪೋಷಕರು ಮಕ್ಕಳ ಮೇಲೆ ಆಗುವ ಒತ್ತಡದಿಂದ ಅಂಕ ಪಡೆಯುವ ಶಿಕ್ಷಣ ಸ್ಥಾನಮಾನ ತಂದುಕೊಡಬಹುದು. ಆದರೆ ಮೌಲ್ಯಗಳನ್ನು ತಂದು ಕೊಡುವುದಿಲ್ಲ. ವಿದ್ಯಾರ್ಥಿದೆಸೆಯಲ್ಲಿ ಮಾಡುವ ಕೆಲಸಗಳು ಜೀವನ ಪರ್ಯಂತ ಯಾರು ಮಾಡಲು ಸಾಧ್ಯವಿಲ್ಲ. ಸ್ನೇಹ, ಶೈಕ್ಷಣಿಕ ಪೈಪೋಟಿ ಆಸೆ, ಆಕಾಂಕ್ಷೆಗಳು ಸೀಮಿತವಾಗಿರುತ್ತವೆ. ಅದನ್ನು ಪೂರೈಸಿಕೊಳ್ಳಲು ಸಾಕಷ್ಟು ಅವಕಾಶಗಳು ಸಿಗುತ್ತವೆ. ಸೋಲು ಗೆಲುವು ಶಾಶ್ವತವಲ್ಲ. ಬರೀ ಆಸೆ ಇಟ್ಟುಕೊಂಡರೆ ಸಾಲದು, ಸಾಧನೆ ಮಾಡಬೇಕು, ನಿರಂತರ ಪ್ರಯತ್ನ ಮಾಡಿದರೆ ಯಶಸ್ಸು ಗಳಿಸಲು ಸಾಧ್ಯ ಎಂದರು.

ಸಾಂಸ್ಕೃತಿಕ ಸ್ಪರ್ಧೆಯಲ್ಲಿ ವಿಜೇತರಾದವರು

ಅರ್ಚನ ಮತ್ತು ತಂಡ, ದ್ವಿತೀಯ ಸ್ಥಾನ – ಸಂಜಯ್‌ಕುಮಾರ್ ಮತ್ತು ತಂಡ, ತೃತೀಯ – ಶ್ರೀಕಂಠ ಮತ್ತು ತಂಡ, ಜಾನಪದ ಗೀತೆ ಸ್ಪರ್ಧೆ ವಿಜೇತರು : ಪ್ರಥಮ ಸ್ಥಾನ – ಗಹನ ಯುವಕ ಮಂಡಳಿ, ದ್ವಿತೀಯ–ನಮ್ಮ ರಾಗ ತಂಡ, ತೃತೀಯ– ರಕ್ಷಿತಾ ಮತ್ತು ತಂಡ. ಕಥೆ ಬರೆಯುವ ಸ್ಪರ್ಧೆ ವಿಜೇತರು – ಪ್ರಥಮ ಕೃತಿಕಾ, ದ್ವಿತೀಯ – ಆಶಾರಾಣಿಪಾಣಿ, ತೃತೀಯ–ಪ್ರಕೃತಿ. ಚಿತ್ರಕಲೆ ವಿಜೇತರು (ವೈಯಕ್ತಿಕ) – ಪ್ರಥಮ: ನಂದನ, ದ್ವಿತೀಯ: ಶ್ರೀದರ್ಶನ್ ಭಾಸ್ಕರ್ ಮಾಳ್ವಂಕರ್, ತೃತೀಯ: ಜಯನಂದ ಕೆ.ಎಸ್., ಭಾಷಣ ಸ್ಪರ್ಧೆ– ಪ್ರಥಮ: ಆಫ್ನಾನ್ ಪಾಷ, ದ್ವಿತೀಯ : ಶಿವರಾಜು ಎಲ್., ತೃತೀಯ: ಮೋನಿಕಾ ಕೆ., ಕವಿತೆ ಬರೆಯುವುದು – ಪ್ರಥಮ: ರೂಪಶ್ರೀ ಆರ್., ದ್ವಿತೀಯ: ಪ್ರಕೃತಿ ವಿ., ತೃತೀಯ: ಕೃತಿಕಾ, ಇನೋವೇಷನ್ ಟ್ರಾಕ್ ಗುಂಪು – ಪ್ರಥಮ: ಇಶಾಂತ್, ದ್ವಿತೀಯ: ಅರ್ಫಾ ಮತ್ತು ತಂಡ, ತೃತೀಯ: ಲಕ್ಷ್ಮೀ ಹೆಚ್.ಮತ್ತು ತಂಡ.

ಮಹಿಳೆಯರು, ಮಕ್ಕಳಿಗೆ ಸೂಕ್ತ ಭದ್ರತೆಗಾಗಿ ಸಹಿ ಸಂಗ್ರಹ ಅಭಿಯಾನ



ಮೈಸೂರಿನ ಚಿಕ್ಕಗಡಿಯಾರ ಎದುರು ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್‌ಎಸ್) ವತಿಯಿಂದ ಮಂಗಳವಾರ ಸಹಿ ಸಂಗ್ರಹ ಅಭಿಯಾನ ನಡೆಸಲಾಯಿತು.

ಮೈಸೂರು, ನ.25(ಎಂಕೆ)– ರಾಜ್ಯದಲ್ಲಿ ಮಹಿಳೆಯರು ಮತ್ತು ಮಕ್ಕಳ ಮೇಲಿನ ಅಪರಾಧಗಳನ್ನು ತಡೆಗಟ್ಟಿ, ಸೂಕ್ತ ಭದ್ರತಾ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್‌ಎಸ್) ವತಿಯಿಂದ ಸಹಿ ಸಂಗ್ರಹ ಅಭಿಯಾನ ನಡೆಸಲಾಯಿತು.


ಮೈಸೂರಿನ ಚಿಕ್ಕಗಡಿಯಾರ ಎದುರು ಜಮಾಯಿಸಿದ ಸಂಘಟನೆಯ ಕಾರ್ಯಕರ್ತರು, ರಾಜ್ಯದಲ್ಲಿ ಕಳೆದ ನಾಲ್ಕು ತಿಂಗಳಲ್ಲಿ 979 ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಪ್ರಕರಣಗಳು ನಡೆದಿವೆ. ಹೆಣ್ಣು ಭ್ರೂಣ ಹತ್ಯೆಗಳು ನಡೆಯುತ್ತಿವೆ. ರಾಜ್ಯ ಮಾತ್ರವಲ್ಲದೆ ದೇಶದಲ್ಲಿ ಮಹಿಳೆಯರು ಮತ್ತು ಮಕ್ಕಳಿಗೆ ಭದ್ರತೆ ಇಲ್ಲದಂತಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ವರದಕ್ಷಿಣೆ ಕೊಲೆಗಳು ಶೇ.24 ರಷ್ಟು ಹೆಚ್ಚಾಗಿದ್ದು, 2023ರಲ್ಲಿ 6450 ವರದಕ್ಷಿಣೆ ಸಾವಿನ ಪ್ರಕರಣಗಳು ದಾಖಲಾಗಿವೆ 13,479 ಕ್ಕೂ ಹೆಚ್ಚು ವರದಕ್ಷಿಣೆ ಕೊಲೆ ಯತ್ನಗಳ ವರದಿಯಾಗಿವೆ. ಮಹಿಳೆಯರು ಮತ್ತು ಮಕ್ಕಳ ಮೇಲೆ ನಿರಂತರ ದೌರ್ಜನ್ಯ ನಡೆಯುತ್ತಿದ್ದರೂ ಹತ್ತಾರು ಸೆಕ್ಷನ್‌ಗಳಿದ್ದರೂ ಆರೋಪಿಗಳಿಗೆ ಶಿಕ್ಷೆಯಾಗುತ್ತಿಲ್ಲ ಎಂದು ಕಿಡಿಕಾರಿದರು.

ಬಳಿಕ ರಾಜ್ಯದಲ್ಲಿರುವ ಆಡಳಿತ ಸರ್ಕಾರ ಮಹಿಳೆಯರು ಮತ್ತು ಮಕ್ಕಳ ಭದ್ರತೆಗೆ ಸೂಕ್ತ ಕ್ರಮ ಕೈಗೊಳ್ಳಬೇಕು. ಅತ್ಯಾಚಾರಿಗಳ ಪ್ರಕರಣವನ್ನು ತ್ವರಿತವಾಗಿ ನಡೆಸಲು ಫಾಸ್ಟ್ ಟ್ರ್ಯಾಕ್ ಕೋರ್ಟ್‌ಗಳನ್ನು ಸ್ಥಾಪಿಸಿ, ಆರೋಪಿಗಳಿಗೆ ಕಠಿಣ ಶಿಕ್ಷೆಗಳನ್ನು ವಿಧಿಸಬೇಕು. ಅಶ್ಲೀಲ ಸಿನಿಮಾ–ಸಾಹಿತ್ಯ, ಜಾಹಿರಾತು, ವೆಬ್‌ಸೈಟ್, ಮದ್ಯ–ಮಾದಕ ವಸ್ತುಗಳನ್ನು ನಿಷೇಧಿಸಬೇಕು. ಲಿಂಗಭೇದವಿಲ್ಲದ ಶಿಕ್ಷಣ ನೀಡಬೇಕು. ಮಹಿಳೆಯರು ಮತ್ತು ಮಕ್ಕಳ ಕಳ್ಳ ಸಾಗಾಣಿಕೆ ತಡೆಗಟ್ಟಬೇಕು. ಶಿಕ್ಷಣ ಮತ್ತು ಆರೋಗ್ಯದ ಖಾಸಗೀಕರಣ ನಿಲ್ಲಿಸಿ ಎಲ್ಲರಿಗೂ ಶಿಕ್ಷಣ, ಆರೋಗ್ಯ ಮತ್ತು ಉದ್ಯೋಗ ಖಾತರಿಗೊಳಿಸಬೇಕು. ಸುಪ್ರೀಂಕೋರ್ಟ್ ಆದೇಶದಂತೆ ಎಲ್ಲಾ ಸಂಸ್ಥೆಗಳಲ್ಲಿ ಲೈಂಗಿಕ ಕಿರುಕುಳ ವಿರೋಧಿ ಸಮಿತಿಗಳನ್ನು ಸ್ಥಾಪಿಸಬೇಕು ಎಂದು ಒತ್ತಾಯಿಸಿದರು.

ಉತ್ತಮ ಪ್ರತಿಕ್ರಿಯೆ: ಎಐಎಂಎಸ್‌ಎಸ್ ಜಿಲ್ಲಾಧ್ಯಕ್ಷೆ ನಳಿನ ಸಹಿ ಮಾಡುವ ಮೂಲಕಚಾಲನೆ ಪಡೆದ ಸಹಿ ಸಂಗ್ರಹ ಅಭಿಯಾನಕ್ಕೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ನೂರಾರು ಮಂದಿ ಮಹಿಳೆಯರು ಸಹಿ ಮಾಡುವ ಮೂಲಕ ಅಭಿಯಾನಕ್ಕೆ ಬೆಂಬಲ ಸೂಚಿಸಿದರು. ಜಿಲ್ಲಾ ಉಪಾಧ್ಯಕ್ಷೆ ಜಿ.ಎಸ್.ಸೀಮಾ, ಜಿಲ್ಲಾ ಕಾರ್ಯದರ್ಶಿ ಆಸಿಯಾ ಬೇಗಂ, ಸದಸ್ಯರಾದ ಸಿಂಧು ಗೌರಿ, ಪದ್ಮ, ಗಾಯಿತ್ರಿ, ತುಳಸಿ, ಸುಮಾ ಮತ್ತಿತರರಿದ್ದರು.

ಭೀಕರ ರಸ್ತೆ ಅಪಘಾತದಲ್ಲಿ ಐಎಎಸ್ ಅಧಿಕಾರಿ ಮಹಾಂತೇಶ್ ಬೀಳಗಿ ಸಾವು





ಕಲಬುರಗಿ: ಭೀಕರ ರಸ್ತೆ ಅಪಘಾತದಲ್ಲಿ ಐಎಎಸ್ ಅಧಿಕಾರಿ ಮಹಾಂತೇಶ್ ಬೀಳಗಿ ಅವರು ಸಾವನ್ನಪ್ಪಿದ್ದಾರೆ. ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ಗೌನಹಳ್ಳಿ ಬಳಿ ಘಟನೆ ನಡೆದಿದ್ದು, ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಐಎಎಸ್ ಅಧಿಕಾರಿ, ಪ್ರಸ್ತುತ ಬೆಸ್ಕಾಂ ಎಂ.ಡಿ ಆಗಿ ಕಾರ್ಯನಿರ್ವಹಿಸುತ್ತಿದ್ದ ಮಹಾಂತೇಶ್ ಬೀಳಗಿ ಅವರು ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾರೆ.

ಎಂಕೆಎಸ್‌ಗೆ ಸನ್ಮಾನ




ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ರಾಜ್ಯ ನಿರ್ದೇಶಕರಾಗಿ ನೇಮಕಗೊಂಡ ಕಾಂಗ್ರೆಸ್ ಮುಖಂಡ ಲೋಕೇಶ್ ಕುಮಾರ್.ಎಂ(ಮಾದಾಪುರ) ಅವರು ಕೃಷ್ಣರಾಜ ಕ್ಷೇತ್ರದ ಮಾಜಿ ಶಾಸಕ ಎಂ.ಕೆ ಸೋಮಶೇಖರ್ ಅವರನ್ನು ಭೇಟಿಯಾಗಿ, ಅಭಿನಂದಿಸಿದರು. ಈ ವೇಳೆ ಕೆ.ಆರ್.ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ಆಶ್ರಯ ಸಮಿತಿ ಸದಸ್ಯರಾದ ಗುಣಶೇಖರ್, ಮಹ್ಮದ್ ಫಾರೂಖ್, ಕ್ಷೇತ್ರದ ಪರಿಶಿಷ್ಟಜಾತಿ ಘಟಕದ ಸಂಯೋಜಕ ರಾಜಶೇಖರ್, ಮುಖಂಡರಾದ ಕೇರ್ಗಳ್ಳಿ ಕಾಳೇಗೌಡ ,ರಾಜು, ರೂಪೇಶ್, ಬೀರೇಶ್ ಮತ್ತಿತರರಿದ್ದರು.

ಹವಾಮಾನ ವೈಪರೀತ್ಯ, ಇಳುವರಿ ಕುಂಠಿತ ಹಿನ್ನೆಲೆ

ಟೊಮ್ಯಾಟೋ, ನುಗ್ಗೆಕಾಯಿ ಬೆಲೆ ಏರಿಕೆ

ಕಾರ್ತಿಕ ಮುಗಿಯುತ್ತಿದ್ದಂತೆ ಕೋಳಿ ಮಾಂಸ, ಮೊಟ್ಟೆಗೆ ಡಿಮ್ಯಾಂಡ್



ಮೈಸೂರು, ನ.25(ಎಂಕೆ)– ಹವಾಮಾನ ವೈಪರೀತ್ಯ, ಇಳುವರಿ ಕುಂಠಿತದಿಂದಾಗಿ ಟೊಮ್ಯಾಟೊ ಹಾಗೂ ನುಗ್ಗೆಕಾಯಿ ಬೆಲೆ ಏರಿಕೆಯಾಗಿದ್ದು, ಕೋಳಿ ಮೊಟ್ಟೆ ದುಬಾರಿಯಾಗಿದೆ.

ವರ್ಷದಿಂದಲೂ ಚೇತರಿಕೆ ಕಾಣದ ಟೊಮೆಟೊ ಬೆಲೆ ಈಗ ಒಮ್ಮೆಲೆ ದುಪ್ಪಟ್ಟಾಗಿದ್ದು, ಕಳೆದ ವಾರ ಕೆಜಿಗೆ 20 ರೂ.ಇದ್ದದ್ದು, ಈ ವಾರ 50–70 ರೂ.ಗೆ ಜಿಗಿದಿದೆ. ಹಾಗೆಯೇ ಕೆಜಿಗೆ 100 ರೂ.ಇದ್ದ ನುಗ್ಗೆಕಾಯಿ 400–450 ರೂ.ಗೆ ಏರಿಕೆಯಾಗಿರುವುದು ಬಹು ದಿನಗಳ ಬಳಿಕ ಗ್ರಾಹಕರಿಗೆ ಕೊಂಚ ಬಿಸಿ ತಟ್ಟಿದಂತಾಗಿದೆ.

ಚಳಿ ಮತ್ತು ಮಳೆಯಿಂದಾಗಿ ತರಕಾರಿ ಧಾರಣೆ ಇಳಿಕೆಯತ್ತ ಮುಖ ಮಾಡಿದ್ದು, ಬೀನ್ಸ್, ಕ್ಯಾರೆಟ್, ಬೀಟ್‌ರೂಟ್, ಬೆಂಡೆಕಾಯಿ, ಬದನೆಕಾಯಿ, ಈರುಳ್ಳಿ, ಶುಂಠಿ ಬೆಲೆ ಯಥಾಸ್ಥಿತಿಯಲ್ಲಿದ್ದರೆ ಸದ್ದಿಲ್ಲದೆ ಟೊಮ್ಯಾಟೊ, ನುಗ್ಗೆಕಾಯಿ ಹಾಗೂ ತೊಂಡೆಕಾಯಿ ಬೆಲೆ ಹೆಚ್ಚಳವಾಗಿದೆ.

ಅವರೆಕಾಯಿಗೆ ನೂರು!: ಸಂಕ್ರಾಂತಿ ಹಬ್ಬದಂದು ಮನೆ ಮನೆಯಲ್ಲೂ ಸೊಗಡು ಘಮಲು ಹೆಚ್ಚಿಸುವ ಅವರೆಕಾಯಿ ಕೆಜಿಗೆ 50–100 ರೂ.ಗಳಾಗಿದ್ದು, ಅವರೆ ಪ್ರಿಯರ ಜೇಬಿಗೆ ಕತ್ತರಿ ಬಿದ್ದಂತಾಗಿದೆ. ತೊಗರಿ ಕಾಯಿಗೂ ಡಿಮ್ಯಾಂಡ್ ಜಾಸ್ತಿಯಾಗಿದೆ.

ಸದ್ದು ಮಾಡದ ಈರುಳ್ಳಿ: ಗ್ರಾಹಕರ ಕಣ್ಣಲ್ಲಿ ಆಗಾಗ ನೀರು ತರಿಸುತ್ತಿದ್ದ ಈರುಳ್ಳಿ ಬೆಲೆ ಪಾತಾಳಕ್ಕೆ ಇಳಿದಿದೆ. 100 ರೂ.ಗೆ ಗಾತ್ರಕ್ಕೆ ತಕ್ಕಂತೆ 3 ರಿಂದ 5 ಕೆಜಿಯವರೆಗೆ ಮಾರಾಟ ಮಾಡಲಾಗುತ್ತಿದೆ. ಮಾರುಕಟ್ಟೆಗಳಲ್ಲಿ ಮಾತ್ರವಲ್ಲದೆ ನಗರದ ರಸ್ತೆ ಬದಿಗಳಲ್ಲಿ ಈರುಳ್ಳಿ ಮಾರಾಟ ಹೆಚ್ಚಾಗಿದ್ದು, ಗ್ರಾಹಕರು ಖುಷಿಯಿಂದಲೇ ಈರುಳ್ಳಿ ಖರೀದಿಸುತ್ತಿದ್ದಾರೆ.

ಮೊಟ್ಟೆ ದುಬಾರಿ: ಕಾರ್ತಿಕ ಮಾಸ ಮುಗಿಯುತ್ತಿದ್ದಂತೆ ಕೋಳಿ ಮಾಂಸ, ಮೊಟ್ಟೆ ದುಬಾರಿಯಾಗಿದೆ. ಮೈಸೂರಲ್ಲಿ ಕಳೆದ 10 ದಿನಗಳಿಂದ ಲೈವ್ ಚಿಕನ್ ಕೆಜಿಗೆ 240 ರೂ. ಇದ್ದು, ಮೊಟ್ಟೆ ಮತ್ತಷ್ಟು ದುಬಾರಿಯಾಗಿದೆ. ಒಂದಕ್ಕೆ 6.80 ರೂ.ಗೆ ಜಿಗಿದಿದೆ. ಚಿಲ್ಲರೆ ಅಂಗಡಿಗಳಲ್ಲಿ 8 ರೂ.ವರೆಗೂ ಮಾರಾಟ ಮಾಡಲಾಗುತ್ತಿದೆ. ಹಾಗೆಯೇ ಆಹಾರ ಪದಾರ್ಥಗಳ ಬೆಲೆ ಯಥಾಸ್ಥಿತಿಯಲ್ಲಿದ್ದು, ಅಡುಗೆ ಎಣ್ಣೆಯಲ್ಲಿ ಕೊಂಚ ಏರಿಕೆ ಕಂಡುಬಂದಿದೆ. ಸನ್‌ಪ್ಯೂರ್ ಎಣ್ಣೆ 1 ಲೀಟರ್‌ಗೆ 150 ರೂ.ನಂತೆ ಮಾರಾಟ ಮಾಡಲಾಗುತ್ತಿದೆ.

ಹೂ ಬೆಲೆಯಲ್ಲಿ ಏರಿಳಿತ...!

ನಾಳೆ(ನ.26) ಷಷ್ಠಿ ಹಿನ್ನೆಲೆಯಲ್ಲಿ ಹೂವಿನ ಬೆಲೆಯಲ್ಲಿ ಏರಿಕೆಯಾಗಿದ್ದು, ವಾರದ ಆರಂಭದಲ್ಲಿ ಕಡಿಮೆ ಇದ್ದ ಬೆಲೆ ಶುಕ್ರವಾರ ಹಾಗೂ ಇನ್ನಿತರೆ ವಿಶೇಷ ದಿನಗಳಲ್ಲಿ ಹೆಚ್ಚಳವಾಗಲಿದೆ. ಮಾರುಕಟ್ಟೆಯಲ್ಲಿ ಮಾತ್ರವಲ್ಲದೆ ರಸ್ತೆ ಬದಿಯಲ್ಲೂ ಸೇವಂತಿಗೆ ಹೂ ರಾಶಿ ರಾಶಿ ಇಟ್ಟುಕೊಂಡು ಮಾರಾಟ ಮಾಡಲಾಗುತ್ತಿದೆ. ಒಂದು ಮಾರಿಗೆ 50–100 ರವರೆಗೆ ಮಾರಾಟ ಮಾಡಲಾಗುತ್ತಿದೆ.

ಕೆಪಿಎಸ್ ಮ್ಯಾಗ್ನೆಟ್ ಯೋಜನೆಯಡಿ ಮೈಸೂರು ಜಿಲ್ಲೆಯಲ್ಲಿ 1666 ಸರ್ಕಾರಿ ಶಾಲೆಗಳು ಮುಚ್ಚಲು ನಿರ್ಧಾರ

ಪಟ್ಟಿ ಬಿಡುಗಡೆ ಮಾಡಿದ ಎಐಡಿಎಸ್‌ಒ; ಸರ್ಕಾರದ ವಿರುದ್ಧ ಆಡಳಿತ ವೈಫಲ್ಯ ಆರೋಪ



ರಾಜ್ಯ ಸರ್ಕಾರದ ಕೆಪಿಎಸ್ ಮ್ಯಾಗ್ನೆಟ್ ಯೋಜನೆಯಡಿ ಮುಚ್ಚುತ್ತಿರುವ ಸರ್ಕಾರಿ ಶಾಲೆಗಳ ಪಟ್ಟಿಯನ್ನು ಎಐಡಿಎಸ್‌ಒನಿಂದ ಬಿಡುಗಡೆ ಮಾಡಲಾಯಿತು

ಮೈಸೂರು, ನ.25(ಎಂಕೆ)– ರಾಜ್ಯ ಸರ್ಕಾರ ಕೆಪಿಎಸ್ ಮ್ಯಾಗ್ನೆಟ್ ಯೋಜನೆಯಡಿ ಸರ್ಕಾರಿ ಶಾಲೆಗಳನ್ನು ಮುಚ್ಚಲು ಮುಂದಾಗಿದ್ದು, ಅವುಗಳಲ್ಲಿ ಮೈಸೂರು ಜಿಲ್ಲೆಯ ಸುಮಾರು 1,666 ಶಾಲೆಗಳು ಸೇರಿವೆ ಎಂಬುದರ ಮಾಹಿತಿಯುಳ್ಳ ಪಟ್ಟಿಯನ್ನು ಆಲ್ ಇಂಡಿಯಾ ಡೆಮಾಕ್ರೆಟಿಕ್ ಸ್ಟೂಡೆಂಟ್ಸ್ ಆರ್ಗನೈಜೇಷನ್(ಎಐಡಿಎಸ್‌ಒ)ನಿಂದ ಬಿಡುಗಡೆ ಮಾಡಲಾಯಿತು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಎಐಡಿಎಸ್‌ಒ ರಾಜ್ಯ ಖಜಾಂಚಿ ಸುಭಾಷ್ ಬೆಟ್ಟದ ಕೊಪ್ಪ ಬಿಡುಗಡೆ ಮಾಡಿದರು. ಬಳಿಕ ಮಾತನಾಡಿದ ಅವರು, ರಾಜ್ಯದಲ್ಲಿ ಒಂದೇ ಒಂದು ಶಾಲೆಯನ್ನು ಮುಚ್ಚುವುದಿಲ್ಲ ಎನ್ನುವ ಸರ್ಕಾರವು ಕೆಪಿಎಸ್ ಮ್ಯಾಗ್ನೆಟ್ ಯೋಜನೆ ಹೆಸರಿನಲ್ಲಿ 40 ಸಾವಿರಕ್ಕೂ ಅಧಿಕ ಸರಕಾರಿ ಶಾಲೆಗಳನ್ನು ಮುಚ್ಚಲು ಮುಂದಾಗಿದೆ ಎಂದು ತಿಳಿಸಿದರು.

ಪೈಲಟ್ ಪ್ರಾಜೆಕ್ಟ್ ಅಡಿ ಚನ್ನಪಟ್ಟಣ ತಾಲೂಕಿನ ಹೊಂಗನೂರಿನ ಶಾಲೆಯನ್ನು ಕೆಪಿಎಸ್ ಮ್ಯಾಗ್ನೆಟ್ ಶಾಲೆಯೆಂದು ಗುರುತಿಸಲಾಗಿದ್ದು, ಈ ಶಾಲೆಗೆ ಹೊಂಗನೂರಿನಿಂದ 6 ಕಿಮೀ ವ್ಯಾಪ್ತಿಯೊಳಗಿನ 77 ವಿದ್ಯಾರ್ಥಿಗಳಿರುವ ಹೂಡಿಕೆ ಹೊಸಹಳ್ಳಿ ಸರಕಾರಿ ಪ್ರಾಥಮಿಕ ಶಾಲೆ, 82 ವಿದ್ಯಾರ್ಥಿಗಳಿರುವ ಕನ್ನಿ ದೊಡ್ಡಿ ಶಾಲೆ, 31 ವಿದ್ಯಾರ್ಥಿಗಳಿರುವ ಅಮ್ಮಳ್ಳಿ ದೊಡ್ಡಿ ಶಾಲೆ, 100 ವಿದ್ಯಾರ್ಥಿಗಳಿರುವ ಸಂತೆ ಮೊಗೇನಹಳ್ಳಿ ಶಾಲೆ, 20 ವಿದ್ಯಾರ್ಥಿಗಳಿರುವ ಮೊಗೇನಹಳ್ಳಿ ದೊಡ್ಡಿ ಹಾಗೂ 80 ವಿದ್ಯಾರ್ಥಿಗಳಿರುವ ಸಣ್ಣಮಟ್ಟ ಶಾಲೆಗಳನ್ನು ವಿಲೀನಗೊಳಿಸಿ ಆದೇಶಿಸಲಾಗಿದೆ. ಇದರಿಂದ ಸರ್ಕಾರಿ ಶಾಲೆಗಳನ್ನು ಮುಚ್ಚುವುದಲ್ಲದೆ, ಗ್ರಾಮೀಣ ಪ್ರದೇಶದ ಮಕ್ಕಳು ಹಳ್ಳಿಗಳನ್ನು ದಾಟಿ ಶಾಲೆಗೆ ತೆರಳಬೇಕಾದ ಅನಿವಾರ್ಯತೆಯನ್ನು ಸೃಷ್ಟಿ ಮಾಡಲಾಗುತ್ತಿದೆ ಎಂದರು.

ಸರ್ಕಾರಿ ಶಾಲೆಯನ್ನು ಮುಚ್ಚುವುದಿಲ್ಲ, ಅಭಿವೃದ್ಧಿ ಪಡಿಸುತ್ತೇವೆ ಎನ್ನುತ್ತಿರುವ ರಾಜ್ಯ ಸರ್ಕಾರ ವಿಲೀನಗೊಳಿಸಲು ಮುಂದಾಗಿರುವುದು ಕರಾಳ ವಾಸ್ತವ ಸಂಗತಿಯಾಗಿದೆ. ರಾಜ್ಯದಲ್ಲಿ 50 ಸಾವಿರ ಶಿಕ್ಷಕರ ಕೊರತೆ ಇದ್ದು, ನೇಮಕಾತಿ ಬಗ್ಗೆ ತಲೆಕೆಡಿಸಿಕೊಳ್ಳದೆ, ಶಾಲೆಗಳನ್ನು ಅಭಿವೃದ್ಧಿ ಮಾಡದೆ ಮುಚ್ಚಲು ಮುಂದಾಗಿರುವುದು ಖಂಡನೀಯ. ಅಲ್ಲದೆ ಬ್ಯಾಂಕ್‌ನಲ್ಲಿ ನೂರಾರು ಕೋಟಿ ರೂ.ಸಾಲ ಪಡೆದು ಕೆಪಿಎಸ್ ಮ್ಯಾಗ್ನೆಟ್ ಯೋಜನೆ ಜಾರಿಗೊಳಿಸುತ್ತಿರುವುದು ಸರ್ಕಾರದ ಆಡಳಿತ ವೈಫಲ್ಯಕ್ಕೆ ಸಾಕ್ಷಿಯಾಗಿದೆ ಎಂದು ದೂರಿದರು.

ರಾಜ್ಯವ್ಯಾಪಿ ಹೋರಾಟ: ಎಐಡಿಎಸ್‌ಒ ಜಿಲ್ಲಾಧ್ಯಕ್ಷೆ ಚಂದ್ರಕಲಾ ಮಾತನಾಡಿ, ಸರ್ಕಾರಿ ಶಾಲೆಗಳನ್ನು ಉಳಿಸುವಂತೆ ಅಭಿಯಾನದ ಮೂಲಕ 50 ಲಕ್ಷ ಸಹಿ ಸಂಗ್ರಹಿಸಿ, ಶಿಕ್ಷಣ ಸಚಿವರ ಗಮನಕ್ಕೆ ತರಲಾಗಿದೆ. ಆದರೂ ಶಾಲೆಗಳ ವಿಲೀನಕ್ಕೆ ಆದೇಶಿಸಲಾಗಿದೆ. ಈ ನಿಟ್ಟಿನಲ್ಲಿ ಹೋರಾಟವನ್ನು ರಾಜ್ಯಾದ್ಯಂತ ಮುಂದುವರೆಸಲಾಗುವುದು. ವ್ಯಾಪಕ ಪ್ರತಿಭಟನೆಗಳ ಜೊತೆಗೆ ಕಾನೂನು ಹೋರಾಟಕ್ಕೂ ಮುಂದಾಗುತ್ತೇವೆ ಎಂದು ಎಚ್ಚರಿಸಿದರು. ಎಐಡಿಎಸ್‌ಒ ಜಿಲ್ಲಾ ಕಾರ್ಯದರ್ಶಿ ನಿತಿನ್, ಜಿಲ್ಲಾ ಉಪಾಧ್ಯಕ್ಷೆ ಸ್ವಾತಿ, ವಿದ್ಯಾರ್ಥಿನಿಯರಾದ ಚಂದ್ರಿಕಾ, ಶಾಕುಂತಲಾ ಉಪಸ್ಥಿತರಿದ್ದರು.

ಎಂಎಲ್‌ಎಗಳಿಂದ ಹಣ ವಸೂಲಿ...!

ಕೆಪಿಎಸ್ ಶಾಲೆಯಲ್ಲಿ ಉಚಿತ ಶಿಕ್ಷಣ ನೀಡಲಾಗುತ್ತಿದೆ ಎನ್ನುವ ರಾಜ್ಯ ಸರ್ಕಾರದ ಕೆಲವು ಎಂಎಲ್‌ಎಗಳು ಕೆಪಿಎಸ್ ಶಾಲೆಗೆ ದಾಖಲಾತಿ ಪಡೆಯುವ ಪ್ರತೀ ಮಕ್ಕಳಿಂದ 5 ಸಾವಿರ ರೂ. ವಸೂಲಿ ಮಾಡುತ್ತಿದ್ದಾರೆ. ಇದರ ಬಗ್ಗೆ ಸೂಕ್ತ ಮಾಹಿತಿಯನ್ನು ಸಂಗ್ರಹಿಸಲಾಗುವುದು.

– ಸುಭಾಷ್ ಬೆಟ್ಟದಕೊಪ್ಪ, ಎಐಡಿಎಸ್‌ಒ ರಾಜ್ಯ ಖಜಾಂಚಿ

ಮೈಸೂರು ಮಿತ್ರ ಬುಧವಾರ 26 ನವೆಂಬರ್ 2025

ಸರಗೂರು ಅಂಚೆ ಕಚೇರಿಯಲ್ಲಿ ಕೋಟ್ಯಾಂತರ ರೂ. ಗುಳುಂ

ಎರಡನೇ ದಿನವೂ ಖಾತೆದಾರರ ಪ್ರತಿಭಟನೆ



ಸರಗೂರು ಅಂಚೆ ಕಚೇರಿ ಮುಂದೆ ಎರಡನೇ ದಿನವೂ ಮಂಗಳವಾರ ಪ್ರತಿಭಟನೆ ನಡೆಸಲಾಯಿತು,

ಸರಗೂರು: ಪಟ್ಟಣದ ಅಂಚೆ ಕಚೇರಿಯ ಸಿಬ್ಬಂದಿಯೊಬ್ಬರು ಖಾತೆದಾರರ ನಕಲಿ ಸಹಿ ಬಳಸಿ, ಮೂರು ಕೋಟಿಗೂ ಹೆಚ್ಚು ಹಣ ಲಪಟಾಯಿಸಿದ್ದು, ದೂರು ನೀಡಿ 6 ತಿಂಗಳಾದರೂ ತಮ್ಮ ಹಣ ನೀಡಿಲ್ಲ ಎಂದು ಆರೋಪಿಸಿ ಖಾತೆದಾರರು ಸರಗೂರು ಅಂಚೆ ಕಚೇರಿ ಮುಂದೆ ಸೋಮವಾರದಿಂದ ಪ್ರತಿಭಟನೆ ಆರಂಭಿಸಿ ಮಂಗಳವಾರವೂ ಮುಂದುವರೆಸಿದ್ದರು.

ಸರಗೂರು ಅಂಚೆ ಕಚೇರಿಯ ಕೋಟ್ಯಾಂತರ ರೂ. ಜನರ ಹಣ ಗುಳುಂ ಪ್ರಕರಣ ಸಿಬಿಐ ತನಿಖೆಗೆ –ಮುಖಪುಟ

ಪ್ರತಿಭಟನೆಯಲ್ಲಿ ಕಾಂಗ್ರೆಸ್ ಟೌನ್ ಅಧ್ಯಕ್ಷ ಎಸ್.ಎನ್.ನಾಗರಾಜು ಮಾತನಾಡಿ ಆರು ತಿಂಗಳು ಕಳೆದರೂ ಇನ್ನು ಖಾತೆದಾರರಿಗೆ ಹಣ ನೀಡಲು ಅಂಚೆ ಇಲಾಖೆ ಮನಸ್ಸು ಮಾಡುತ್ತಿಲ್ಲ. ಕೂಡಲೇ ಖಾತೆದಾರರಿಗೆ ಅವರ ಠೇವಣಿ ಹಣವನ್ನು ಬಡ್ಡಿ ಸಮೇತ ಕೊಡಿಸಬೇಕು. ನಕಲಿ ಸಹಿ ಮಾಡಿ ಕೋಟ್ಯಾಂತರ ರೂ.ಗಳನ್ನು ದೋಚಿರುವ ವ್ಯಕ್ತಿಗಳು ಸೇರಿದಂತೆ ಪ್ರಕರಣದಲ್ಲಿ ಶಾಮೀಲಾಗಿರುವ ಉನ್ನತಾಧಿಕಾರಿಗಳ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು ಎಂದರು.

ಖಾತೆದಾರರು ವಯೋವೃದ್ಧರು, ನಿವೃತ್ತ ನೌಕರರು, ಮಹಿಳೆಯರು ಹೆಚ್ಚಾಗಿದ್ದು, ಇದರಿಂದ ಅವರ ಜೀವನದ ನಿರ್ವಹಣೆ ಕಷ್ಟಕರವಾಗಿದೆ. ಅವರ ಆರೋಗ್ಯವು ಸರಿ ಇಲ್ಲದೆ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಅವರ ಜೀವಕ್ಕೆ ತೊಂದರೆಯಾದರೆ ಅಂಚೆ ಇಲಾಖೆ ಅಧಿಕಾರಿಗಳೆ ನೇರಹೊಣೆ ಎಂದು ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಆದಿಕರ್ನಾಟಕ ಮಹಾಸಭಾ ಮಾಜಿ ಅಧ್ಯಕ್ಷ ಶಿವಣ್ಣ ಮತ್ತು ಮಾಜಿ ಕಾರ್ಯದರ್ಶಿ ಚನ್ನಿಪುರ ಮಲ್ಲೇಶ್, ಮುಖಂಡರಾದ ಲಂಕೆ ಲಕ್ಷ್ಮಣ ಮಾತನಾಡಿ ಇಷ್ಟೆಲ್ಲಾ ಹಗರಣ ಆಗಿದ್ದರು ಇಲಾಖೆ ಕಣ್ಣು ಮುಚ್ಚಿ ಕುಳಿತಿದೆ. ಅಂಚೆ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿ ಹಣ ಕಳೆದುಕೊಂಡಿರುವ ಖಾತೆಗೆ ಹಣ ಹಾಕಬೇಕು. ನಕಲಿ ಸಹಿ ಮಾಡಿರುವ ವ್ಯಕ್ತಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಆದಿಕರ್ನಾಟಕ ಮಹಾಸಭಾ ಮಾಜಿ ಅಧ್ಯಕ್ಷ ಶಿವಣ್ಣ, ಕಾರ್ಯದರ್ಶಿ ಚನ್ನಿಪುರ ಮಲ್ಲೇಶ್, ಮುಖಂಡರಾದ ಲಂಕೆ ಲಕ್ಷ್ಮಣ, ಖಾತೆದಾರರಾದ ಮುಳ್ಳೂರು ಲೋಕೇಶ್, ಎಸ್.ಆರ್ ಮಹೇಶ್, ಎಸ್.ಎನ್.ಮೋಹನ್ ಕುಮಾರ್, ನಿವೃತ್ತ ಶಿಕ್ಷಕ ಶಾಂಭವಮೂರ್ತಿ, ಮಹದೇವಪ್ಪ, ದಾಸೇಗೌಡರು, ನಿತಿನ್, ಸರಗೂರು ಲೋಕೇಶ್, ಸುಂದರಮ್ಮ, ರಾಜೇಶ್, ಸಿ. ನಾಗರಾಜ್, ಸಿ. ಚೌಡಶೆಟ್ಟಿ, ಶಾಂತಣ್ಣ ವೆಂಕಟೇಶ್, ಅನಂತಶಯನ, ಸುಧಾ, ಜಯಮ್ಮ, ಸರೋಜಮ್ಮ, ಜಿ.ಬಿ.ಶಶಿಕಲಾ, ಜಗದೀಶ್, ವಾಹನ ಚಾಲಕರ ಸಂಘದ ನಿರ್ದೇಶಕರಾದ ಬಿ.ಬೆಟ್ಟನಾಯಕ, ರವಿ.ಎಸ್ ಸೇರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಹಣ ಕಳೆದುಕೊಂಡ ನೊಂದ ಗ್ರಾಹಕರುಗಳು ಭಾಗವಹಿಸಿದ್ದರು.

ಸ್ಥಳದಲ್ಲಿ ಇನ್ಸ್‌ಪೆಕ್ಟರ್ ಪ್ರಸನ್ನ ಕುಮಾರ್, ಸಬ್ ಇನ್ಸ್‌ಪೆಕ್ಟರ್ ಗೋಪಾಲ್ ಮತ್ತು ಸಿಬ್ಬಂದಿಗಳಾದ ಅನಂದ್, ಇಮ್ರಾನ್ ಅಹಮದ್, ಜಗದೀಶ್ ಬಂದೋಬಸ್ತ್ ಮಾಡಿದ್ದರು.

ಅಧಿಕಾರಿಗಳ ಕಣ್ಣ ಮುಂದೆಯೇ ನಡೆಯುತ್ತಿದ್ದ ಕಳಪೆ ರಸ್ತೆ ಡಾಂಬರೀಕರಣ ನಿಲ್ಲಿಸಿದ ಯುವಕರು

ಗುತ್ತಿಗೆದಾರರು-ಯುವಕರ ನಡುವೆ ಮಾತಿನ ಚಕಮಕಿ



ಹೆಚ್.ಡಿ.ಕೋಟೆ: ಅಧಿಕಾರಿಗಳ ಕಣ್ಣ ಮುಂದೆಯೇ ನಡೆಯುತ್ತಿದ್ದ ಕಳಪೆ ಗುಣಮಟ್ಟದ ರಸ್ತೆ ಡಾಂಬರೀಕರಣ ಕಾಮಗಾರಿಯನ್ನು ವಿರೋಧಿಸಿ ಯುವಕರು ಮತ್ತು ಗ್ರಾಮಸ್ಥರು ಕಾಮಗಾರಿ ತಡೆದು ಆಕ್ರೋಶ ವ್ಯಕ್ತಪಡಿಸಿದ ಘಟನೆ ಇಂದು ಸಂಭವಿಸಿದೆ.

ತಾಲೂಕಿನ ಮೈಸೂರು-ಮಾನಂದವಾಡಿ ಮುಖ್ಯ ರಸ್ತೆಯ ಕೇರಳ ಗಡಿಭಾಗವಾದ ಬಾವಲಿ ಗ್ರಾಮದ ಬಳಿ 20 ಕೋಟಿ ರೂ. ವೆಚ್ಚದ 10 ಕಿಲೋ ಮೀಟರ್ ಡಾಂಬರ್ ರಸ್ತೆ ಕಾಮಗಾರಿ ಆರಂಭಗೊಂಡಿದ್ದು, ಅಧಿಕಾರಿಗಳು ಸ್ಥಳದಲ್ಲೇ ಇದ್ದರೂ ಅಧಿಕಾರಿಗಳ ಎದುರೇ ಗುತ್ತಿಗೆದಾರ ಕಳಪೆ ಗುಣಮಟ್ಟದ ಕಾಮಗಾರಿ ಮಾಡುತ್ತಿರುವುದನ್ನು ಗಮನಿಸಿದ ಸ್ಥಳೀಯ ಯುವಕರುಗಳು ಪ್ರಶ್ನಿಸಿ, ಕಾಮಗಾರಿಯನ್ನು ಸ್ಥಗಿತಗೊಳಿಸಿ ಎಂದು ಒತ್ತಾಯಿಸಿದರು.

ಯುವಕರ ಮಾತಿಗೆ ಕಿವಿಗೊಡದೆ ಕಾಮಗಾರಿ ಮುಂದುವರೆಸಿದಾಗ ಆಕ್ರೋಶಗೊಂಡ ಯುವಕರು ಕಳಪೆ ಕಾಮಗಾರಿ ಮಾಡುತ್ತಿರುವ ಡಾಂಬರ್ ರಸ್ತೆಯನ್ನು ಕೈಯಲ್ಲಿ ಕಿತ್ತುಹಾಕಿ ಅಧಿಕಾರಿಗಳಿಗೆ ತೋರಿಸಿದ್ದಾರೆ. ಈ ವೇಳೆ ಗುತ್ತಿಗೆದಾರ ಹಾಗೂ ಯುವಕರ ನಡುವೆ ಮಾತಿನ ಚಕಮಕಿ ನಡೆದು ಯುವಕರುಗಳು ಕಾಮಗಾರಿಯನ್ನು ಸಂಪೂರ್ಣ ಸ್ಥಗಿತಗೊಳಿಸಿದ್ದಾರೆ.

ಇತ್ತೀಚಿಗಷ್ಟೇ ಈ ಭಾಗದಲ್ಲಿ ರಸ್ತೆ ಅವ್ಯವಸ್ಥೆಯಿಂದ ಕೂಡಿದ್ದು ಜನತೆಗೆ ಓಡಾಡಲು ತೊಂದರೆ ಉಂಟಾಗುತ್ತಿದ್ದ ಈ ಸಂಬಂಧ ಶಾಸಕ ಅನಿಲ್ ಚಿಕ್ಕಮಾದು ಅವರಿಗೆ ರಸ್ತೆ ಸರಿಪಡಿಸಿ ಕೊಡಿ ಎಂದು ಒತ್ತಾಯಿಸಿದ ಹಿನ್ನೆಲೆಯಲ್ಲಿ ಶಾಸಕ ಅನಿಲ್ ಚಿಕ್ಕಮಾದು ಅವರು ಸುಮಾರು 20 ಕೋಟಿ ವೆಚ್ಚದ, 10 ಕಿ.ಮೀ ರಸ್ತೆಗೆ ಭೂಮಿ ಪೂಜೆ ನೆರವೇರಿಸಿದ್ದರು.

ಭೂಮಿ ಪೂಜೆ ನೆರವೇರಿಸಿ ಅಧಿಕಾರಿಗಳಿಗೆ ಹಾಗೂ ಗುತ್ತಿಗೆದಾರರಿಗೆ ಗುಣಮಟ್ಟದ ಕಾಮಗಾರಿ ಮಾಡುವಂತೆ ಸೂಚಿಸಿದ್ದರು ಆದರೆ ಅಧಿಕಾರಿಗಳು, ಗುತ್ತಿಗೆದಾರರು, ಶಾಸಕರ ಮಾತಿಗೆ ಕ್ಯಾರೆ ಎನ್ನದೆ ಅವರ ಇಷ್ಟ ಬಂದಂಗೆ ಕಳಪೆ ಕಾಮಗಾರಿ ಮಾಡುತ್ತಿದ್ದಾರೆ ಎಂದು ಈ ಭಾಗದ ಜನತೆ ಆರೋಪಿಸಿದ್ದಾರೆ.

ಅಧಿಕಾರಿಗಳು, ಗುತ್ತಿಗೆದಾರನಿಗೆ ಕಳಪೆ ಕಾಮಗಾರಿ ಮಾಡುತ್ತಿರುವುದಕ್ಕೆ ನೋಟಿಸ್ ನೀಡಿದ್ದೇವೆ ಎಂದು ಹೇಳುತ್ತಾರೆ. ಆದರೆ ಯಾವ ನೋಟಿಸ್ ನೀಡಿಲ್ಲ. ಶಾಸಕ ಅನಿಲ್ ಚಿಕ್ಕಮಾದು ಗುಣಮಟ್ಟದ ಕಾಮಗಾರಿ ಮಾಡಿ ಎಂದು ತಿಳಿಸಿದ್ದರೂ ಕೂಡ ಅವರ ಮಾತಿಗೆ ಬೆಲೆಕೊಡದೆ ಇಂಥ ಕಳಪೆ ಕಾಮಗಾರಿ ಮಾಡುತ್ತಿದ್ದಾರೆ. ಶಾಸಕ ಅನಿಲ ಚಿಕ್ಕಮದು ಅವರು ಸ್ಥಳ ಪರಿಶೀಲನೆ ಮಾಡಿ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಂಡು ಗುಣಮಟ್ಟದ ಡಾಂಬರ್ ರಸ್ತೆ ಮಾಡಿಸಲು ಮುಂದಾಗಬೇಕು. –ಗ್ರಾಮಸ್ಥರು.

ಸ್ಥಳೀಯ ಸಂಸ್ಥೆ ಚುನಾವಣೆಗೆ ಸಜ್ಜಾಗಲು ಕರೆ



ಮಾಜಿ ಶಾಸಕ ಹರ್ಷವರ್ಧನ್ ಸ್ವದೇಶಿ ಸ್ಟಿಕ್ಕರ್‌ಗಳನ್ನು ಮನೆ ಮನೆಗೆ ಅಂಟಿಸುವ ಕಾರ್ಯಕ್ಕೆ ಚಾಲನೆ ನೀಡಿದರು.

ಮಲ್ಲುಂಡಿ: ಮುಂಬರುವ ತಾಪಂ, ಜಿಪಂ, ಗ್ರಾಪಂ ಚುನಾವಣೆಗೆ ಸಜ್ಜಾಗಿ ಎಂದು ಬಿಜೆಪಿ ಕಾರ್ಯಕರ್ತರಿಗೆ ಮಾಜಿ ಶಾಸಕ ಬಿ.ಹರ್ಷವರ್ಧನ್ ಕರೆ ನೀಡಿದರು.

ನಂಜನಗೂಡು ವಿಧಾನ ಸಭಾ ಕ್ಷೇತ್ರದ ಹುರ ಮಹಾಶಕ್ತಿ ಕೇಂದ್ರವ್ಯಾಪ್ತಿಯ ಮಲ್ಲುಂಡಿ, ಹುಲ್ಲಹಳ್ಳಿ, ಹೆಗ್ಗಡಹಳ್ಳಿ ಶಕ್ತಿ ಕೇಂದ್ರದ ವ್ಯಾಪ್ತಿಯ ಗ್ರಾಮಗಳಿಗೆ ಭೇಟಿ ನೀಡಿ ಆತ್ಮನಿರ್ಭರ ಅಡಿಯ ಸ್ವದೇಶಿ ಸ್ಟಿಕ್ಕರ್‌ಗಳನ್ನು ಮನೆ ಮನೆಗೆ ಅಂಟಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಬೇರೆ ದೇಶದಲ್ಲಿ ಉಪಯೋಗಿಸುವ ಪದಾರ್ಥಗಳನ್ನು ಬಳಸುವುದನ್ನು ಬಿಟ್ಟು ಸ್ವದೇಶಿಯ ವಸ್ತುಗಳನ್ನು ಉಪಯೋಗಿಸುವ ದೃಷ್ಟಿಯಿಂದ ದೇಶದಲ್ಲಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ದೇಶದ ಅಭಿವೃದ್ಧಿಗೆ ಪ್ರಧಾನಿ ನರೇಂದ್ರಮೋದಿಯವರು ಪಣ ತೊಟ್ಟು ನಿಂತಿದ್ದಾರೆ ಅವರು 3 ಬಾರಿ ಪ್ರಧಾನಿಯಾಗಿ ದೇಶಕ್ಕೆ ಉತ್ತಮ ಆಡಳಿತ ನೀಡುತ್ತಿದ್ದಾರೆ ಎಂದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಯಾವುದೇ ಅಭಿವೃದ್ಧಿ ಕಾಣದೆ ಸಿಎಂ ಕುರ್ಚಿಗಾಗಿ ಡಿ.ಕೆಶಿವಕುಮಾರ್ ಹಾಗೂ ಸಿದ್ದರಾಮಯ್ಯ ಕಿತ್ತಾಟವಾಡುವ ಪರಿಸ್ಥಿತಿ ಉಂಟಾಗಿದೆ. ಇದರಿಂದ ರಾಜ್ಯದಲ್ಲಿ ಅಭಿವೃದ್ಧಿ ಶೂನ್ಯವಾಗಿದೆ. ಡಿ.ಕೆಶಿವಕುಮಾರ್ ಅವರು ನಮ್ಮ ಬಿಜೆಪಿ ಪಕ್ಷದ ವರಿಷ್ಠರ ಜೊತೆ ಯಾವುದೇ ಸಂಪರ್ಕ ಹೊಂದಿಲ್ಲ. ಇಲ್ಲ ಸಲ್ಲದ ಸುದ್ದಿಗಳಿಗೆ ನಮ್ಮ ಬಿಜೆಪಿ ಪಕ್ಷದ ಕಾರ್ಯಕರ್ತರು ಕಿವಿಗೊಡುವುದನ್ನು ಬಿಟ್ಟು ಮುಂಬರುವ ಚುನಾವಣೆಗೆ ಸಜ್ಜಾಗಿ ಎಂದರು.

ಕೇಂದ್ರ ಸರ್ಕಾರದ ಜನಪರ ಯೋಜನೆಗಳನ್ನು ಮನೆ ಮನೆಗೆ ತಲುಪಿಸುವ ಕೆಲಸವನ್ನು ಕಾರ್ಯಕರ್ತರು ಮಾಡಬೇಕಾಗಿದೆ. ಸಿಎಂ ಸ್ಥಾನಕ್ಕಾಗಿ ಕಿತ್ತಾಡುವುದನ್ನು ಬಿಟ್ಟು ರಾಜ್ಯದ ಜನರ ಪರ ಹಾಗೂ ಅಭಿವೃದ್ಧಿ ಕೆಲಸ ಮಾಡಲು ಮುಂದಾಗಿ ಎಂದು ತಿಳಿಸಿದರು.

ಈ ವೇಳೆ ಬಿಜೆಪಿ ಗ್ರಾಮಾಂತರ ಜಿಲ್ಲಾಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ, ತಾಲೂಕು ಅಧ್ಯಕ್ಷ ಹೆಚ್ ಎಂ ಕೆಂಡಗಣ್ಣಪ್ಪ, ಪ್ರಧಾನ ಕಾರ್ಯದರ್ಶಿ ವಳಗರೆ ಪುಟ್ಟಸ್ವಾಮಿ, ಪಿ.ಮಹೇಶ್, ತಾಪಂ ಮಾಜಿ ಸದಸ್ಯ ಎಸ್ ಬಸವರಾಜ್, ಶಕ್ತಿ ಕೇಂದ್ರದ ಅಧ್ಯಕ್ಷ ಗುರು ಪ್ರಸಾದ್,ಶಿವಣ್ಣ, ಗ್ರಾಪಂ ಸದಸ್ಯ ಮಲ್ಲಿಕಾರ್ಜುನ, ಪರಶಿವಮೂರ್ತಿ, ಬೈರನಾಯಕ, ನಾಗೇಂದ್ರ, ವರದರಾಜು, ರಮೇಶ್, ಮಹದೇವ್, ಮಂಜು ಇದ್ದರು.

ಜೀವನ ನೀಡಿದ ಮಾತೃಭಾಷೆ ಕನ್ನಡವನ್ನು ಎಲ್ಲೆಡೆ ಬಳಸಿ



ತಲಕಾಡಿನ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಕನ್ನಡ ರಾಜ್ಯೋತ್ಸವ ಪ್ರಯುಕ್ತ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಗಣ್ಯರನ್ನು ಸನ್ಮಾನಿಸಿದರು.

ತಿ.ನರಸೀಪುರ, ನ.25– ಕನ್ನಡ ಭಾಷೆಗೆ ಬಹು ದೊಡ್ಡ ಇತಿಹಾಸ ಇದೆ. ಕನ್ನಡ ಭಾಷೆಯ ಸಾರ್ವಭೌಮ, ಕನ್ನಡ ಭಾಷೆ ಹುದ್ದೆ, ನೆಲೆ ಮತ್ತು ಜೀವನ ಎಲ್ಲವನ್ನು ನಮ್ಮ ಮಾತೃಭಾಷೆ ಕನ್ನಡ ನೀಡಿದೆ. ಎಲ್ಲಾದರೂ ಎಂತಾದರು ಇರು ನೀ ಕನ್ನಡವಾಗಿರು ಎಂಬಂತೆ ಯಾವುದೇ ಸ್ಥಳದಲ್ಲಾಗಲಿ ನಾವು ಕನ್ನಡವನ್ನು ಬಳಸಬೇಕು ಎಂದು ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಹೆಳವರ ಹುಂಡಿ ಸಿದ್ದಪ್ಪ ಹೇಳಿದರು

ತಲಕಾಡಿನ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಕನ್ನಡ ರಾಜ್ಯೋತ್ಸವ ಪ್ರಯುಕ್ತ ಶ್ರೀ ಬಂಡರಸಮ್ಮ ದೇವಾಲಯದ ಆವರಣದಲ್ಲಿ ವಾಟಾಳ್ ಶ್ರೀಗಳಾದ ಡಾ.ಶ್ರೀ ಸಿದ್ದಲಿಂಗ ಶಿವಾಚಾರ್ಯ ಸ್ವಾಮಿಗಳು ಹಾಗೂ ಮುಡುಕುತೊರೆ ಕಲ್ಲು ಮಠದ ಶ್ರೀ ನಂಬಿಕೇಶ್ವರ ಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ಅರ್ಥಪೂರ್ಣವಾಗಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಸನ್ಮಾನವನ್ನು ಸ್ವೀಕರಿಸಿ ಮಾತನಾಡಿದರು

ಕನ್ನಡ ರಾಜ್ಯೋತ್ಸವ ಉದ್ಘಾಟಿಸಿದ ನಿವೃತ್ತ ನ್ಯಾಯಮೂರ್ತಿ ಟಿ.ಜಿ.ಶಿವಶಂಕರೇಗೌಡ ಮಾತನಾಡಿ ತಮ್ಮ ಶಾಲಾ ದಿನಗಳ ಕನ್ನಡ ರಾಜ್ಯೋತ್ಸವ ಆಚರಣೆ, ಸೊಬಗು ಮತ್ತು ಮನರಂಜನೆಗಳು ಸವಿಯನ್ನು ಮೆಲುಕು ಹಾಕಿದರು. ಮುಂದಿನ ದಿನಗಳಲ್ಲಿ ನನ್ನ ಗ್ರಾಮದ ಒಳಿತಿಗಾಗಿ ನಾನು ಸದಾ ಮುಂದೆ ಬಂದು ನನ್ನಿಂದ ಆಗುವ ಕೆಲಸ ಮಾಡುವೆ ಹಾಗೂ ಕನ್ನಡ ಭವನಕ್ಕೆ ನೆರವು ನೀಡಿ ಭವನದ ನಿರ್ಮಾಣಕ್ಕೆ ಕೈಜೋಡಿಸುವೆ ಕನ್ನಡದ ಕಾರ್ಯಕ್ರಮಗಳಲ್ಲಿ ಜಿಲ್ಲೆಗೆ ತಲಕಾಡು ಹೋಬಳಿ ಕಸಾಪ ಘಟಕದ ಮಾದರಿಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರಾದ ಮೈಸೂರು ಜಿಲ್ಲಾ ಒಕ್ಕಲಿಗ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಟಿ.ಆರ್. ಕೃಷ್ಣೇಗೌಡ, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾಕ್ಟರ್ ಹೆಳವರ ಹುಂಡಿ ಸಿದ್ದಪ್ಪ, ರಂಗಾಯಣದ ಹವ್ಯಾಸಿ ಕಲಾವಿದ ಹಾಗೂ ತಂತ್ರಜ್ಞ ತಲಕಾಡು ರಾಜೇಶ್, ಚಿನ್ನದ ಪದಕ ವಿಜೇತೆ ತೇಜಸ್ವಿನಿ ಸತ್ತೆಗಾಲ, ಉನ್ನತ ಸರ್ಕಾರಿ ಸೇವೆ ಟಿಎಂ.ಮಹದೇವಮೂರ್ತಿ, ಹಾಗೂ ಸಮಾಜ ಸೇವೆಗೆ ಚಿಕ್ಕಹೊನ್ನಯ್ಯ, ಜಿ ನಾಗರಾಜ್, ಕುಮಾರ್‌ಸ್ವಾಮಿ ರವರನ್ನು ವಿಶೇಷವಾಗಿ ಸನ್ಮಾನಿಸಲಾಯಿತು.

ರಾಜ್ಯೋತ್ಸವದ ಮೆರವಣಿಗೆಗೆ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕನ್ನಡ ಪುಟ್ಟಸ್ವಾಮಿ ಚಾಲನೆ ನೀಡಿದರು.

ತಲಕಾಡು ಹೋಬಳಿ ಘಟಕದ ಅಧ್ಯಕ್ಷ ವೆಂಕಟೇಶ್ ಮೂರ್ತಿ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಗ್ರಾಪಂ ಅಧ್ಯಕ್ಷ ಶೋಭಾ ಮಲ್ಲಣ್ಣ, ಸಾಹಿತಿ ಡಾ.ಜಯಪ್ಪ ಹೊನ್ನಾಳಿ, ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ದೇವರಾಜ್ ಸಮರ್ಪಣಾ ಶಾಲೆಯ ಆನಂದ್ ದೀಕ್ಷಿತ್, ಪ್ರಾಂಶುಪಾಲರುಗಳಾದ ಡಾ.ವಸಂತ್‌ರಾಜ್, ರಮೇಶ್, ಚಲನಚಿತ್ರ ಛಾಯಾಗ್ರಾಹಕ ತಲಕಾಡು ಪ್ರೇಮ್ ಕುಮಾರ್, ನಿವೃತ್ತ ಪೊಲೀಸ್ ಅಧಿಕಾರಿ ಶಿವಶಂಕರ್, ಅಡ್ವಕೇಟ್ ದುರ್ಗಾ ಪ್ರಸಾದ್, ಮಾನಸ ಗಂಗೋತ್ರಿ ಶಾಲೆಯ ಮುಖ್ಯಸ್ಥ ರಾಮೇಗೌಡ, ಶ್ರೀನಿವಾಸರಾವ್, ನರೇಂದ್ರ ಉಪಸ್ಥಿತರಿದ್ದರು.

ರಾಜ್ಯದಲ್ಲಿ ಮುಂದೆ ಬಿಜೆಪಿ, ಜೆಡಿಎಸ್ ಮೈತ್ರಿಕೂಟ ಅಧಿಕಾರಕ್ಕೆ



ಶ್ರೀರಾಮಮಂದಿರದ ವಾರ್ಷಿಕೋತ್ಸವದಲ್ಲಿ ಮಾಜಿ ಸಚಿವ ಸಾ.ರಾ.ಮಹೇಶ್ ಮಾತನಾಡಿದರು.

ಕೆ.ಆರ್.ನಗರ: ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಮತ್ತು ಜಾ.ದಳ ಮೈತ್ರಿಕೂಟ ಅಧಿಕಾರ ಹಿಡಿದು ಮೈತ್ರಿಕೂಟದ ಅಭ್ಯರ್ಥಿ ಮುಖ್ಯಮಂತ್ರಿಯಾಗುವುದನ್ನು ಯಾರಿಂದಲೂ ತಪ್ಪಿಸಲು ಸಾಧ್ಯವಿಲ್ಲ ಎಂದು ಮಾಜಿ ಸಚಿವ ಸಾ.ರಾ. ಮಹೇಶ್ ಭವಿಷ್ಯ ನುಡಿದರು.

ತಾಲೂಕಿನ ಹಂಪಾಪುರ ಗ್ರಾಮದಲ್ಲಿ ನಾಡಪ್ರಭು ಕೆಂಪೇಗೌಡ ಯುವಕರ ಸಂಘದ ವತಿಯಿಂದ ಏರ್ಪಡಿಸಲಾಗಿದ್ದ ಶ್ರೀ ರಾಮ ಮಂದಿರದ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು.

ಹಿಂದೆ ಇದ್ದ ಕುಮಾರಸ್ವಾಮಿ ಸೇರಿದಂತೆ ಹಲವಾರು ಮುಖ್ಯಮಂತ್ರಿಗಳು ಉತ್ತಮ ಆಡಳಿತ ನೀಡಿದ್ದರು. ಆದರೆ, ಈಗಿನ ಮುಖ್ಯಮಂತ್ರಿಗಳು ಆರೂವರೆ ಲಕ್ಷ ಕೋಟಿ ರೂ. ಸಾಲ ಮಾಡಿ ಜನತೆಯ ತಲೆಯ ಮೇಲೆ ಸಾಲದ ಹೊರೆ ಹೊರಿಸಿರುವುದು ಮತ್ತು ನಾಡಿನ ಜನತೆಗೆ ಬೆಲೆ ಏರಿಕೆಯ ಹೊರೆ ಹೊರಿಸಿರುವುದು ದೊಡ್ಡ ಸಾಧನೆಯಾಗಿದೆ ಎಂದು ಆರೋಪಿಸಿದ ಸಾ.ರಾ.ಮಹೇಶ್ ಸರ್ಕಾರದ ಬೊಕ್ಕಸ ಬರಿದಾಗಿದ್ದು ಜನತೆಯ ಕಲ್ಯಾಣಕ್ಕೆ ಹಣವಿಲ್ಲದಾಗಿದೆ ಎಂದರು.

ಈಗಿನ ಸರಕಾರ ಸಾಮಾನ್ಯ ಜನರು ಉಪಯೋಗಿಸುವ ಎಲ್ಲಾ ಪದಾರ್ಥಗಳಿಗೆ ಬೆಲೆ ಏರಿಕೆ ಮಾಡಿರುವುದೆ. ದೊಡ್ಡ ಸಾಧನೆಯಾಗಿದ್ದು 2028ಕ್ಕೆ ಜನತೆ ಇವರಿಗೆ ತಕ್ಕ ಪಾಠ ಕಲಿಸಲಿದ್ದು ಬಿಜೆಪಿ, ಜಾ.ದಳ ಮೈತ್ರಿಕೂಟ ಅಧಿಕಾರಕ್ಕೆ ಬರಲಿದೆ. ಮೈತ್ರಿಕೂಟದವರು ಮುಖ್ಯಮಂತ್ರಿ ಆಗುವುದನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ. ನಾನೆಂದೂ ನನ್ನ ಅಧಿಕಾರದ ಅವಧಿಯಲ್ಲಿ ಕೆಲಸ ಕೊಡಿಸುತ್ತೇನೆ. ಕಾಂಟ್ರ್ಯಾಕ್ಟ್ ಕೊಡಿಸುತ್ತೇನೆ ಎಂದು ಯಾರ ಬಳಿಯೂ ದುಡ್ಡಿಗಾಗಿ ಕೈಚಾಚಿಲ್ಲ, ಚಾಚುವುದೂ ಇಲ್ಲ. ಶ್ರೀರಾಮನ ಮುಂದೆ ಪ್ರಮಾಣವಾಗಿ ಹೇಳುತ್ತೇನೆ. ಮುಂದಿನ ದಿನಗಳಲ್ಲಿ ನಾನು ರಾಜಕಾರಣದಲ್ಲಿ ಇರಲಿ ಇಲ್ಲದಿರಲಿ. ಕ್ಷೇತ್ರದ ಜನತೆಯ ಸೇವೆ ಸದಾ ಮಾಡುತ್ತೇನೆ ಎಂದರು.

ಹಂಪಾಪುರ ಕುಮಾರ್, ನಾಗಣ್ಣ, ಮಂಚನಹಳ್ಳಿಗುರು, ಅಣ್ಣಯ್ಯಪ್ಪ ರಾಮಸ್ವಾಮಿಗೌಡ, ಎಚ್.ಸಿ.ರಾಜೇಗೌಡ ಪಾಲ್ಗೊಂಡಿದ್ದರು.

ನರಸೀಪುರದಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ



ಅಹಮದ್ ಸಯೀದ್ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕ ವಿತರಿಸಿದರು.

ತಿ.ನರಸೀಪುರ, ನ.25– ಪುರಸಭೆ ಚುನಾವಣೆ ಪೂರ್ವದಲ್ಲಿ ನೀಡಿದ್ದ ಭರವಸೆಯಂತೆ ತ್ರಿವೇಣಿ ನಗರದ 5ನೇ ವಾರ್ಡ್‌ನಲ್ಲಿ ವಿಜೃಂಭಣೆಯಿಂದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ಆಯೋಜಿಸಿಕೊಂಡು ಬರಲಾಗುತ್ತಿದೆ ಎಂದು ಪುರಸಭೆ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಅಹಮ್ಮದ್ ಸಯೀದ್ ಹೇಳಿದರು.

ಪುರಸಭೆ ವ್ಯಾಪ್ತಿಯ ತ್ರಿವೇಣಿ ನಗರದ ಶೆಟ್ಟರ ಅಂಗಡಿ ಬಳಿ ತಮ್ಮ ನೇತೃತ್ವದಲ್ಲಿ ಆಯೋಜಿಸಲಾಗಿದ್ದ 70ನೇ ವರ್ಷದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕ ವಿತರಣೆ ಮಾಡಿ ಅವರು ಮಾತನಾಡಿದರು.

ಎನ್‌ಕೆಎಫ್ ಪಬ್ಲಿಕ್ ಶಾಲೆಯ ಮುಖ್ಯಸ್ಥ ಎನ್.ಕೆ.ಫರೀದ್ ಮಾತನಾಡಿ ಸರ್ಕಾರಿ ಶಾಲೆಗಳಲ್ಲಿ ಕನ್ನಡ ಮಾಧ್ಯದಲ್ಲಿ ಕಲಿತ ಮಕ್ಕಳು ವಿಜ್ಞಾನಿ, ತಂತ್ರಜ್ಞರಾಗಿ ಹೆಸರು ಮಾಡಿದ್ದಾರೆ ಎಂದರು.

ಇದೇ ವೇಳೆ 500 ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕ ವಿತರಿಸಲಾಯಿತು, ವಿದ್ಯಾರ್ಥಿಗಳು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಕಾರ್ಯಕ್ರಮದ ಹಿನ್ನೆಲೆಯಲ್ಲಿ ಮಹಿಳೆಯರಿಗೆ ರಂಗೋಲಿ ಸ್ಪರ್ಧೆ, ಬಿಂದಿಗೆ ಹೊತ್ತು ಓಡುವ ಸ್ಪರ್ಧೆ ಹಾಗು ಮ್ಯೂಸಿಕಲ್ ಚೇರ್ ಆಟ, ಪುರುಷರಿಗೆ ಗುಂಡು ಎಸೆತ ಹಾಗು ಮಡಿಕೆ ಹೊಡೆಯುವ ಸ್ಪರ್ಧೆ ಏರ್ಪಡಿಸಲಾಗಿತ್ತು. ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಕೋಟಿ ರಿಯಾಜ್ ಅಹ್ಮದ್, ನಯಾಜ್ ಅಹಮದ್, ಖುದ್ದೂಸ್ ತ್ರಿವೇಣಿ ನಗರದ ನಾಗರೀಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಮಹಾದಾಸೋಹಕ್ಕೆ ಚಪ್ಪರ ಭೂಮಿ ಪೂಜೆ



ಸುತ್ತೂರು ಶ್ರೀ ಕ್ಷೇತ್ರದಲ್ಲಿ ಜ.15ರಿಂದ ಜ.20ರ ವರೆಗೆ ಕ್ಷೇತ್ರದಲ್ಲಿ ಜರುಗಲಿರುವ ಶ್ರೀ ಶಿವರಾತ್ರೀಶ್ವರ ಜಾತ್ರಾ ಮಹೋತ್ಸವದ ಮಹಾದಾಸೋಹಕ್ಕೆ ಚಪ್ಪರ ಭೂಮಿ ಪೂಜೆಯನ್ನು ಸುತ್ತೂರು ಶಿವರಾತ್ರಿ ದೇಶಿ ಕೇಂದ್ರ ಸ್ವಾಮೀಜಿಯವರು ನೆರವೇರಿಸಿದರು. ಈ ಸಂದರ್ಭದಲ್ಲಿ ವಿವಿಧ ಮಠಾಧಿಪತಿಗಳು ಹಾಗೂ ತಾಲೂಕು ಹಾಗೂ ಜಿಲ್ಲೆಯ ಗ್ರಾಮಗಳ ಮುಖಂಡರು ಹಾಜರಿದ್ದರು.

ಡಿ.4, ಹುಣಸೂರಲ್ಲಿ ಬೃಹತ್ ಹನುಮ ಜಯಂತಿ ಮೆರವಣಿಗೆ

ಮೆರವಣಿಗೆ ಶಾಂತಿಯುತವಾಗಿರಲಿ: ಎಸ್‌ಪಿ ಮನವಿ



ಹುಣಸೂರು: ಹನುಮಂತೋತ್ಸವ ಸಮಿತಿ ವತಿಯಿಂದ ಡಿ.4ರಂದು ನಡೆಸಲುದ್ದೇಶಿಸಿರುವ ಹನುಮ ಜಯಂತಿ ಮೆರವಣಿಗೆಯನ್ನು ಶಾಂತಿ–ಸೌಹಾರ್ದಯುತವಾಗಿ ಎಲ್ಲರೂ ಒಟ್ಟಾಗಿ ಆಚರಿಸೋಣ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್ ಸೂಚಿಸಿದರು.

ನಗರ ಠಾಣೆಯಲ್ಲಿ ಹನುಮ ಜಯಂತಿ ಆಚರಣೆ ಹಿನ್ನೆಲೆಯಲ್ಲಿ ಆಯೋಜಿಸಿದ್ದ ಶಾಂತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಹುಣಸೂರು ಶಾಂತಿಪ್ರಿಯರ ಊರಾಗಿದೆ. ಕಾನೂನು ಸುವ್ಯವಸ್ಥೆ ಕಾಪಾಡಲು ಸರ್ಕಾರ ಹಲವು ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಸೂಚಿಸಿದ್ದು, ಅದರಂತೆ ಸಮಿತಿ ಹಾಗೂ ನಾಗರಿಕರ ಸಹಕಾರ ಬೇಕು. ಮೆರವಣಿಗೆಯಲ್ಲಿ ಕಡ್ಡಾಯವಾಗಿ ಡಿ.ಜೆ. ಬಳಸುವುದನ್ನು ನಿಷೇಧಿಸಲಾಗಿದೆ. ಬದಲಿಗೆ ಹೆಚ್ಚಿನ ಸಂಖ್ಯೆಯಲ್ಲಿ ಜಾನಪದ ಕಲಾತಂಡಗಳು, ಡೊಳ್ಳು ಕುಣಿತ, ತಮಟೆ ಮುಂತಾದ ಕಲಾವಿದರನ್ನು ಬಳಸಿಕೊಳ್ಳಲು ಸಲಹೆ ನೀಡಿದರು.

ಸಾಮಾಜಿಕ ಜಾಲತಾಣದ ಬಗ್ಗೆ ಎಚ್ಚರಿಕೆ: ಜಯಂತಿ ವೇಳೆ ಸಾಮಾಜಿಕ ಜಾಲತಾಣಗಳ ದುರ್ಬಳಕೆ ಆಗುವ ಸಾಧ್ಯತೆ ಇದೆ. ಸುಳ್ಳು ಸುದ್ದಿಗಳ ಕುರಿತು ನಾಗರಿಕರು ಎಚ್ಚರ ವಹಿಸಬೇಕು. ಬ್ಯಾನರ್, ಬಂಟಿಂಗ್‌ಗಳನ್ನು ಅಳವಡಿಸಿದಲ್ಲಿ ಅವುಗಳನ್ನು ತೆರವುಗೊಳಿಸುವ ಜವಾಬ್ದಾರಿ ವಹಿಸಬೇಕು ಎಂದರು.

ತಾಲೂಕು ಹನುಮಂತೋತ್ಸವ ಸಮಿತಿ ಅಧ್ಯಕ್ಷ ವಿ.ಎನ್.ದಾಸ್ ಮಾತನಾಡಿ, ಮೂರು ದಿನಗಳ ಕಾಲದ ಹನುಮ ಜಯಂತಿ ಆಚರಣೆಯಲ್ಲಿ ಡಿ.2ರಂದು ಹನುಮ ಪ್ರತಿಷ್ಠಾಪನೆ, ಡಿ.3ರಂದು ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಡಿ.4ರಂದು ಬೃಹತ್ ಹನುಮ ಜಯಂತಿ ಉತ್ಸವಮೂರ್ತಿ ಮೆರವಣಿಗೆ ನಗರದ ರಂಗನಾಥ ಬಡಾವಣೆಯಿಂದ ಬೆಳಗ್ಗೆ 11 ಗಂಟೆಗೆ ಆರಂಭಗೊಂಡು ಕಲ್ಕುಣಿಕೆ ವೃತ್ತ, ಶಬರಿಪ್ರಸಾದ್ ವೃತ್ತ, ಹಳೇ ಸೇತುವೆ ಮೂಲಕ ಸಂವಿಧಾನ ವೃತ್ತ, ಎಸ್‌ಜೆ ರಸ್ತೆ, ಎಚ್.ಡಿ.ಕೋಟೆ ವೃತ್ತ, ಜೆಎಲ್‌ಬಿ–ಬಜಾರ್ ರಸ್ತೆ, ಹೊಸ ಬಸ್‌ನಿಲ್ದಾಣದ ಮುಂಭಾಗ, ಕಲ್ಪತರು ವೃತ್ತದ ಮೂಲಕ ಆಂಜನೇಯ ಸ್ವಾಮಿ ದೇಗುಲದ ಆವರಣವನ್ನು ಸಂಜೆ ತಲುಪಲಿದೆ ಎಂದರು. ತಹಸೀಲ್ದಾರ್ ಜೆ.ಮಂಜುನಾಥ್, ನಗರಸಭೆ ಮಾಜಿ ಸದಸ್ಯರಾದ ಕೃಷ್ಣರಾಜ ಗುಪ್ತ, ಸೈಯದ್ ಯೂನೂಸ್, ಸಾಗರ್ ಬಾಗಲ್ ಇತರರು ಭಾಗವಹಿಸಿದ್ದರು.

ಬಿಇಓ ಮೇಲೆ ಹಲ್ಲೆ ನಡೆಸಿದ ಆರೋಪಿ ಬಂಧನಕ್ಕೆ ಆಗ್ರಹಿಸಿ

ನಂ.ಗೂಡು ತಾಪಂ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ



ವೀರಶೈವ ಲಿಂಗಾಯತ ಮಹಾಸಭಾ ನೇತೃತ್ವದಲ್ಲಿ ವಿವಿಧ ಸಂಘ ಸಂಸ್ಥೆಗಳು ನಂಜನಗೂಡಿನಲ್ಲಿ ಪ್ರತಿಭಟನೆ ನಡೆಸಿದವು.

ನಂಜನಗೂಡು: ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ಮಹೇಶ್ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆಗೆ ಮುಂದಾಗಿದ್ದ ಆರೋಪಿಯನ್ನು ತಕ್ಷಣ ಬಂಧಿಸಬೇಕು ಎಂದು ಒತ್ತಾಯಿಸಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ನೇತೃತ್ವದಲ್ಲಿ ವಿವಿಧ ಸಂಘ ಸಂಸ್ಥೆಗಳವರು ಮಂಗಳವಾರ ನಂಜನಗೂಡಿನಲ್ಲಿ ಬೃಹತ್ ಪ್ರತಿಭಟನೆ ನಡೆಸಿ ತಾಲೂಕು ಕಚೇರಿಗೆ ಮುತ್ತಿಗೆ ಹಾಕಿ ಆಕ್ರೋಶ ವ್ಯಕ್ತಪಡಿಸಿದರು.

ನಗರದ ಹೆಜ್ಜಿಗೆ ಲಿಂಗಣ್ಣ ವೃತ್ತದಿಂದ ಪಾದಯಾತ್ರೆ ಮೂಲಕ ತೆರಳಿದ ನೂರಾರು ಪ್ರತಿಭಟನಾಕಾರರು ತಾಲೂಕು ಕಚೇರಿ ಪ್ರವೇಶ ದ್ವಾರವನ್ನು ಬಂದ್ ಮಾಡಿ ಆರೋಪಿ ಬಂಧನಕ್ಕೆ ಒತ್ತಾಯಿಸಿ ಘೋಷಣೆಗಳನ್ನು ಕೂಗಿದರು. ಈ ಸಂದರ್ಭದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಅಧ್ಯಕ್ಷ ಕೆಂಪಣ್ಣ, ಎನ್.ಸಿ.ಬಸವಣ್ಣ, ವಳಗೆರೆ ಶಿವಮಲ್ಲಪ್ಪ, ಮಹದೇವಸ್ವಾಮಿ ಮತ್ತಿತರರು ಮಾತನಾಡಿ ಕರ್ತವ್ಯ ನಿರತ ಅಧಿಕಾರಿಯನ್ನು ನಿಂದಿಸಿ ಹಲ್ಲೆಗೆ ಮುಂದಾಗಿದ್ದ ವ್ಯಕ್ತಿ ರೌಡಿ ಶೀಟರ್ ಆಗಿದ್ದು ಈ ಹಿಂದೆ ಸಹಾ ಹಲವು ಮಂದಿ ಸರಕಾರಿ ನೌಕರರನ್ನು ಬೆದರಿಸಿ ಕಿರುಕುಳ ನೀಡಿರುವ ಆರೋಪ ಹೊತ್ತಿದ್ದಾನೆ ಎಂದು ಎಚ್ಚರಿಸಿದರು.

ಇನ್ನು ಹಿರಿಯ ಸರಕಾರಿ ಅಧಿಕಾರಿ ಮೇಲೆ ಹಲ್ಲೆಗೆ ಮುಂದಾಗಿದ್ದ ಆರೋಪಿ ಕುಮಾರ್‌ನನ್ನು ಸ್ಥಳದಲ್ಲೇ ಬಂಧಿಸಬೇಕಿತ್ತು ಆದರೆ ಪೊಲೀಸರು ಪ್ರಕರಣವನ್ನು ರಾಜೀ ಮೂಲಕ ಬಗೆಹರಿಸುವ ಪ್ರಯತ್ನ ನಡೆಸಿದ್ದರು. ಇನ್ನು ಬಳಿಕ ಸಾರ್ವಜನಿಕರ ಒತ್ತಡಕ್ಕೆ ಮಣಿದು ಎಫ್‌ಐಆರ್ ದಾಖಲಿಸಿದ್ದರೂ ಈವರೆಗೂ ಆರೋಪಿಯನ್ನು ಬಂಧಿಸಲು ಮುಂದಾಗಿಲ್ಲ ಹೀಗಾಗಿ ತಕ್ಷಣ ಆರೋಪಿಯನ್ನು ಬಂಧಿಸಿ ಕಾನೂನು ರೀತ್ಯ ಕ್ರಮ ಕೈಗೊಳ್ಳಬೇಕು ಎಂದು ಅಗ್ರಹಿಸಿದರು.

ಬಳಿಕ ಸ್ಥಳಕ್ಕಾಗಮಿಸಿದ ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು ಅವರಿಗೆ ಮನವಿ ಪತ್ರ ಸಲ್ಲಿಸಿ ಇನ್ನು ಎರಡು ದಿನಗಳಲ್ಲಿ ಆರೋಪಿಯನ್ನು ಬಂಧಿಸದಿದ್ದಲ್ಲಿ ಹೋರಾಟವನ್ನು ತೀವ್ರಗೊಳಿಸುವುದಾಗಿ ಎಚ್ಚರಿಕೆ ನೀಡಿ ಪ್ರತಿಭಟನೆ ಅಂತ್ಯಗೊಳಿಸಿದರು.

ಪ್ರತಿಭಟನೆಯಲ್ಲಿ ವೀರಶೈವ ಮಹಾಸಭಾದ ಪ್ರಧಾನ ಕಾರ್ಯದರ್ಶಿ ಶಿವಪ್ಪ ದೇವರು, ಬಿಜೆಪಿ ತಾಲೂಕು ಘಟಕದ ಅಧ್ಯಕ್ಷ ಕೆಂಡಗಣ್ಣಪ್ಪ, ಬಿಜೆಪಿ ನಗರ ಘಟಕದ ಅಧ್ಯಕ್ಷ ಸಿದ್ದರಾಜು, ಜೆಡಿಎಸ್ ತಾಲೂಕು ಘಟಕದ ಅಧ್ಯಕ್ಷ ಆರ್.ವಿ.ಮಹದೇವಸ್ವಾಮಿ, ನಗರಸಭೆ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ಮಾಜಿ ಸದಸ್ಯ ಮಹದೇವ ಪ್ರಸಾದ್, ಬದನವಾಳು ಮಂಜುನಾಥ್, ರೇಚಣ್ಣ, ಹೊಸಪುರ ಜಗದೀಶ್, ಮಾದನಹಳ್ಳಿ ಗಿರೀಶ್, ವಕೀಲ ಮಹೇಶ್ ಬಾಬು, ರಾಜಶೇಖರ್,ಕಣೇನೂರು ಪರಶಿವಮೂರ್ತಿ,ಕುರಿಹುಂಡಿ ಮಂಜುನಾಥ್, ಪ್ರೇಮಾ ಶಂಭಯ್ಯ, ಕೋಮಲಾ, ಶಶಿಕಲಾ ಗಿರೀಶ್, ನಂದಿನಿ ಮಹೇಶ್ ಮೊದಲಾದವರು ಭಾಗವಹಿಸಿದ್ದರು.

ಇಂದು ಶ್ರೀ ಮರುಡೇಶ್ವರ ಸ್ವಾಮಿ ಕ್ಷೇತ್ರದಲ್ಲಿ ಷಷ್ಠಿ ಆಚರಣೆ



ತಿ.ನರಸೀಪುರ, ನ.25– ತಾಲೂಕಿನ ಮಾದಾಪುರ ಗ್ರಾಮದ ಬಳಿಯಿರುವ ಮರಡಿ ಗುಡ್ಡದ ಶ್ರೀ ಮರುಡೇಶ್ವರಸ್ವಾಮಿ ಕ್ಷೇತ್ರದಲ್ಲಿ ಬುಧವಾರ(ನ.26) ಶ್ರೀ ಸುಬ್ರಹ್ಮಣ್ಯ ಷಷ್ಠಿ ವಿಜೃಂಭಣೆಯಿಂದ ನಡೆಯಲಿದೆ.

ಮುಂಜಾನೆ ಶ್ರೀ ಮರುಡೇಶ್ವರಸ್ವಾಮಿಗೆ ರುದ್ರಾಭಿಷೇಕ, ಶ್ರೀ ಗಣೇಶ, ಶ್ರೀ ಮರುಡೇಶ್ವರಸ್ವಾಮಿ ಹಾಗೂ ಶ್ರೀ ಸುಬ್ರಹ್ಮಣ್ಯೇಶ್ವರಸ್ವಾಮಿಯ ಪ್ರಾಕಾರೋತ್ಸವ ಜರುಗಲಿದೆ. ಚರ್ಮವ್ಯಾಧಿ ನಿವಾರಣೆಗೆ ಪ್ರಸಿದ್ಧಿಯಾದ ಶ್ರೀ ಮತ್ತಿತಾಳೇಶ್ವರ ಸ್ವಾಮಿಯವರಿಗೆ ವಿಶೇಷ ಪೂಜೆ ಅಭಿಷೇಕಗಳು ನಡೆಯಲಿವೆ.

ಶ್ರೀ ಸುಬ್ರಹ್ಮಣ್ಯೇಶ್ವರಸ್ವಾಮಿಯ ರಥೋತ್ಸವವು ಸಹ ಜರುಗಲಿದೆ. ಇದೇ ವೇಳೆ ದಾಸೋಹವನ್ನು ವ್ಯವಸ್ಥೆ ಮಾಡಲಾಗಿದೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ದೇವಸ್ಥಾನದ ಅರ್ಚಕರು ಕೋರಿದ್ದಾರೆ.

ಪುಟ್ಟಮ್ಮ ನಿಧನ



ಭೇರ್ಯ: ಭೇರ್ಯ ಗ್ರಾಮದ ಲೇಟ್ ಕರಿಯಯ್ಯನವರ ಧರ್ಮಪತ್ನಿ ಪುಟ್ಟಮ್ಮ(95) ಸ್ವಗೃಹದಲ್ಲಿ ನಿಧನರಾದರು.

ದಿವಂಗತರು ದೂರವಾಣಿ ಇಲಾಖೆಯ ನಿವೃತ್ತ ನೌಕರ ಈರಯ್ಯ ಹಾಗೂ ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಕುಮಾರ್ ಸೇರಿದಂತೆ ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಎಂಡಿಸಿಸಿ ಬ್ಯಾಂಕ್ ನಿರ್ದೇಶಕ ದೊಡ್ಡಸ್ವಾಮೇಗೌಡ, ಹಿರಿಯ ಪತ್ರಕರ್ತರಾದ ಸಿ.ರಂಗನಾಥಶೆಟ್ಟಿ, ಪತ್ರಕರ್ತ ಭೇರ್ಯ ಮಹೇಶ್, ತಾ.ಪಂ.ಮಾಜಿ ಸದಸ್ಯರಾದ ಶೋಭಾ ಕೋಟೇಗೌಡ, ಸಾಲಿಗ್ರಾಮ ಚಂದ್ರಶೇಖರ್, ಸೋಮನಹಳ್ಳಿ ಮಂಜು, ಹಂಪಾಪುರ ದೇವರಾಜನಾಯಕ ಸೇರಿದಂತೆ ಹಲವರು ಸಂತಾಪ ಸೂಚಿಸಿದ್ದಾರೆ.

ಸಿದ್ದರಾಮಯ್ಯನವರ ನಂಬರ್ ಗೇಮ್‌ಗೆ ಡಿ.ಕೆ.ಶಿವಕುಮಾರ್ ಚೆಕ್‌ಮೇಟ್

ಮೈಸೂರಿನಲ್ಲಿ ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿಕೆ

- ಡಿ.ಕೆ.ಶಿವಕುಮಾರ್ ಪರ ಶಾಸಕರ ಬಲ 20 ರಿಂದ 65 ಕ್ಕೆ ಏರಿಕೆ
- ನಾ ಕೊಡೆ, ನಾ ಬಿಡೆ ಎಂಬಂತೆ ಕಿತ್ತಾಟ ಶುರು
- ಕಾಂಗ್ರೆಸ್‌ನಿಂದ ದಲಿತರಿಗೆ ಸ್ಲೋ ಪಾಯಿಸನ್
- ಸೋನಿಯಾ, ರಾಹುಲ್, ಪ್ರಿಯಾಂಕಗೆ 'ಭಾರತ ರತ್ನ' ಕೊಡುತ್ತಿದ್ದರು

ಮೈಸೂರು, ನ.25(ಬಿಎಲ್‌ಯು)– ನನಗೆ ಶಾಸಕರ ಸಂಖ್ಯಾಬಲವಿದೆ ಎಂದು ಬೀಗುತ್ತಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಡಿ.ಕೆ.ಶಿವಕುಮಾರ್ ಈಗ ನಂಬರ್ ಗೇಮ್ ಚೆಕ್‌ಮೇಟ್ ಇಟ್ಟಿದ್ದಾರೆ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದ್ದಾರೆ.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು, ಮುಖ್ಯಮಂತ್ರಿ ಸ್ಥಾನದಲ್ಲಿ ಮುಂದುವರೆಯಲು ನನಗೆ ಹೆಚ್ಚು ಶಾಸಕರ ಸಂಖ್ಯಾಬಲವಿದೆ ಎಂದು ನಂಬರ್ ಗೇಮ್ ಮೇಲೆ ಸಿಎಂ ಸಿದ್ದರಾಮಯ್ಯ ಆಟ ಆಡುತ್ತಿದ್ದರು. ಆದರೆ ಈಗ ಶತಾಯ ಗತಾಯ ಸಿಎಂ ಆಗಲೇಬೇಕೆಂದು ಪಟ್ಟು ಹಿಡಿದಿರುವ ಡಿ.ಕೆ.ಶಿವಕುಮಾರ್ ಸಂಖ್ಯಾ ಬಲ ಹೆಚ್ಚಿಸಿಕೊಂಡು ಸಿದ್ದರಾಮಯ್ಯ ಅವರ ನಂಬರ್ ಗೇಮ್‌ಗೆ ಚೆಕ್‌ಮೇಟ್ ಇಟ್ಟಿದ್ದಾರೆ ಎಂದರು.

ಈ ಮೊದಲು ಡಿ.ಕೆ.ಶಿವಕುಮಾರ್ ಪರ ಶಾಸಕರ ಸಂಖ್ಯಾಬಲ 15 ರಿಂದ 20 ಇತ್ತು. ಆದರೆ ಈಗ ಅದು 65ಕ್ಕೆ ಹೆಚ್ಚಾಗಿದೆ. ಈ ಮೂಲಕ ಕಾಂಗ್ರೆಸ್ ಪಕ್ಷದ ಶಾಸಕರು ಸೇಲ್ ಆಗುತ್ತಿದ್ದು, ಬೆಂಗಳೂರಿನಲ್ಲಿ ಶಾಸಕರ ಖರೀದಿ ಕೇಂದ್ರ ತಲೆ ಎತ್ತಿದೆ ಎಂದು ಛಲವಾದಿ ನಾರಾಯಣ ಸ್ವಾಮಿ ಆರೋಪಿಸಿದರು.

ಬೇರೆ ಪಕ್ಷದ ಬೆಂಬಲ ಪಡೆದು ಸಮ್ಮಿಶ್ರ ಸರ್ಕಾರ ರಚನೆ ಮಾಡುವುದು ಸಾಮಾನ್ಯ. ಆದರೆ ಕಾಂಗ್ರೆಸ್ ಪಕ್ಷದಲ್ಲೇ ಸಮ್ಮಿಶ್ರ ಸರ್ಕಾರ ರಚನೆಯಾಗಿದೆ. ಒಬ್ಬೊಬ್ಬರದು ಒಂದೊಂದು ಗುಂಪುಗಳಾಗಿ ಮಾರ್ಪಟ್ಟಿದ್ದು, ಅಧಿಕಾರಕ್ಕಾಗಿ ಕಿತ್ತಾಟದಲ್ಲಿ ತೊಡಗಿದ್ದಾರೆ ನಾ ಕೊಡೆ ನಾ ಬಿಡೆ ಎಂಬಂತೆ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರು ಬಹಿರಂಗ ಕದನಕ್ಕಿಳಿದಿದ್ದಾರೆ ಎಂದು ಲೇವಡಿ ಮಾಡಿದರು.

ದಲಿತರನ್ನು ಮುಖ್ಯಮಂತ್ರಿ ಮಾಡುತ್ತೇವೆ ಎಂದು ಹೇಳುತ್ತಿದ್ದರು. ಆದರೆ ಈಗ ಇವರೇ ಸಿಎಂ ಸ್ಥಾನಕ್ಕಾಗಿ ಕಿತ್ತಾಡುತ್ತಿದ್ದಾರೆ. ಈ ಮೂಲಕ ಕಾಂಗ್ರೆಸ್‌ನವರು ದಲಿತರಿಗೆ ಸ್ಲೋ ಪಾಯಿಸನ್ ಆಗಿದ್ದಾರೆ. ನಿಧಾನವಾಗಿ ವಿಷ ಹಾಕಿ ಕೊಲ್ಲುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಕಾರಣದಿಂದಲೇ ಅಂಬೇಡ್ಕರ್ ಅವರು ಕಾಂಗ್ರೆಸ್ ಪಕ್ಷವನ್ನು ಸುಡುವ ಮನೆ ಎಂದು ಕರೆದಿದ್ದರು. ಕಾಂಗ್ರೆಸ್ ಪಕ್ಷ ನಿರ್ನಾಮವಾದಾಗ ಮಾತ್ರ ದೇಶದ ಪ್ರಜಾಪ್ರಭುತ್ವಕ್ಕೆ ಮಹತ್ವ ಸಿಗುತ್ತದೆ ಎಂದು ಅಭಿಪ್ರಾಯಪಟ್ಟರು.

ಭಾರತರತ್ನ ನೀಡುತ್ತಿದ್ದರು: ಕಾಂಗ್ರೆಸ್ ಪಕ್ಷದಲ್ಲಿ ಅಂಬೇಡ್ಕರ್ ಫೋಟೋ ಕೂಡ ಹಾಕುತ್ತಿರಲಿಲ್ಲ. ಎಲ್ಲಾ ಕಡೆ ಗಾಂಧಿ ಕುಟುಂಬದ ಫೋಟೋಗಳೇ ರಾರಾಜಿಸುತ್ತಿತ್ತು ಇನ್ನೊಂದು ಬಾರಿ ಯುಪಿಎ ಸರ್ಕಾರ ಅಧಿಕಾರಕ್ಕೆ ಬಂದಿದ್ದರೆ ಇಷ್ಟೊತ್ತಿಗೆ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕ ಗಾಂಧಿ ಅವರಿಗೆ 'ಭಾರತ ರತ್ನ' ನೀಡುತ್ತಿದ್ದರು ಎಂದು ಲೇವಡಿ ಮಾಡಿದರು.

ಮೈಸೂರು ಸೇರಿದಂತೆ ರಾಜ್ಯಾದ್ಯಂತ ನವೆಂಬರ್ 26 ರಿಂದ ಡಿಸೆಂಬರ್ 6 ವರೆಗೆ ಸಂವಿಧಾನ ಸಮರ್ಪಣಾ ದಿನ ಆಚರಣೆ ಮಾಡಲಾಗುತ್ತಿದೆ ಎಂದು ಛಲವಾದಿ ನಾರಾಯಣ ಸ್ವಾಮಿ ಇದೇ ವೇಳೆ ತಿಳಿಸಿದರು.



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಮಂಗಳವಾರ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮಲ್ಲಿಕಾರ್ಜುನ ಖರ್ಗೆಗೆ ಕಾಂಗ್ರೆಸ್‌ನಲ್ಲಿ ತಾಕತ್ತಿಲ್ಲ!

ಕಾಂಗ್ರೆಸ್ ಪಕ್ಷದಲ್ಲಿ ದಿಟ್ಟ ನಿರ್ಧಾರ ಕೈಗೊಳ್ಳಲು ಶಕ್ತಿ ಇಲ್ಲದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಕಾಂಗ್ರೆಸ್ ಪಕ್ಷದಲ್ಲಿ ಕಸ ಹೊಡೆಯುವುದಕ್ಕೂ ಅಧಿಕಾರವಿಲ್ಲ ಎಂದು ಛಲವಾದಿ ನಾರಾಯಣ ಸ್ವಾಮಿ ಗೇಲಿ ಮಾಡಿದರು.

ಕಾಂಗ್ರೆಸ್ ಪಕ್ಷದ ವರಿಷ್ಠರಾದ ಮಲ್ಲಿಕಾರ್ಜುನ ಖರ್ಗೆ ಅವರೇ ಸುಪ್ರೀಂ. ಆದರೆ ಅಧಿಕಾರ ಹಂಚಿಕೆ ವಿಚಾರವನ್ನು ಹೈಕಮಾಂಡ್ ತೀರ್ಮಾನ ಮಾಡುತ್ತದೆ ಎಂದು ರಾಹುಲ್ ಗಾಂಧಿಯತ್ತ ಬೊಟ್ಟು ಮಾಡಿ ತೋರಿಸುತ್ತಿದ್ದಾರೆ. ಈ ಮೂಲಕ ಅವರ ತಾಕತ್ತು ಎಷ್ಟರ ಮಟ್ಟಿಗೆ ಇದೆ ಎಂಬುದು ಸ್ಪಷ್ಟವಾಗುತ್ತದೆ ಎಂದರು.

ಅಧಿಕಾರ ಹಸ್ತಾಂತರ ದೊಡ್ಡ ಪವಾಡದ ಕೆಲಸವಲ್ಲ. ಹೈಕಮಾಂಡ್ ದಿಟ್ಟವಾಗಿ ನಿಂತರೆ ಸುಲಭವಾಗಿ ಸಮಸ್ಯೆ ಪರಿಹಾರ ಮಾಡಬಹುದು. ಆದರೆ ರಾಜ್ಯದಲ್ಲಿ ಇಷ್ಟೆಲ್ಲಾ ಬೆಳವಣಿಗೆ ನಡೆಯುತ್ತಿದ್ದರೂ ನಿಯಂತ್ರಣ ಮಾಡಲು ಸಾಧ್ಯವಾಗದ ಕಾಂಗ್ರೆಸ್ ಹೈಕಮಾಂಡ್ ಡೆಡ್ ಬಾಡಿಯಂತೆ ಇದೆ ಎಂದು ಟೀಕಿಸಿದರು. ಶಾಸಕ ಟಿ.ಎಸ್.ಶ್ರೀವತ್ಸ, ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಸುಬ್ಬಣ್ಣ, ರಾಜ್ಯ ಕಾರ್ಯದರ್ಶಿ ರಾಜೇಂದ್ರ ಹಿಂದುಳಿದ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ತಿಯಾವರ್ ಕುಲಾಯಿ ನಡುಂಗಾ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಐ ಆ್ಯಮ್ ಗಾಡ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಮಸ್ತಿ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ರಾಧೇಯ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಾಧೇಯ (ಕ)	4 ಪ್ರದರ್ಶನಗಳು
ರಾಜಕಮಲ್	
ತಿಯಾವರ್ ಕುಲಾಯಿ ನಡುಂಗಾ (ತ)	4 ಪ್ರದರ್ಶನಗಳು
ಸಂಗಂ	
ಕಂಗ್ರಾಜುಲೇಷನ್ ಬ್ರದರ್(ಕ)	4 ಪ್ರದರ್ಶನಗಳು
ಲಿಡೋ	
ಬ್ರ್ಯಾಟ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಟಾಸ್ಕ್ (ಕ)	4 ಪ್ರದರ್ಶನಗಳು

'ಕೌದಿ' ನಾಟಕ ಕಲಾವಿದೆಗೆ ಅಭಿನಂದನೆ



ಮೈಸೂರು ಜಿಲ್ಲಾ ಕಸಾಪ ಸಾಹಿತ್ಯ ಭವನದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮೈಸೂರು ನಗರ ಘಟಕ ಹಾಗೂ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಆಯೋಜಿಸಿದ್ದ 'ಕೌದಿ' ನಾಟಕ ಪ್ರದರ್ಶನದ ಬಳಿಕ ನಾಟಕದ ಕಲಾವಿದೆ ಭಾಗ್ಯಶ್ರೀ ಅವರನ್ನು ಸನ್ಮಾನಿಸಲಾಯಿತು. ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕವಿ ಜಯಪ್ಪ ಹೊನ್ನಾಳಿ, ಹಿರಿಯ ಪತ್ರಕರ್ತ ಗಣೇಶ ಅಮೀನಗಡ, ಹೋರಾಟಗಾರ ಕೆರೆ ಜಯರಾಮಯ್ಯ ಮತ್ತಿತರರಿದ್ದರು.

ಮರೆಗುಳಿತನ ರೋಗದ ಜಾಗೃತಿಗೆ ನ.28,29ಕ್ಕೆ ಅಂತರ ರಾಷ್ಟ್ರೀಯ ಸಮ್ಮೇಳನ


ಮೈಸೂರು, ನ.25(ಎಂಕೆ)– ಮರೆಗುಳಿತನ(ಮರೆವುರೋಗ) ಕಾಯಿಲೆ, ಅದನ್ನು ಕುರಿತು ಜಾಗೃತಿ ಜೊತೆಗೆ ಮಾನಸಿಕ ಆರೋಗ್ಯದ ಬಗ್ಗೆ ಮಾಹಿತಿ ನೀಡುವ ಸಲುವಾಗಿ ನ.28 ಮತ್ತು 29 ರಂದು ಎರಡು ದಿನಗಳ 'ಆರ್ಡ್ಸಿಕಾನ್–2025 (ARDSICON-2025)' ಅಂತರರಾಷ್ಟ್ರೀಯ ಸಮ್ಮೇಳನ ಆಯೋಜಿಸಲಾಗಿದೆ ಎಂದು ಸಮ್ಮೇಳನದ ಅಧ್ಯಕ್ಷ ಹಾಗೂ ಶಾರದ ವಿಲಾಸ ಫಾರ್ಮಸಿ ಕಾಲೇಜು ಪ್ರಾಂಶುಪಾಲ ಡಾ.ಹನುಮಂತಚಾರ್ ಜೋಶಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಮಂಗಳವಾರ ಸುದ್ದಿಗೋಷ್ಠಿ ನಡೆಸಿದ ಅವರು, ಜೆಎಸ್‌ಎಸ್ ಆಸ್ಪತ್ರೆಯ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ಸಮ್ಮೇಳನ ನಡೆಯಲಿದ್ದು, ಅಂದು ಬೆಳಗ್ಗೆ 10 ಗಂಟೆಗೆ ಅಮೆರಿಕಾದ ಬ್ರಾಡ್‌ವಾನ್ಸ್ ಮೆಮೊರಿ ಸೆಂಟರ್‌ನ ವೈದ್ಯಕೀಯ ನಿರ್ದೇಶಕ ಡಾ.ಯೋಗೇಶ್ ಶಾ ಉದ್ಘಾಟಿಸಲಿದ್ದಾರೆ ಎಂದರು.

ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ಪ್ರೊ.ಚಾನ್ಸಿಲರ್ ಡಾ.ಬಿ.ಸುರೇಶ್, ಕುಲಪತಿ ಡಾ.ಬಸವನಗೌಡಪ್ಪ, ಕುಲಸಚಿವ ಡಾ.ಬಿ.ಮಂಜುನಾಥ್, ಆಲ್ಜೈಮರ್ ಡಿಸಿಸ್ ಇಂಟರ್‌ನ್ಯಾಷನಲ್ ಸಂಸ್ಥೆಯ ಉಪಾಧ್ಯಕ್ಷೆ ಮೀರಾ ಪಟ್ಟಾಭಿರಾಮನ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದು, ಸಂಸ್ಥೆಯ ರಾಷ್ಟ್ರೀಯ ಅಧ್ಯಕ್ಷರಾದ ರೇಣು ವೋಹ್ರಾ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ತಿಳಿಸಿದರು.

ಅಲ್ಝೈಮರ್ ಅಥವಾ ಮರೆಗುಳಿತನ ಕಾಯಿಲೆ ಅಸಹಜ ಮಿದುಳಿನ ಅಂಗಾಂಶ ಬದಲಾವಣೆಗಳಿಂದ ಉಂಟಾಗುತ್ತದೆ. ಒಂದು ಸಂಶೋಧನೆ ಪ್ರಕಾರ ಮರೆಗುಳಿತನ ಹೊಂದಿರುವ ಹೆಚ್ಚಿನ ಜನರು ತಮ್ಮ ಮನೆಗಳಲ್ಲಿ ವಾಸಿಸುತ್ತಾರೆ. ಈ ರೀತಿಯ ವಿಷಯಗಳಿಗೆ ಸಂಬಂಧಿಸಿದಂತೆ ಸಮ್ಮೇಳನದಲ್ಲಿ ಚರ್ಚಿಸಿ, ಚಿಕಿತ್ಸಾ ಬೆಳವಣಿಗೆ ಮಾಹಿತಿ ವಿನಿಮಯವಾಗಲಿದೆ ಎಂದರು. ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪ್ರೊ.ಪ್ರತಿಭಾ ಪೆರೇರಾ, ಜಿ.ಎಸ್.ಗಣೇಶ್, ಡಾ. ಶಿಲ್ಪಾ, ಜ್ಯೋತಿ, ಆರ್.ನಾಗೇಂದ್ರ ಉಪಸ್ಥಿತರಿದ್ದರು.

ಅಭಿನಂದನೆ



ಮೈಸೂರು ಜಿಲ್ಲಾ ಬಿಸಿಎಂ ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷರು ಮತ್ತು ಕರ್ನಾಟಕ ರಾಜ್ಯ ಹಾಲು ಉತ್ಪಾದಕರ ಸಂಘ ನಿಯಮಿತ ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕ ಬಿ ಶಿವಸ್ವಾಮಿ ಹಾಗೂ ಮುಖ್ಯಮಂತ್ರಿಗಳ ವಿಶೇಷಾಧಿಕಾರಿ ಆರ್ ಮಹದೇವ ಅವರನ್ನು ಜನಪರ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಡಾ ಎಂ ಮಹೇಶ ಚಿಕ್ಕಲ್ಲೂರು ಸನ್ಮಾನಿಸಿದರು. ಜೊತೆಗೆ ಹರೀಶ್ ಮೊಗಣ್ಣ, ಕಲ್ಪನಾ, ಮಹೇಶ ದಳಪತಿ, ಡಾ ಯೋಗಿಂದ್ರ, ಡಾ ಬಸವರಾಜ್, ರುಕ್ಮದ, ನಂದೀಶ್, ಮಂಜುನಾಥ್ ಮತ್ತು ಇತರರು ಹಾಜರಿದ್ದರು.

ಕಾರ್ಮಿಕ ವಿರೋಧಿ ನಾಲ್ಕು ಸಂಹಿತೆಗಳ ಹಿಂಪಡೆಯಲು ಎಐಟಿಯುಸಿ ಪ್ರತಿಭಟನೆ

ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ

ಮೈಸೂರು,25(ಎಂಟಿವೈ)– ಕೇಂದ್ರ ಸರ್ಕಾರ ತನ್ನ ನಾಲ್ಕು ಕಾರ್ಮಿಕ ವಿರೋಧಿ ಸಂಹಿತೆಗಳನ್ನು ಹಿಂಪಡೆಯುವಂತೆ ಒತ್ತಾಯಿಸಿ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್(ಎಐಟಿಯುಸಿ) ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಪುರಭವನ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಮುಂಭಾಗ ಮಂಗಳವಾರ ಬೆಳಗ್ಗೆ ಪ್ರತಿಭಟನೆ ನಡೆಸಿ, ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕಾರ್ಮಿಕ ವರ್ಗದ ಇತಿಹಾಸದಲ್ಲಿ ನ.21 ಕರಾಳ ದಿನ. ಕೇಂದ್ರ ಸರ್ಕಾರ ಅಂದಿನಿಂದಲೇ ಜಾರಿಗೆ ಬರುವಂತೆ ನಾಲ್ಕು ಸಂಹಿತೆಗಳನ್ನು ಏಕಪಕ್ಷೀಯವಾಗಿ ಜಾರಿಗೊಳಿಸಿ ಆದೇಶ ಹೊರಡಿಸಿದೆ. ಕೇಂದ್ರ ಸರ್ಕಾರದ ಈ ಕ್ರಮದಿಂದಾಗಿ ಕಾರ್ಪೊರೇಟ್ ಸ್ನೇಹಿ, ಬಂಡವಾಳ ಶಾಹಿ ಪರವಾದ ಧೋರಣೆ ಹಾಗೂ ಕಾರ್ಮಿಕ ವಿರೋಧಿ ಧೋರಣೆ ಮುಂದುವರಿಸಿ ಕೋಟ್ಯಾಂತರ ಶ್ರಮಿಕ ವರ್ಗಕ್ಕೆ ಅನ್ಯಾಯ ಮಾಡುತ್ತಿದೆ. 29 ಕಾರ್ಮಿಕ ಕಾನೂನುಗಳನ್ನು ನಾಲ್ಕು ಸಂಹಿತೆಗಳಾಗಿ ಸಂಸತ್‌ನಲ್ಲಿ ಅನುಮೋದನೆ ಪಡೆದಿದ್ದರೂ ದೇಶದಲ್ಲಿ ನಡೆಸಿದ ಕಾರ್ಮಿಕ ವರ್ಗದ ನಿರಂತರ ಹೋರಾಟದಿಂದಾಗಿ ಅವು, ಕಳೆದ 5–6 ವರ್ಷಗಳಿಂದ ನೆನಗುದಿಗೆ ಬಿದ್ದಿತ್ತು. ಟ್ರೇಡ್ ಯೂನಿಯನ್‌ಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ, ಯಾವುದೇ ತ್ರಿಪಕ್ಷೀಯ ಸಭೆಗಳಲ್ಲಿ ಚರ್ಚಿಸದೆ ಇದೀಗ ನೆನೆಗುದಿಗೆ ಬಿದ್ದಿದ್ದ ಸಂಹಿತೆಗಳನ್ನು ಜಾರಿಗೆ ತಂದು ಕಾರ್ಮಿಕರಿಗೆ ದ್ರೋಹ ಎಸಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ದೇಶದ ಪ್ರಗತಿಯಲ್ಲಿ ಕಾರ್ಮಿಕರು ಮತ್ತು ರೈತ ವರ್ಗದ ಕೊಡುಗೆ ಅಪಾರ. ಕಾರ್ಮಿಕ ವರ್ಗದ ನಿರಂತರ ಪರಿಶ್ರಮದಿಂದ 29 ಕಾರ್ಮಿಕ ಕಾನೂನು ಜಾರಿಯಲ್ಲಿದ್ದವು. ಅವುಗಳು ಕಾರ್ಮಿಕರಿಗೆ ಸ್ವಲ್ಪಮಟ್ಟಿಗಾದರೂ ನ್ಯಾಯ ಒದಗಿಸುತ್ತಿತ್ತು. ಬಂಡವಾಳಗಾರರಿಗೆ, ಕಂಪನಿಯ ಮಾಲೀಕರ ವಿರೋಧಿ ನೀತಿಗಳಿಗೆ ಕಡಿವಾಣ ಹಾಕಲಾಗಿತ್ತು. ಆದರೆ ಇದೀಗ ಸಂಹಿತೆಗಳ ಕಾರ್ಮಿಕ ಹಕ್ಕುಗಳಿಗೆ ಚ್ಯುತಿ ಬಂದಂತಾಗಿದೆ. ಸಂವಿಧಾನದ ಆಶಯಗಳಾದ ಆರ್ಥಿಕ ಸ್ವಾವಲಂಬನೆ, ಸಾಮಾಜಿಕ ನ್ಯಾಯ, ಈಗಿನ ಫೆಡರಲ್ ಪದ್ಧತಿಗೆ ಮಸಿ ಬಳಿದಂತಾಗಿದೆ. ಇದರಿಂದ ಸಮಾಜದಲ್ಲಿ ಅಸಮಾನತೆ ಹೆಚ್ಚಾಗಿ ದುಡಿಯುವ ವರ್ಗ ತನ್ನ ಮೂಲಭೂತ ಹಕ್ಕುಗಳಾದ ಕನಿಷ್ಠ ಕೂಲಿ, ಸಾಮೂಹಿಕ ಚೌಕಾಸಿ ಹಕ್ಕು, ಟ್ರೇಡ್ ಯೂನಿಯನ್ ರಚಿಸಿಕೊಳ್ಳುವ ಹಕ್ಕು, ಮುಷ್ಕರದ ಹಕ್ಕು, ಸಮಾನ ಕೆಲಸಕ್ಕೆ ಸಮಾನ ವೇತನದ ಹಕ್ಕುಗಳು ಮೊಟಕುಗೊಂಡು ಜೀತ ಪದ್ಧತಿ ಕಡೆಗೆ ದೂಡುವ ಸಂಚು ನಡೆಸಲಾಗಿದೆ ಎಂದು ಆರೋಪಿಸಿದರು.

ಹೊಸ ರಾಷ್ಟ್ರೀಯ ಕಾರ್ಮಿಕ ನೀತಿ ಜಾರಿಗೆ ತರಲು ಈಗಾಗಲೇ ಕರಡು ಅಧಿಸೂಚನೆ ಹೊರಡಿಸಲಾಗಿದ್ದು ಇದು ಜಾರಿಯಾದರೆ ಕಾರ್ಮಿಕರ ಪರಿಸ್ಥಿತಿ ಇನ್ನೂ ಕರಾಳವಾಗಲಿದೆ. ಹೀಗಾಗಿ ಕೂಡಲೇ ನಾಲ್ಕು ಕರಾಳ ಸಂಹಿತೆಗಳನ್ನು ವಾಪಸ್ ಪಡೆಯಬೇಕು. ಇಲ್ಲದಿದ್ದರೆ ರಾಷ್ಟ್ರವ್ಯಾಪಿ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ ಅಧ್ಯಕ್ಷ ಎನ್.ಕೆ. ದೇವದಾಸ್, ಪ್ರಧಾನ ಕಾರ್ಯದರ್ಶಿ ಹೆಚ್. ಆರ್.ಶೇಷಾದ್ರಿ, ಉಪ ಪ್ರಧಾನ ಕಾರ್ಯದರ್ಶಿ ಹೆಚ್. ಬಿ.ರಾಮಕೃಷ್ಣ, ಜಿಲ್ಲಾ ಕಾರ್ಯದರ್ಶಿ ಕೆಜಿ.ಸೋಮರಾಜೇ ಅರಸ್ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.



ಕೇಂದ್ರ ಸರ್ಕಾರ ಜಾರಿಗೊಳಿಸಿರುವ ನಾಲ್ಕು ಕಾರ್ಮಿಕ ವಿರೋಧಿ ಸಂಹಿತೆಗಳನ್ನು ಹಿಂಪಡೆಯುವಂತೆ ಒತ್ತಾಯಿಸಿ ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್(ಎಐಟಿಯುಸಿ) ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ನ.29 ರಂದು ಜಿಲ್ಲಾ ಮಟ್ಟದ ಕ್ರೀಡಾ ಸ್ಪರ್ಧೆಗಳು

ಮೈಸೂರು, ನ.25– ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ ಸಾಲಿನ ವಿಶ್ವ ವಿಕಲಚೇತನರ ದಿನಾಚರಣೆ ಸಂಬಂಧ ನ.29 ರಂದು ಚಾಮುಂಡಿ ವಿಹಾರ ಕ್ರೀಡಾಂಗಣ, ನಜರ್‌ಬಾದ್, ಮೈಸೂರಲ್ಲಿ ಜಿಲ್ಲಾ ಮಟ್ಟದ ವಿಕಲಚೇತನರ ಕ್ರೀಡಾ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ. ಆಸಕ್ತ ವಿಕಲಚೇತನರು ನ.29 ರೊಳಗಾಗಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದಾಗಿದೆ ಹೆಚ್ಚಿನ ವಿವರಗಳಿಗಾಗಿ ದೂರವಾಣಿ 0821–2490333 ಹಾಗೂ ಮೊಬೈಲ್ ಸಂಖ್ಯೆ: 9731059098, 9972489024, 9481439160 ನ್ನು ಸಂಪರ್ಕಿಸಬಹುದು

ಕನಿಷ್ಠ ವೇತನ ನಿಗದಿಗೆ ಆಗ್ರಹಿಸಿ ಗ್ರಾಪಂ ಸದಸ್ಯರಿಂದ ವಿನೂತನ ಹೋರಾಟ

ನ. 29ಕ್ಕೆ ಗ್ರಾಪಂ ನೌಕರರ ನಡಿಗೆ ಮೈಸೂರಿನ ಮುಖ್ಯಮಂತ್ರಿಗಳ ಕಾರ್ಯಾಲಯದೆಡೆಗೆ

ಮೈಸೂರು, ನ.25(ಎಂಕೆ)– ವೈಜ್ಞಾನಿಕ ಕನಿಷ್ಠ ವೇತನ ನಿಗದಿಗೆ ಒತ್ತಾಯಿಸಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘದ ವತಿಯಿಂದ ನ.29 ರಂದು 'ಗ್ರಾಪಂ ನೌಕರರ ನಡಿಗೆ ಮೈಸೂರಿನ ಮುಖ್ಯಮಂತ್ರಿಗಳ ಕಾರ್ಯಾಲಯದ ಕಡೆಗೆ' ಬೃಹತ್ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ರಾಜ್ಯ ಉಪಾಧ್ಯಕ್ಷ ಜಿ.ರಾಮಕೃಷ್ಣ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಸುಪ್ರೀಂಕೋರ್ಟ್ ಆದೇಶದನ್ವಯ ಗ್ರಾಮ ಪಂಚಾಯಿತಿಯ ಸ್ಥಳೀಯ ಸಂಸ್ಥೆ ನೌಕರರಿಗೆ ವೈಜ್ಞಾನಿಕ ಕನಿಷ್ಠ ವೇತನ ನಿಗದಿಗೆ ರಾಜ್ಯ ಸರ್ಕಾರ ಮೀನಾಮೇಷ ಎಣಿಸುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಹಾಗೆಯೇ ರಾಜ್ಯ ಸರ್ಕಾರ ಗ್ರಾಪಂಗಳಲ್ಲಿ ಘನತ್ಯಾಜ್ಯ ವಿಲೇವಾರಿ ಮಾಡಲು ನೇಮಕಗೊಂಡಿರುವ ಮಹಿಳಾ ಚಾಲಕಿಯರು ಮತ್ತು ಸಹಾಯಕಿಯರಿಗೆ ಪ್ರತಿ ತಿಂಗಳು ಕಡ್ಡಾಯವಾಗಿ ವೇತನ ನೀಡಬೇಕು. ತರಬೇತಿ ಪಡೆದಿರುವ ಎಲ್ಲರಿಗೂ ಕೆಲಸ ನೀಡಬೇಕು. ಇವರನ್ನು ಗ್ರಾಪಂ ನೌಕರರೆಂದು ಪರಿಗಣಿಸಬೇಕು ಎಂದು ಆಗ್ರಹಿಸಿದರಲ್ಲದೆ ಮುಖ್ಯಮಂತ್ರಿಗಳ ಗಮನ ಸೆಳೆಯಲು ಬೃಹತ್ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಳ್ಳಲಾಗಿದ್ದು, 500 ಕ್ಕೂ ಹೆಚ್ಚು ನೌಕರರು ಭಾಗವಹಿಸಲಿದ್ದಾರೆ ಎಂದರು.

ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘದ ಮೈಸೂರು ಜಿಲ್ಲಾಧ್ಯಕ್ಷ ಕೆ.ಬಸವರಾಜು, ಕಾರ್ಯದರ್ಶಿ ದಿನೇಶ್, ಮಂಡ್ಯ ಜಿಲ್ಲಾ ಅಧ್ಯಕ್ಷ ಎಂ.ಎಂ. ಶಿವಕುಮಾರ್, ಕೊಡಗು ಜಿಲ್ಲಾ ಅಧ್ಯಕ್ಷ ಭರತ್, ಹಾಸನ ಜಿಲ್ಲೆಯ ಕುಮಾರ್, ಮಹಿಳಾ ಉಪಾಧ್ಯಕ್ಷೆ ರೇಖಾ ಉಪಸ್ಥಿತರಿದ್ದರು.

ವೃಕ್ಷಮಾತೆಗೆ ನುಡಿನಮನ



'ಮಾರ್ನಿಂಗ್ ವಾಕರ್ಸ್ ಅಸೋಸಿಯೇಷನ್ ಮಹಾರಾಜ ಕಾಲೇಜು ಮೈಸೂರು' ವತಿಯಿಂದ ವೃಕ್ಷಮಾತೆ ಸಾಲು ಮರದ ತಿಮ್ಮಕ್ಕ ಅವರಿಗೆ ನುಡಿನಮನ ಸಲ್ಲಿಸಲಾಯಿತು. ಈ ವೇಳೆ ಅಸೋಸಿಯೇಷನ್ ಅಧ್ಯಕ್ಷ ಪಿ.ಜಿ.ಚಂದ್ರಶೇಖರ್, ಕಾರ್ಯದರ್ಶಿ ಮಹೇಶ್ ಚಂದ್ರಗುರು, ಖಜಾಂಚಿ ಸಿ.ಎಂ.ಶೆಟ್ಟಿ ಹಾಗೂ ಸದಸ್ಯರು ಉಪಸ್ಥಿತರಿದ್ದರು.

ವಿಶ್ವ ಪರಂಪರೆ ಸಪ್ತಾಹದ ಹಿನ್ನೆಲೆ

ದೊಡ್ಡಾಲತ್ತೂರು ಪ್ರಾಚ್ಯ ವಸ್ತುಗಳ ಪ್ರದರ್ಶನ

ಮೈಸೂರು, ನ.25(ಎಂಕೆ)–ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದಲ್ಲಿ ಮಿಥಿಕ್ ಸೊಸೈಟಿ ಸಹಯೋಗದೊಂದಿಗೆ ವಿಶ್ವ ಪರಂಪರೆ ಸಪ್ತಾಹದ ಅಂಗವಾಗಿ ಹಮ್ಮಿಕೊಂಡಿರುವ ಐದು ದಿನಗಳ 'ದೊಡ್ಡಾಲತ್ತೂರು ಪ್ರಾಚ್ಯವಸ್ತುಗಳ ಪ್ರದರ್ಶನ'ಕ್ಕೆ ಸೋಮವಾರ ಚಾಲನೆ ದೊರೆಯಿತು.

ಚಾಮರಾಜನಗರ ಜಿಲ್ಲೆಯ ಹನೂರು ತಾಲೂಕಿನ ಮಲೆಮಹದೇಶ್ವರ ಬೆಟ್ಟ ಶ್ರೇಣಿಯಲ್ಲಿರುವ ದೊಡ್ಡಾಲತ್ತೂರು ಗ್ರಾಮದಲ್ಲಿ 2024–25ನೇ ಸಾಲಿನಲ್ಲಿ ನಡೆಸಲಾಗಿರುವ ಉತ್ಖನನದಲ್ಲಿ ದೊರೆತ, ಶಿಲಾಯುಗದ ಕಾಲದಲ್ಲಿ ಅಂತ್ಯಕ್ರಿಯೆಗೆ ಬಳಸುತ್ತಿದ್ದ 140 ಸೆಮೀ ಎತ್ತರದ 4 ಮಣ್ಣಿನ ಮಡಿಕೆಗಳು ಹಾಗೂ ಚಿತಾಭಸ್ಮದ ಸ್ಥಳದಲ್ಲಿ ಕಂಡು ಬಂದಿರುವ ಮಡಿಕೆ ಚೂರುಗಳನ್ನು ಪ್ರದರ್ಶನಕ್ಕಿಡಲಾಗಿದೆ.

ಉತ್ಖನನದಲ್ಲಿ ದೊರೆತ ವೃತ್ತಾಕಾರದ ಕಬ್ಬಿಣದ ವಸ್ತುವು ಅತ್ಯಂತ ವಿಶಿಷ್ಟ ಮತ್ತು ವಿಸ್ಮಯಕಾರಿಯಾಗಿದೆ. ಕಬ್ಬಿಣದ ಕೊಡಲಿ, ತುಂಡಾದ ಬಾಣಗಳು ಹಾಗೂ ಎರಡು ಶೂಲವಿರುವ ವಸ್ತುವೊಂದನ್ನು ವೀಕ್ಷಣೆಗೆ ಇಡಲಾಗಿದೆ. ತೊಟ್ಟಿಯಿದ್ದ ಕಲ್ಲುವೃತ್ತ ಸಮಾಧಿ, ಆದಿ ಇತಿಹಾಸ ಕಾಲದ (ಕ್ರಿಪೂ.300 ರಿಂದ ಕ್ರಿ.ಶ.300) ಗುರಾಣಿಯನ್ನು ಕಾಣಬಹುದು. ನಂತರದ ಕಾಲದ ವೀರಗಲ್ಲುಗಳನ್ನು ಸಂರಕ್ಷಣೆ ಮಾಡಿ ಆಸಕ್ತರ ಹಾಗೂ ವಿದ್ಯಾರ್ಥಿಗಳ ವೀಕ್ಷಣೆಗೆ ಅವಕಾಶ ಮಾಡಿಕೊಡಲಾಗಿದೆ.

ಇದಕ್ಕೂ ಮುನ್ನ ನಡೆದ ವೇದಿಕೆ ಕಾರ್ಯಕ್ರಮ ಉದ್ಘಾಟಿಸುವ ಮೂಲಕ ಭಾರತೀಯ ಪುರಾತತ್ವ ಸರ್ವೇಕ್ಷಣೆ ಇಲಾಖೆ ಉತ್ಖನನ ಶಾಖೆ ಅಧೀಕ್ಷಕ ಡಾ.ಆರ್.ಎನ್.ಕುಮಾರನ್, ದೊಡ್ಡಾಲತ್ತೂರು ಪ್ರಾಚ್ಯವಸ್ತುಗಳ ಪ್ರದರ್ಶನಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಮಾನವ ಚರಿತ್ರೆ ಅರಿಯಲು ಉತ್ಖನನ ಪ್ರಕ್ರಿಯೆ ಅತ್ಯಂತ ಅಗತ್ಯವಾಗಿದೆ. ಜನ–ಜೀವನದ ವಾಸ್ತವ ಮಾಹಿತಿ ಲಭ್ಯವಾಗಲು ಶಾಸನ ಮತ್ತು ಸಾಹಿತ್ಯ ಜ್ಞಾನ ಜೊತೆ ಜೊತೆಗೆ ಸಾಗಬೇಕು. ಬಾದಾಮಿ, ಐಹೊಳೆ, ಪಟ್ಟದಕಲ್ಲು ಮುಂತಾದ ವಿಶ್ವ ಪಾರಂಪರಿಕ ಸ್ಥಳಗಳು ಮಾತ್ರವಲ್ಲದೇ ಅನೇಕ ಸ್ಥಳೀಯ ಸ್ಥಳಗಳೂ ಐತಿಹಾಸಿಕ ಮಹತ್ವ ಹೊಂದಿವೆ. ಅವುಗಳನ್ನು ಅರಿತು ಸಂಶೋಧಿಸುವ ಅಗತ್ಯವಿದೆ. ಆಧುನಿಕ ಜಿಪಿಎಸ್, ಸರ್ವೆ, ಸ್ಥಳೀಯ ಜನರ ಮಾಹಿತಿಗಳು ಉತ್ಖನನ ಜಾಗವನ್ನು ಆಯ್ದುಕೊಳ್ಳುವಲ್ಲಿ ಸಹಾಯ ಮಾಡುತ್ತವೆ ಎಂದರು.

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಮಾತನಾಡಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಕ್ಕೆ ಆಸಕ್ತಿ ಹಾಗೂ ಕುತೂಹಲ ಬಹಳಮುಖ್ಯ. ಹಿಂದಿನ ಸಮಾಜ ಹೇಗಿತ್ತು, ಮುಂದೆ ಹೇಗಿರಬೇಕು ಎಂಬುದನ್ನು ಅರಿಯಲು ಪ್ರಾಚೀನ ಇತಿಹಾಸ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ 32 ಕೋಟಿ ರೂ.ವೆಚ್ಚದಲ್ಲಿ ಜಾನಪದ ಅಧ್ಯಯನ ವಿಭಾಗದ ವಸ್ತುಗಳ ಸಂಗ್ರಹ, ಪ್ರದರ್ಶನಕ್ಕೆ ವ್ಯವಸ್ಥೆ ಮಾಡಲಾಗುತ್ತಿದೆ. ಅದರಂತೆ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದಲ್ಲಿಯೂ ಉತ್ಖನನದಿಂದ ದೊರೆತ ವಸ್ತುಗಳ ಪ್ರದರ್ಶನಕ್ಕೆ ವ್ಯವಸ್ಥೆಯಾಗಬೇಕಿದೆ. ಇದಕ್ಕಾಗಿ ಆಸಕ್ತರು ಸಹಕರಿಸಬೇಕು ಎಂದು ಹೇಳಿದರು.

ನಮ್ಮದು ಪುರಾತನ ಸಂಸ್ಕೃತಿ: ಮಿಥಿಕ್ ಸೊಸೈಟಿ ಅಧ್ಯಕ್ಷ ವಿ.ನಾಗರಾಜ್ ಮಾತನಾಡಿ, ಉತ್ಖನನಗಳು ಅಥವಾ ಪ್ರಾಚ್ಯ ವಸ್ತುಗಳ ಅಧ್ಯಯನಗಳು ದೇಶದ ಸಮಗ್ರತೆಗೆ ಅಗತ್ಯ ವಾತಾವರಣ ಕಲ್ಪಿಸುತ್ತವೆ. ಲಿಪಿಗಳ ಕುರಿತ ಅಧ್ಯಯನವು ಎಲ್ಲದರ ಮೂಲ ಬ್ರಾಹ್ಮಿ ಲಿಪಿ ಎಂಬುದನ್ನು ತಿಳಿಸಿ ಐಕ್ಯತೆ ಮೂಡಿಸಿದೆ. ಪ್ರಪಂಚದಲ್ಲಿಯೇ ನಮ್ಮದು ಅತ್ಯಂತ ಪುರಾತನ ಸಂಸ್ಕೃತಿ ಮತ್ತು ಪರಂಪರೆಯಾಗಿದ್ದು, ನಿರಂತರತೆಯನ್ನೂ ಹೊಂದಿದೆ ಎಂದರು.

ಮೈಸೂರು ವಿವಿ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ನಿರ್ದೇಶಕರಾದ ಡಾ.ವಿ. ಶೋಭಾ, ಮಿಥಿಕ್ ಸೊಸೈಟಿ ಕಾರ್ಯದರ್ಶಿ ಡಾ.ಎಸ್.ರವಿ ಮತ್ತಿತರರಿದ್ದರು.

ಅಪರೂಪದ ಶೋಧನೆ....!

ದೊಡ್ಡಾಲತ್ತೂರು ಪ್ರಾಚ್ಯ ವಸ್ತುಗಳಲ್ಲಿ ತ್ರಿಶೂಲ, ಗುರಾಣಿಗಳು ದೊರೆತಿರುವುದು ಬಹಳ ಅಪರೂಪದ ಶೋಧನೆಯಾಗಿದೆ. ದೊಡ್ಡ ಮಡಿಕೆಗಳಲ್ಲಿ ಶವ ಅಥವಾ ಅಸ್ಥಿಯನ್ನು ತುಂಬಿಸಿಡುವ ಪ್ರಕ್ರಿಯೆಯೂ ಭಿನ್ನ. ಇಂಥ ಉತ್ಖನನಗಳು ಚರಿತ್ರೆಕಾರರಿಗೆ ಹೊಸ ಹೊಳವು ನೀಡುತ್ತದೆ. ಜ್ಞಾನ ವಿಸ್ತರಿಸುತ್ತದೆ.

– ಡಾ.ಆರ್.ಎನ್.ಕುಮಾರನ್, ಅಧೀಕ್ಷಕ(ಉತ್ಖನನ ಶಾಖೆ), ಭಾರತೀಯ ಪುರಾತತ್ವ ಸರ್ವೇಕ್ಷಣೆ ಇಲಾಖೆ



ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದಲ್ಲಿ ಐದು ದಿನಗಳ 'ದೊಡ್ಡಾಲತ್ತೂರು ಪ್ರಾಚ್ಯವಸ್ತುಗಳ ಪ್ರದರ್ಶನ'ಕ್ಕೆ ಸೋಮವಾರ ಚಾಲನೆ ದೊರೆಯಿತು.

ಮೈಸೂರು ಚಳಿಗಾಲದ ರೇಸ್

2ನೇ ದಿನ, ಬುಧವಾರ, 26–11–2025

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ

I. ಗೋಣಿಕೊಪ್ಪ ಪ್ಲೇಟ್–1200 ಮೀ. ರೇಟೆಡ್ 00 ರಿಂದ 25. ಮ.2.00ಕ್ಕೆ
1. ಡೇವಿಡ್ಸ್ ಡಿಲೈಟ್ 2. ಸರ್ವೋತ್ತಮ

II. ಪಾಂಡವಪುರ ಪ್ಲೇಟ್ –1400 ಮೀ. ರೇಟೆಡ್ 00 ರಿಂದ 25. ಮ.2.30ಕ್ಕೆ
1. ಪೆಟ್ಟಿಸ್ ಚಾಯ್ಸ್ 2. ಬೇಸಿಕ್ ಇನ್‌ಸ್ಟಿಕ್ಟ್

III ಟ್ರೆಷರ್ಸ್‌ನೆಸ್ಟ್ ಪ್ಲೇಟ್–1100 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1. ಮೇ ಬರಿ 2. ಅರಿಕಟ್ಟು

IV. ಕಾಕನಕೋಟೆ ಪ್ಲೇಟ್ ಡಿII –1400 ಮೀ. ರೇಟೆಡ್ 40 ರಿಂದ 65. ಮ.3.30ಕ್ಕೆ
1. ಸಫಿಯಂಟ್ 2. ಗೋಲ್ಡನ್ ಬರ್ಡ್

V. Dr. M.N. ದೊರೆಸ್ವಾಮಿ ಮೆಮೋರಿಯಲ್ ಟ್ರೋಫಿ–1200 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಸಂ.4.00ಕ್ಕೆ
1. ವಿಂಟರ್ ಅಜೆಂಡ 2. ಗ್ರಿಜ್ಲಿ

VI. ಮಾನಸಗಂಗೋತ್ರಿ ಪ್ಲೇಟ್–1600 ಮೀ. ರೇಟೆಡ್ 20 ರಿಂದ 45. ಸಂ.4.30ಕ್ಕೆ
1. ಟೈಗರ್ ಕಿಂಗ್ 2. ದೇವತೆ

VII. ಕಾಕನಕೋಟೆ ಪ್ಲೇಟ್ ಡಿI –1400 ಮೀ. ರೇಟೆಡ್ 40 ರಿಂದ 65. ಮ.5.00ಕ್ಕೆ
1. ಸ್ಕ್ವೇರ್‌ಕಟ್ 2. ಕ್ಲೌಡಿ ಹಿಲ್ಸ್

ದಿನದ ಅತ್ಯುತ್ತಮ	ಸಫಿಯಂಟ್
ಡಬ್ಬಲ್	ಮೇ ಬರಿ, ಟೈಗರ್ ಕಿಂಗ್
ಜಾಕ್‌ಪಾಟ್	3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	4, 5, 6 ಮತ್ತು 7
I ಟ್ರೆಬಲ್	2, 3 ಮತ್ತು 4
II ಟ್ರೆಬಲ್	5, 6, ಮತ್ತು 7
ಎಕ್ಸ್‌ಆಕ್ಟ್	1 ರಿಂದ 7

ಟಿಪ್‌ಸ್ಟರ್ ಪಿಜಿಸಿ

ಮೂರನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಲಕ್ಷ್ಮಮ್ಮ W/o
ಎಲ್. ರಾಮಯ್ಯ (ಕಡ್ಲೆ ಅಂಗಡಿ)
ನಿಮ್ಮ ಸವಿನೆನಪು ಹೃದಯಾಂತರಾಳದಲ್ಲಿ ಅಚ್ಚಳಿಯದೆ ಉಳಿದಿದೆ
ಸದಾ ನಿಮ್ಮ ನೆನಪಿನಲ್ಲಿರುವ
ಎಲ್. ರಾಮಯ್ಯ(ಕಡ್ಲೆ ಅಂಗಡಿ) & ಕುಟುಂಬ ವರ್ಗ

COMMERCIAL BUILDING FOR SALE

@ Nanjumalige
30 x 35
Call: 94809 88340

Kumuda Spa

AVAIL KUMUDA SPA'S COMPLIMENTARY CHRISTMAS & NEW YEAR OFFERS

Complimentary Pedicure or Haircut and blow dry for 90 MIN MASSAGE.
Complimentary Foot massage for HAIRSPA.
Complimentary Foot or Head massage for FACIAL.
Complimentary Clean up for Ladies Full BODY WAXING.
0821-4193567
9632769550

ದಾನಪತ್ರ ಕಳೆದಿದೆ

ಚಾಮರಾಜನಗರ ತಾಲ್ಲೂಕು, ಹರವೆ ಹೋಬಳಿ, ಉಗನೇದಹುಂಡಿ ಗ್ರಾಮದ ನಿವಾಸಿ ಲೇ.ಶಿವಪ್ಪನವರ ಪುತ್ರ ರಾಜಪ್ಪ ಆದ ನನಗೆ ನನ್ನ ತಾಯಿ ದೇವೀರಮ್ಮ ದಾನ ಪತ್ರದ ಮೂಲಕ ಬರೆದುಕೊಟ್ಟ ಸ.ನಂ.229/12 ವಿಸ್ತೀರ್ಣ 01.08 ಗುಂಟೆ ಜಮೀನಿನ ದಾನಪತ್ರ ಕಳೆದುಹೋಗಿದ್ದು, ಈ ಪತ್ರ ಸಿಕ್ಕಿದ್ದಲ್ಲಿ
8217683133
ಗೆ ಕರೆಮಾಡಿ ತಲುಪಿಸಬೇಕೆಂದು ವಿನಂತಿಸುತ್ತೇನೆ.

ಹಸಿರು ನಮ್ಮ ಉಸಿರು

15ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 15 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ, ಪತ್ನಿ ಶಾಂತಿ, ಮಕ್ಕಳಾದ ಅರುಣ್ ಕುಮಾರ್, ದಿವ್ಯ, ದೀಪಿಕಾ, ಸೊಸೆ ಗಾಯತ್ರಿ, ಅಳಿಯಂದಿರಾದ ಮಹೇಶ್, ವಿನೋದ್ ಕುಮಾರ್ ಮತ್ತು ಕುಟುಂಬಸ್ಥರು ಮೀನುಪೇಟೆ, ವಿರಾಜಪೇಟೆ.
ನಿಧನ: 26.11.2011
ಹೆಚ್.ಎಸ್.ಕುಮಾರ
ಪೌರ ಕಾರ್ಮಿಕರು, ವಿರಾಜಪೇಟೆ

ಬೇಕಾಗಿದ್ದಾರೆ

ಮೈಸೂರಿನ ಪ್ರತಿಷ್ಠಿತ ಕಂಪನಿಯಲ್ಲಿ ಪೆಸ್ಟ್ ಕಂಟ್ರೋಲ್ ಮಾಡಲು ನುರಿತ ಅನುಭವವುಳ್ಳ ಪುರುಷರು ಬೇಕಾಗಿದ್ದಾರೆ. ಸ್ವಯಂ ಪರವಾನಗಿ ಹೊಂದಿರಬೇಕು. ಆಕರ್ಷಕ ವೇತನ ನೀಡಲಾಗುವುದು
9606034132
9972604671

3ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಚನ್ನಬಸಪ್ಪರವರು
ಜ್ಯೋತಿಗೌಡನಪುರ, ಚಂದಕವಾಡಿ ಹೋ, ಚಾಮರಾಜನಗರ, ತಾ|| ಜಿ||
ನಿಧನ: 26.11.2022 (ಲೇ|| ನಂಜುಂಡಪ್ಪರವರ ಮಗ)
ನೀವು ನಮ್ಮನ್ನಗಲಿ ಇಂದಿಗೆ 3 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ
ದುಃಖತಪ್ತರು: ಡಾ|| ಯಮುನ ಮತ್ತು ಡಾ|| ಜೆ.ಸಿ.ನಾಗೇಂದ್ರ
ಶ್ರೀಮತಿ ರತ್ನ ಮತ್ತು ಶ್ರೀ ಜೆ.ಸಿ. ನಂಜುಂಡಸ್ವಾಮಿ, ಶ್ರೀಮತಿ ಮಹದೇವಮ್ಮ ಮತ್ತು ಶ್ರೀ ಸುಬ್ಬಣ್ಣ ಮೊಮ್ಮಕ್ಕಳು, ಕುಟುಂಬವರ್ಗದವರು ಹಾಗೂ ಬಂಧುಮಿತ್ರರು.

HOUSE FOR SALE IN GATED- COMMUNITY

As Per Your Requirement
Architect Designed Near St, Joseph School, Mysore
20x40 @ 38.8 lakhs
30x50 @ 72.5 lakhs
8123387555
7259348777

ಸೈಟ್‌ಗಳು ಮಾರಾಟಕ್ಕಿವೆ

ಮೈಸೂರು–ಮಡಿಕೇರಿ ಹೈವೇಯಿಂದ ಕೇವಲ 5 ನಿಮಿಷಗಳು ಮಾತ್ರ, ಬಿಳಿಕೆರೆ ಹತ್ತಿರ, ಪ್ರಸ್ತಾವನೆಯಲ್ಲಿರುವ 80ಅಡಿ ರಸ್ತೆಗೆ ಹೊಂದಿಕೊಂಡಂತೆ 30x50 ಮತ್ತು corner ಹಾಗೂ Commercial plot ಗಳು ದೊರೆಯುತ್ತದೆ
91646 54494
96323 45373

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

Aquaguard & Kent Water Purifier

Sales & Service
9901200444
#319, Near Mega Medical Store, Kuvempunagar





BUY FARMLAND/ VILLA PLOT IN MYSURU

@ 500/-SQ FT
CALL : 9845771177 / 9611872198
www.prathamiinfra.com

G9 projects ನವೆಂಬರ್ ಹಬ್ಬ

Vee2 Developers
ಧನ್ಯಮಾದಗಳ್ಳಿ ಕೇ.40 ರಸ್ತೆ ಮಾರಾಟ
ಪೂರ್ವ ಶೆಲ್ಟರ್ಸ್
20×30 | 30×40 20×40 | 30×50
30 - 11 - 2025 ಆಫರ್ ಕೊನೆಗೊಳ್ಳುತ್ತದೆ
8088-707-707

ಇಂಪೀರಿಯಲ್ ಸಿಟಿ

ಮೆಗಾ ರೆಸಿಡೆನ್ಶಿಯಲ್ ವಿಲ್ಲಾ ಟೌನ್‌ಶಿಪ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು
MUDA LIMITS
ಇಲವಾಲ ಸ್ಯಾಟ್‌ಲೈಟ್ ಬಸ್ ನಿಲ್ದಾಣದಿಂದ ಕೇವಲ 4 ಕೀ.ಮೀ
ಬುಕಿಂಗ್ ಪ್ರಾರಂಭವಾಗಿದೆ
ಕೇವಲ ₹749/ ಪ್ರತಿ ಚದರ ಅಡಿ
ಸುಲಭ 4 ಕಂತುಗಳ ಸೌಲಭ್ಯವಿದೆ
30x40 | 30x50 | 40x60 | 50x80
ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು
ಹೈಲ್ಯಾಂಡ್ ಪ್ರಾಪರ್ಟೀಸ್
ಕಾಳಿದಾಸ ರಸ್ತೆ, ವಿಜಯನಗರ 1ನೇ ಹಂತ, ಮೈಸೂರು
88840 71010
90713 86615

ಅಡುಗೆಯವರು ಬೇಕಾಗಿದ್ದಾರೆ

ಮೈಸೂರಿನಲ್ಲಿರುವ ಖಾಸಗಿ ಸಂಸ್ಥೆಯೊಂದರ 15 ಮಂದಿಗೆ ಮೂರು ಹೊತ್ತು ಶುಚಿಯಾಗಿ ಮತ್ತು ರುಚಿಯಾಗಿ ಅಡುಗೆ ಮಾಡಲು ಅನುಭವವುಳ್ಳ ಸಸ್ಯಾಹಾರಿ ಅಡುಗೆ ಕೆಲಸದವರು – 1 ಹುದ್ದೆ Female ಬೇಕಾಗಿದ್ದಾರೆ. ಆಕರ್ಷಕ ವೇತನವನ್ನು ನೀಡಲಾಗುವುದು.
ಆಸಕ್ತರು ಕೂಡಲೆ ಸಂಪರ್ಕಿಸಿ : 96068 00110

30ನೇ ವರ್ಷದ ಸವಿನೆನಪು



ಅಲೆಗ್ಸಾಂಡರ್
ತಂದೆ ಎಂತಹ ಶ್ರೇಷ್ಠ ವ್ಯಕ್ತಿ ಎಂದರೆ ಅವರು ಪಟ್ಟಿರುವ ಕಷ್ಟದ ಬೆವರಿನ ಒಂದು ಹನಿಯ ಬೆಲೆಯನ್ನು ಕೂಡ ಮಕ್ಕಳಿಂದ ತೀರಿಸಲು ಸಾಧ್ಯವಿಲ್ಲ
ಸದಾ ನಿಮ್ಮ ನೆನಪಿನಲ್ಲಿರುವ
ನಿಮ್ಮ ಮಕ್ಕಳು

OFFICE SPACE AVAILABLE FOR RENT

at Gokulam, 3rd Stage, near Vidyavardhaka College of Engineering, Mysore.
SUITABLE FOR :
Office Space (Ground + 2 Floors)
Land Area - 7,103 Sq.feet
Built - up area : 20,000 Sq.feet
Call : 98452 21621 / 99160 90352 / 98807 07200

100% TEAK WOOD

FACTORY FINISH DOORS & WINDOWS
@ FACTORY DEPOT RATES
10 YEARS WARRANTY
9731591267
9901291267

ಅಡುಗೆ ಕೆಲಸಕ್ಕೆ

ಬ್ರಾಹ್ಮಣ ಅಡುಗೆಯವರು ಬೇಕಾಗಿದ್ದಾರೆ. ಗಂಡ, ಹೆಂಡತಿ, ಮಕ್ಕಳಿಗೆ ಊಟ, ವಸತಿ, ಸಂಬಳ, ಮಕ್ಕಳಿದ್ದರೆ ಅವರಿಗೆ ವಿದ್ಯಾಭ್ಯಾಸ ಇಷ್ಟು ಕೊಡಲಾಗುವುದು. ಸಂಪರ್ಕಿಸಿ
ಆಫೀಸ್ ನಂ 9889698826

ಮಾರಾಟಕ್ಕಿದೆ

ಕುಶಾಲನಗರದ ಬಳಿ ಇರುವ ಬೈಲುಕೊಪ್ಪದಲ್ಲಿ 5 ಎಕರೆ 9 ಗುಂಟೆ ಜಮೀನು ಮಾರಾಟಕ್ಕೆ ಇದೆ ಸುತ್ತಲೂ ಫೆನ್ಸ್ ಹಾಕಲಾಗಿದೆ, ಒಳ್ಳೆ ನೀರಿನ ವ್ಯವಸ್ಥೆ ಇದೆ, ಲೇಔಟ್, ರೆಸಾರ್ಟ್, ಹೋಮ್ ಸ್ಟೇ, ಕಾಫಿ ಎಸ್ಟೇಟ್, ಮಾಡಲು ಒಳ್ಳೆ ಜಾಗ ಆಸಕ್ತಿ ಉಳ್ಳವರು ಕರೆಮಾಡಿ. ಕಮಿಷನ್ ಅನ್ವಯವಾಗುತ್ತದೆ.
9900846129

ಜಿಲ್ಲಾ ನಗರಾಭಿವೃದ್ಧಿ ಕೋಶ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆ, ಮೈಸೂರು.
Ph: 0821-2424070 E.mail: dudc_mys@yahoo.co.in
ಸಂ: ಮುನಿಸಿ(1)ಸಿಬ್ಬಂದಿ/ಇ–1347520/2025–26 ದಿ: 07.11.2025

ಅಧಿಸೂಚನೆ

ಮೈಸೂರು ಜಿಲ್ಲೆಯ ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿಗಳಲ್ಲಿ ಖಾಲಿ ಇರುವ ಪೌರಕಾರ್ಮಿಕ ಹುದ್ದೆಗಳನ್ನು ವಿಶೇಷ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಮೈಸೂರು ಜಿಲ್ಲೆಯ ಈ ಕೆಳಕಂಡ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೇರ ನೇಮಕಾತಿಯಡಿಯಲ್ಲಿ ಖಾಲಿ ಇರುವ ಪೌರಕಾರ್ಮಿಕರ ಹುದ್ದೆಗಳಿಗೆ ನೇಮಕಾತಿ ಮಾಡಲು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೇರಪಾವತಿ, ಕ್ಷೇಮಾಭಿವೃದ್ಧಿ ಪೌರಕಾರ್ಮಿಕ ಅಥವಾ ದಿನಗೂಲಿ ಅಥವಾ ಗುತ್ತಿಗೆ ಅಥವಾ ಸಮಾನ ಕೆಲಸ ಸಮಾನ ವೇತನ ಅಥವಾ ಹೊರಗುತ್ತಿಗೆ ಅಥವಾ ಲೋಡರ್ಸ್ ಅಥವಾ ಕ್ಲೀನರ್ (18 ರಿಂದ 55ರ ವಯೋಮಿತಿಯೊಳಗಿರುವವರು) ಆಧಾರದಲ್ಲಿ 2017ರ ಪೂರ್ವದಲ್ಲಿ ನೇಮಕಾತಿ ಹೊಂದಿ ಪ್ರಸ್ತುತ ನೇರ ಪಾವತಿಯಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರು ಅರ್ಜಿಯನ್ನು ಆಯಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪಡೆದು ದಾಖಲಾತಿಯೊಂದಿಗೆ ಈ ಕೆಳಕಂಡಂತೆ ದಿನಾಂಕದೊಳಗೆ ಆಯಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಪ್ರಾರಂಭಿಕ ದಿ: 15.11.2025 ಅರ್ಜಿ ಸಲ್ಲಿಸಲು ಕೊನೆಯ ದಿ: 30.12.2025 **ಅರ್ಜಿ ನಮೂನೆ ಪಡೆಯುವ ವಿಳಾಸ:** ಸಂಬಂಧಿಸಿದ ಮೈಸೂರು ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ.

ಹೆಚ್ಚಿನ ಮಾಹಿತಿಯನ್ನು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮತ್ತು ಜಿಲ್ಲಾ ನಗರಾಭಿವೃದ್ಧಿ ಕೋಶ ಮೈಸೂರು ಜಿಲ್ಲೆ, ಮೈಸೂರು ಇಲ್ಲಿ ಪಡೆಯಬಹುದಾಗಿರುತ್ತದೆ. (ನೇಮಕಾತಿಯ ಪೂರ್ಣ ಷರತ್ತು ಹಾಗೂ ನಿಯಮಗಳನ್ನು ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ನಾಮಫಲಕದಲ್ಲಿ ಪ್ರಚುರಪಡಿಸಲಾಗಿರುತ್ತದೆ).

ಕ್ರ. ಸಂ	ನಗರ ಸ್ಥಳೀಯ ಸಂಸ್ಥೆಗಳ ಹೆಸರು	ನೇರ ನೇಮಕಾತಿ ಪೌರಕಾರ್ಮಿಕರ ಹುದ್ದೆಗಳ ಸಂಖ್ಯೆ
1	ನಂಜನಗೂಡು ನಗರಸಭೆ	4
2	ಹುಣಸೂರು ನಗರಸಭೆ	6
3	ಹೂಟಗಳ್ಳಿ ನಗರಸಭೆ	6
4	ಕೆ.ಆರ್.ನಗರ ಪುರಸಭೆ	3
5	ಪಿರಿಯಾಪಟ್ಟಣ ಪುರಸಭೆ	3
6	ಹೆಚ್.ಡಿ.ಕೋಟೆ ಪುರಸಭೆ	3
7	ತಿ.ನರಸೀಪುರ ಪುರಸಭೆ	3
8	ಬನ್ನೂರು ಪುರಸಭೆ	3
9	ಸರಗೂರು ಪಟ್ಟಣ ಪಂಚಾಯಿತಿ	3
10	ಕಡಕೊಳ ಪಟ್ಟಣ ಪಂಚಾಯಿತಿ	3
11	ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ	3
12	ಶ್ರೀರಾಂಪುರ ಪಟ್ಟಣ ಪಂಚಾಯಿತಿ	3
13	ಬೋಗಾದಿ ಪಟ್ಟಣ ಪಂಚಾಯಿತಿ	3
	ಒಟ್ಟು	46

ಸಹಿ/– ಅಧ್ಯಕ್ಷರು, ಆಯ್ಕೆ ಮತ್ತು ನೇರ ನೇಮಕಾತಿ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆ.
DIPR/DDMYS/1274/KSMCA/714/2025-26



ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು